ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ

ಸಂಪುಟ 1 ಸಂಚಿಕೆ 22

ಅಕ್ಟೋಬರ್ 28, 2007

ಕನ್ನಡ ವಾರಪತ್ರಿಕೆ

ರೂ. 5/-

ಪೇಜ್ 8




ಧರೆ ಹತ್ತಿ ಉರಿದೊಡೆ?



ರಾಜ್ಯಪಾಲರದೇನು ದರ್ಬಾರು !

ಪೇಜ್ 3



ದತ್ತಮಾಲೆ ಹಿಡಿದ ವಿಧ್ವಂಸಕರು

ಪೇಜ್ 5



ಹಳಿ ಹತ್ತದ ರೈಲ್ವೆ ಅಭಿವೃದ್ಧಿ

ಇರಾಕ್‌ನಲ್ಲಿ ಬ್ಲಾಕ್ ವಾಟರ್ ಹಗರಣ

ಪಶ್ಚಿಮ ಬಂಗಾಳ : ಆಹಾರ ಧಾನ್ಯಗಳ ಲೂಟಿಯಲ್ಲಿ ಬಿಜೆಪಿ

ಚುಚ್ಚುಮದ್ದು

'ಅಧಿಕಾರದ ಆಸೆಯಿಂದ ಬಿಜೆಪಿ ತೊರೆದು ಹೊರಡಲು ತಾವು ಹಿಂದೆ ನಿರ್ಧರಿಸಿದ್ದು ತಮ್ಮ ಜೀವನದಲ್ಲಿ ಮಾಡಿದ ಅಕ್ಷಮ್ಯ ಅಪರಾಧ'.

- ಬಿ.ಎಸ್.ಯಡಿಯೂರಪ್ಪ

➤ ಈಗ ಇಲ್ಲಿದ್ದೆ ಸಿಗುತ್ತದೆ ಅನಿಸುತ್ತಿದೆಯಾ?

★

ರಾಜಕೀಯ ಅಜೆಂಡಾ

'ಪಶ್ಚಿಮ ಬಂಗಾಳದಿಂದ ಬಾಂಗ್ಲಾದೇಶಕ್ಕೆ ಪಡಿತರ ಆಹಾರವನ್ನು ರವಾನಿಸುತ್ತಿರುವ ಬಗ್ಗೆ ದೂರುಗಳಿವೆ. ರಾಜ್ಯ ಸರ್ಕಾರ ಎಚ್ಚರಿಕೆ ವಹಿಸಬೇಕಾಗಿದೆ. ಇದರ ಹಿಂದಿನ ರಾಜಕೀಯ ಅಜೆಂಡಾ ಬಗ್ಗೆ ಗೊತ್ತಿಲ್ಲ. ಆದರೆ ಜನರಲ್ಲಿ ಈ ಬಗ್ಗೆ ಖಂಡಿತವಾಗಿಯೂ ಸಿಟ್ಟಿದೆ'

ಶರದ್ ಪವಾರ್
ಕೇಂದ್ರ ಕೃಷಿ ಸಚಿವ

★

'ಬಾಂಗ್ಲಾದೇಶಕ್ಕೆ ಆಹಾರವನ್ನು ರವಾನಿಸಲಾಗುತ್ತಿದೆ. ಎನ್ನುವ ವಿಚಾರದಲ್ಲಿ ಯಾವುದೇ ಪ್ರಕರಣವನ್ನು ನಮ್ಮ ಗಮನ ತರಲಾಗಿಲ್ಲ. ಇಂತಹದ್ದೇನಾದರೂ ಇದ್ದಿದ್ದರೆ ಕೇಂದ್ರ ಸರ್ಕಾರದ ಅಧೀನದಲ್ಲೇ ಇರುವ ಗಡಿ ಭದ್ರತಾ ಪಡೆಗಳು ನಮ್ಮ ಗಮನಕ್ಕೆ ಈಗಾಗಲೇ ತಂದಿರಬೇಕಿತ್ತು.'

ಪ್ರದೇಶ ಅಧಿಕಾರಿ, ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ ಮಂತ್ರಿ,
ಪಶ್ಚಿಮ ಬಂಗಾಳ

★

ಚಳ್ಳೆ ಹಣ್ಣು?

(ಎಡಪಕ್ಷಗಳ) ಬರಿ ಅವರತ್ತೆರಡು ಜನ ಇಂಥ ಎಡವಟ್ಟು ಎಂ.ಪಿ.ಗಳು ಈಗ ಯುಪಿಎ ಸರ್ಕಾರ ಕೇಂದ್ರದಲ್ಲಿ ಅಧಿಕಾರ 'ಗ್ರಹಣ' ಮಾಡಿದಂದಿನಿಂದ, ಉಳಿದ ಆ ಘಟಬಂಧನದ ಘಟಾನುಘಟಿಗಳಿಗೆ ಚಳ್ಳೆ ಹಣ್ಣು ತಿನ್ನಿಸುತ್ತಾ, ಜವಾಬ್ದಾರಿಯಿಲ್ಲದೆ ಅಧಿಕಾರಿ ಚಲಾಯಿಸುತ್ತಿದ್ದಾರೆ'

ಕೆ.ಎಸ್.ನಾರಾಯಣಾಚಾರ್ಯ
ಸಂಯುಕ್ತ ಕರ್ನಾಟಕದ 'ಅಂತರಂಗ ಧ್ವನಿ' ಅಂಕಣದಲ್ಲಿ

➤ ಹೌದು ಹೌದು. ಬೆಲೆ ಏರಿಕೆ ತಡೆಗಟ್ಟಿ .... ಪಡಿತರ ಸರಿಯಾಗಿ ಹಂಚಿ.... ಕೃಷಿಗೆ ಹೆಚ್ಚು ಹಣ ನೀಡಿ.... ಉದ್ಯೋಗ ಖಾತ್ರಿ ಯೋಜನೆ ಜಾರಿಗೆ ತನ್ನಿ..... ಅಮೇರಿಕಾಕ್ಕೆ ದೇಶ ಒತ್ತೆ ಇಡಬೇಡಿ... ಓಹೋ ಏನು ಒಂದೇ ಎರಡೇ ಇವರ ಆಗ್ರಹ.... ಅತಿಯಾಯ್ತು ಇವರು ಚಲಾಯಿಸುತ್ತಿರುವ ಅಧಿಕಾರ.

★

ಏನಿದು ವರಸೆ?

'ಭಾರತ ಮತ್ತು ಅಮೇರಿಕಾದ ನಡುವೆ ಆಗಿರುವ ನಾಗರೀಕ ಬಳಕೆಯ ಪರಮಾಣು ಒಪ್ಪಂದವನ್ನು ಜಾರಿ ಮಾಡಲು ಕೆಲವು ಸಮಸ್ಯೆಗಳು ಎದುರಾಗಿವೆ'

- ಪ್ರಧಾನಿ ಮನಮೋಹನಸಿಂಗ್
ಅಮೇರಿಕಾದ ಅಧ್ಯಕ್ಷ ಜಾರ್ಜ್‌ಬುಷ್‌ಗೆ ಫೋನಿನಲ್ಲಿ

★

'ಈಗಾಗಲೇ ನಿಗದಿಯಾಗಿರುವ ಸಮಯದೊಳಗೆ (2008ರೊಳಗೆ) ಒಪ್ಪಂದ ಜಾರಿಯಾಗುವ ವಿಶ್ವಾಸವಿದೆ. ಒಪ್ಪಂದದ ನಿಯಮಾವಳಿಗಳನ್ನು ಪೂರೈಸಲು ಅಮೇರಿಕಾ ತನ್ನ ಕೆಲಸ ಮುಂದುವರಿಸಲಿದೆ. ಒಪ್ಪಂದ ಮುರಿದು ಬಿದ್ದಿಲ್ಲ'

ಟಾಮ್ ಕೆಸೇ
ಅಮೇರಿಕಾ ವಿದೇಶಾಂಗ ಇಲಾಖೆಯ ಉಪ ವಕ್ತಾರ

★

'ಭಾರತ-ಅಮೇರಿಕಾ ಪರಮಾಣು ಒಪ್ಪಂದ ಜಾರಿಯಲ್ಲಿ ಮಾರ್ಕ್ಸ್‌ವಾದಿಗಳ ಬೆದರಿಕೆಗೆ ಕಾಂಗ್ರೆಸ್ ಶರಣಾಗಬಾರದು'.

ಮಮತಾ ಬ್ಯಾನರ್ಜಿ, ತೃಣಮೂಲ ಕಾಂಗ್ರೆಸ್ ನಾಯಕಿ

➤ ಯಾಕಮ್ಮ ಭಾರತವನ್ನು ಅಮೇರಿಕಾಕ್ಕೆ ಒತ್ತಿ ಇಡಲು ಅವ್ರು ಜೊತೆ ನೀನೇನಾದ್ರೂ ಒಪ್ಪಂದ ಮಾಡ್ಕೊಂಡ್ದಿಯಾ.

★

ಜೆಡಿ(ಎಸ್)ಗೆ ಬಿಜೆಪಿ ಬಾಗಿಲು ಬಂದ್?

'ಚುನಾವಣೆಗೆ ಹೋಗಲು ಬಿಜೆಪಿ ಸನ್ನದ್ಧವಾಗಿದ್ದು, ಜೆಡಿ(ಎಸ್) ಶಾಸಕರು ದೇವೇಗೌಡರು ಹೊರಗಿಟ್ಟು ಮರುಮೈತ್ರಿಗೆ ಬಂದರೂ ಮಾತುಕತೆ ಸಾಧ್ಯತೆ 'ಇಲ್ಲ'

- ಬಿ.ಎಸ್.ಯಡಿಯೂರಪ್ಪ

➤ ಎದೆ ಮುಟ್ಟಿಕೊಂಡು ಇನ್ನೊಂದು ಸಾರಿ ಹೇಳಿ ಯಡಿಯೂರಪ್ಪನವರೇ.

★

'ರಾಜ್ಯಪಾಲರು ಅನುಮತಿ ನೀಡದಿದ್ದರೂ ದತ್ತಪೀಠದಲ್ಲಿ ಹಿಂದೂ ಧಾರ್ಮಿಕ ವಿಧಿಯಂತೆ ಪೂಜೆ-ಹೋಮ ಹವನ ನಡೆಯಲಿದೆ'

ಸಿ.ಟಿ.ರವಿ, ಬಿಜೆಪಿ ಮುಖಂಡ

➤ ಅಧಿಕಾರದಲ್ಲಿದ್ದರೆ ಒಂದು ಧರ ಕಿಡಿಗೇಡಿತನ, ಇಲ್ಲದಿದ್ದರೆ ಇನ್ನೊಂದು ಧರದ ಕಿಡಿಗೇಡಿತನ

ನನ್ನ ಮಾತು....

ನಾನು ಕಾಯುತ್ತಿದ್ದೇನೆ.....

ಖ್ಯಾತ ಚುಟುಕು ಕವಿ ವಿಡಂಬಾರಿ (ವಿ.ಜಿ.ಭಂಡಾರಿ)ಯವರು ಪತ್ರಿಕೆಯ ಮೇಲೆ ಅಭಿಮಾನವಿಟ್ಟು ಪತ್ರ ಬರೆದಿದ್ದಾರೆ.

ಪತ್ರವನ್ನು ಇಲ್ಲಿ ಪ್ರಕಟಿಸಲಾಗಿದೆ. ಅನಾರೋಗ್ಯ, ಹಲವು ತೊಂದರೆಗಳ ನಡುವೆಯೂ 'ಜನಶಕ್ತಿ' ನನ್ನ ಮನ ಸೆಳೆದಿದೆ. ಆದಕ್ಕಾಗಿ ಕಾಯುತ್ತಿರುತ್ತೇನೆ' ಎನ್ನುವ ಅವರ ಪ್ರೀತಿ ದೊಡ್ಡದು.

- ಸಂ


"ನನ್ನ ಗೌರವದ ಕಾಂ: ಜಿ.ಎನ್.ನಾಗರಾಜ್‌ರವರಿಗೆ ನಮಸ್ಕಾರಗಳು. ತಾವು ನನ್ನ ಹಿತೈಷಿಗಳು ಪತ್ರಿಕೆಯ ಮೂಲಕ ಬೆಳಕು ನೀಡಿದವರು. ನನ್ನ ಬಾಳಿನ ಒಂದು ಬದಲಾವಣೆಯನ್ನು ತಮಗೆ ತಿಳಿಸುವುದು ನನ್ನ ಕರ್ತವ್ಯವಾಗಿದೆ. ದಿನಾಂಕ: 05.10.2007ರಂದು ನನಗೆ ಆಶ್ರಯವಿತ್ತ ನನ್ನ ಪ್ರೀತಿಯ ಚಿಂತನದಿಂದ ಶಿರಸಿಯಿಂದ ನನ್ನ ಮಗಳ ಮನೆಯಲ್ಲಿ ಉಳಿದು ಇನ್ನುಳಿದ ಅಲ್ಪ ಆಯುಷ್ಯವನ್ನು ನಾಲ್ಕು ಜನರಿಗಾಗಿ ಸವೆಸಲು ತೀರ್ಮಾನಿಸಿರುವೆ.

ಚಿಂತನದವರು ಅತ್ಯಂತ ಪ್ರೀತಿಯಿಂದಲೂ ಗೌರವದಿಂದಲೂ ಕಾಣುತ್ತಿದ್ದರು. ನನ್ನೆಲ್ಲಾ ನೋವುಗಳಿಗೆ ಸ್ಪಂದಿಸಿದ್ದರು. ಆದರೆ ಈಗ ನನ್ನೆಲ್ಲಾ ಒಳನೋವುಗಳು ಮುಗಿದು ಹೊರ ನೋವು ಪ್ರಾರಂಭವಾಗಿದೆ. ಸ್ವಲ್ಪ ಸೊಂಟ, ಕಾಲು ನೋವು. ನನ್ನವಳು ಮಗನ ಚಿಂತೆಯಿಂದಾಗಿ ಪಾರ್ಕಿನ್‌ಸನ್‌ದಿಂದ ಬಳಲುತ್ತಿದ್ದಾಳೆ. ಹೀಗಾಗಿ ನನ್ನಿಂದ ನನ್ನ ಮನ ಮೆಚ್ಚುವ ರೀತಿಯಲ್ಲಿ ಕೆಲಸ ಮಾಡಲು ಸಾಧ್ಯವಾಗುತ್ತಿಲ್ಲ.

ಜನಶಕ್ತಿ ನನ್ನ ಮನ ಸೆಳೆದಿದೆ. ಆದಕ್ಕಾಗಿ ಕಾಯುತ್ತಿರುತ್ತೇನೆ. ಇಂದೇ ವಾರ್ಷಿಕ ಚಂದಾ ಹಣ 250 ರೂ. ಕಳಿಸಿರುವೆ. ದಯವಿಟ್ಟು ಈ ಮೇಲಿನ ಅಡ್ರೆಸ್ಸಿಗೆ ಪತ್ರಿಕೆ ಕಳಿಸಬೇಕಾಗಿ ವಿನಂತಿ. ನಾನು ಎಲ್ಲೇ ಇದ್ದರೂ ತಮ್ಮವನೇ, ತಮ್ಮ ತತ್ವದವನೇ ಆಗಿರುತ್ತೇನೆಂದು ಪ್ರಮಾಣ ಮಾಡಿ ಹೇಳುತ್ತೇನೆ.

ದಯವಿಟ್ಟು ಎಲ್ಲಾ ಜನಶಕ್ತಿ ಬಳಗಕ್ಕೆ ಎಲ್ಲಾ ನನ್ನ ತತ್ವದವರಿಗೆ ನನ್ನ ನಮಸ್ಕಾರಗಳು"

- ವಿಡಂಬಾರಿ



ಇಎಂಎಸ್ ಭವನ ನಿಧಿ

ಎರಡನೇ ಹಂತದ ಸಂಗ್ರಹ

	ಹಿಂದಿನ ಸಂಗ್ರಹ	6,74,912-00.
	ಸಿ.ಪಿ.ಐ(ಎಂ) ಮಂಡ್ಯ ಜಿಲ್ಲಾ ಸಂಘಟನ ಸಮಿತಿ ಮೂಲಕ	
1.	ಶಿವಮಲ್ಲು. ಬಂಡೂರು.	100-00
2.	ಟಿ.ಎಲ್.ಕೃಷ್ಣೇಗೌಡ	500-00
3.	ಮಹಾದೇವಮ್ಮ ನೆಲ್ಲೂರು	50-00
4.	ಸುನಿತಾ, ತುರಗನೂರು	100-00
5.	ಸರೋಜಮ್ಮ ಹುಸ್ಕೂರು	100-00
6.	ಮಹದೇವಮ್ಮ ಬಂಡೂರು.	100-00
7.	ಗೌರಮ್ಮ, ಹುಸ್ಕೂರು	50-00
8.	ಸಿ.ಕುಮಾರಿ	200-00
9.	ಮರುವಾಯಿ, ಮಂಡ್ಯ	50-00
10.	ಪದ್ಮ ಕಂದೇಗಾಲ	100-00
11.	ಜವರೇಗೌಡ, ನೆಲ್ಲೂರು	100-00
12.	ಕೆ.ಆರ್.ಪುಟ್ಟಮಾದೇಗೌಡ. ಕಲ್ಲಾರೆಪುರ	100-00
13.	ಎಂ.ವಿ.ಕೃಷ್ಣ. ಉಪನ್ಯಾಸಕರು, ಮಳವಳ್ಳಿ	1000-00
14.	ಹನುಮೇಶ ಬಿದರಳ್ಳಿ	200-00
15.	ಚಿಕ್ಕರಾಜು.ಎ.ಸಿ. ಅಮೃತೇಶ್ವರನಹಳ್ಳಿ.	200-00
	ಒಟ್ಟು ಸಂಗ್ರಹ	6,77,862-00.

ನಿಮ್ಮ ದೂರನ್ನು ಇಲ್ಲಿ ಕೊಡಿ, ವಿಚಾರಣೆಯನ್ನು ಇಲ್ಲೇ ಮಾಡಿ

'ಜನಶಕ್ತಿ' ಪತ್ರಿಕೆಯ ಚಂದಾದಾರರನ್ನು ತಲುಪದೇ ಇರುವುದು, ತಡವಾಗಿ ತಲುಪುವುದು ಇಂತಹ ವಿಷಯಗಳಲ್ಲಿ ಏನಾದರೂ ದೂರಗಳಿದ್ದಲ್ಲಿ ನೀವು ದೂರು ದಾಖಲಿಸಬಹುದು.
ಅದಕ್ಕಾಗಿ ನೀವು ಸಂಪರ್ಕಿಸಬೇಕಾದದ್ದು
ಕಾಂ: ವೀರಣ್ಣ ಕಲ್ಲಸಿ
ಮೊಬೈಲ್: 9480430594
ವಿಳಾಸ ಬದಲಾವಣೆ, ಬಾಕಿ ವಿವರಕ್ಕಾಗಿ...
ಅದೇ ರೀತಿ ಪ್ರತಿ ಹೆಚ್ಚಳ ಏಜೆನ್ಸಿ ಬಾಕಿ, ಚಂದಾವಿವರ, ವಿಳಾಸ ಬದಲಾವಣೆ ಇತ್ಯಾದಿಗಳಿಗಾಗಿಯೂ ಇದೇ ದೂರವಾಣಿ ಸಂಖ್ಯೆಯನ್ನು ಸಂಪರ್ಕಿಸುವುದು.

- ಸಂ

ಸಂಪಾದಕೀಯ

ರಾಜ್ಯಪಾಲರದೇನು ದರ್ಬಾರು?

ಹವಾನಿಯಂತ್ರಿತ ಅರಮನೆಯಲ್ಲಿ ಕಾರುಬಾರು ನಡೆಸುತ್ತಿದ್ದ 'ಸನ್ಮಾನ್ಯ' ರಾಜ್ಯಪಾಲರು ಈಗ ದಿನವೂ ವಿಧಾನಸೌಧದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಟಿ.ವಿ. ಪತ್ರಿಕೆಗಳಲ್ಲಿಯೂ ಸುದ್ದಿ ಮಾಡುತ್ತಾ ಮಿಂಚುತ್ತಿದ್ದಾರೆ. ಒಂದರ್ಥದಲ್ಲಿ ಅವರಿಗೆ ಪ್ರಚಾರದ ಗೀಳು ಹತ್ತಿಕೊಂಡಂತಿದೆ. ಇಡೀ ಕರ್ನಾಟಕವನ್ನು ತಾವೊಬ್ಬರೇ ನಡೆಸುವ ಸಾರ್ವಭೌಮನಂತೆ ಭಾವಿಸಿರಲೂಬಹುದು.

ಜೆಡಿ(ಎಸ್) ಮತ್ತು ಬಿಜೆಪಿ ಪಕ್ಷಗಳ ಸಂದರ್ಭ ಸಾಧಕ ಮೈತ್ರಿಕೂಟದ ಸ್ವಾಗತಾರ್ಹ ಪತನ, ನಂತರ ಸರ್ಕಾರ ರಚಿಸಲು ಯಾವೊಂದು ಪಕ್ಷಕ್ಕೂ ಸಾಧ್ಯವಾಗದೇ ಇರುವುದು ಇಂತಹ ಅವಕಾಶವನ್ನು ಅನಿವಾರ್ಯವಾಗಿ ರಾಜ್ಯಪಾಲ ರಾಮೇಶ್ವರ ಠಾಕೂರ್‌ರವರಿಗೆ ತಂದಿದೆ. ಕರ್ನಾಟಕ ರಾಷ್ಟ್ರಪತಿ ಆಡಳಿತಕ್ಕೆ ಒಳಪಟ್ಟಿದ್ದರಿಂದ ಅವರ ಪ್ರತಿನಿಧಿ ಇಲ್ಲಿ ರಾಜ್ಯಪಾಲರೇ ಉಸ್ತುವಾರಿ. ಇಂತಹ ರಾಷ್ಟ್ರಪತಿ ಆಡಳಿತ ರಾಜ್ಯದಲ್ಲಿ ಇದು ಮೊದಲೇನಲ್ಲ. ಇದು ಐದನೇಯದು. ಆದರೆ ಈ ಹಿಂದಿನ ನಾಲ್ಕು ರಾಜ್ಯಪಾಲರಿಗೆ ಹೋಲಿಸಿದರೆ, ಅವರೆಲ್ಲಾ ರಾಜಭವನವನ್ನೇ ಕೇಂದ್ರವಾಗಿರಿಸಿ ಅಧಿಕಾರ ಆಡಳಿತ ನಡೆಸಿದವರು. ಅವರ ಆಡಳಿತದಲ್ಲಿ ಜನವಿರೋಧಿ, ಪ್ರಜಾಪ್ರಭುತ್ವ ವಿರೋಧಿ ಅಂಶಗಳು ಇರಲೇ ಇಲ್ಲ ವೆಂದೇನಲ್ಲ. **ಒಂದು ಪ್ರಜಾಸತ್ತಾತ್ಮಕ ಆಡಳಿತಕ್ಕೆ ವ್ಯಕ್ತಿಯೊಬ್ಬರ ಆಡಳಿತ ಪರ್ಯಾಯವಾಗಲು ಸಾಧ್ಯವೇ ಇಲ್ಲ.** ಆದರೆ ಅವರು ಚುನಾಯಿತ ಪ್ರಾತಿನಿಧ್ಯ ಸಂಸ್ಥೆಗೆ ವಿಧಾನಸಭೆಗೆ ಮತ್ತು ಚುನಾಯಿತ ಸರ್ಕಾರಕ್ಕೆ ಪರ್ಯಾಯ ತಾನೇ ಎಂಬಂತೆ ನಡೆದುಕೊಳ್ಳುವ 'ದುಸ್ಸಾಹಸ'ಕ್ಕೆ ಇಷ್ಟು ಕೈ ಹಾಕಿರಲಿಲ್ಲ. ಆದರೆ... ಈ ರಾಜ್ಯಪಾಲರದ್ದು ಒಂದು ಹೊಸ ವರಸೆಯೇ. ಅದಕ್ಕೆ ಈಗ ಆಕ್ಷೇಪ ಕೇಳುತ್ತಿರುವುದು ಸಹಜ.

ರಾಷ್ಟ್ರಪತಿ ಆಡಳಿತ ಜಾರಿಗೆ ಬಂದ ಮರುದಿನವೇ ಠಾಕೂರರು ವಿಧಾನಸೌಧದ ಮುಖ್ಯಮಂತ್ರಿ ಕೊಠಡಿಯಲ್ಲಿ (ಕುರ್ಚಿಯಲ್ಲಿ) ಕುಳಿತು ಅಧಿಕಾರಿಗಳ ಸಭೆಯನ್ನು ನಡೆಸಿ ದರಬಾರು ಆರಂಭಿಸಿದರು. ನಂತರ ನೇರವಾಗಿ ಕೈ ಹಾಕಿದ್ದು ಹಿಂದಿನ ಸರ್ಕಾರ ಸಹಕಾರ ಸಂಘಗಳಿಗೆ ನಾಮ ನಿರ್ದೇಶನ ಮಾಡಿದ್ದ ಸುಮಾರು 4000 ನೇಮಕಗಳನ್ನು ರದ್ದುಗೊಳಿಸಿದ್ದು, ಈಗ ಇರುವ ಯಾವ ಕಡತಗಳ ಮೇಲೆ ಮುಂದಿನ ಪ್ರಕ್ರಿಯೆ ನಡೆಸದಂತೆ ನಿರ್ದೇಶಿಸಿದ್ದು, ರಾಜ್ಯಪಾಲರು ಆರಂಭದಲ್ಲಿಯೇ ನೆರೆ ಬರ, ಆಹಾರ ಕೊರತೆಯಂತಹ ಜನರ ಜ್ವಲಂತ ಪ್ರಶ್ನೆಗಳ ಬಗ್ಗೆ ಆದ್ಯತೆಯ ಗಮನ ನೀಡಬಹುದಿತ್ತು. ಅವರು ಆಯ್ಕೆ ಮಾಡಿಕೊಂಡಿದ್ದೇ ಹಿಂದಿನ ಸರ್ಕಾರ ಮಾಡಿಕೊಂಡಿದ್ದ (ಕಾಂಗ್ರೆಸ್ ಪಕ್ಷಕ್ಕೆ ಬೇಡವಾಗಿದ್ದ...) ವಿಷಯವನ್ನೇ. ಚುನಾಯಿತ ಸರ್ಕಾರವೊಂದು ಕಾನೂನು ಕ್ರಮಗಳನ್ನು ಅನುಸರಿಸಿ ಕೈಗೊಂಡ ತೀರ್ಮಾನವನ್ನು ತಾತ್ಕಾಲಿಕ ಉಸ್ತುವಾರಿಯ ಈ ರಾಜ್ಯಪಾಲರು ರದ್ದುಪಡಿಸಬಹುದೇ ಎಂಬ ಪ್ರಶ್ನೆ ಏಳುತ್ತದೆ. ಅದೂ ಇನ್ನು ವಿಧಾನಸಭೆ ಅಸ್ತಿತ್ವದಲ್ಲಿ ಇರುವಾಗ ಇವೆಲ್ಲಾ ಮಾಡಬಹುದೇ? ಅಂದರೆ **ರಾಮೇಶ್ವರ ಠಾಕೂರರು ತಮ್ಮ ಅಧಿಕಾರದ ಗಡಿ ಮೀರುತ್ತಿದ್ದಾರೆ. ತಾವೇ ಮುಖ್ಯಮಂತ್ರಿಗಳಿಗೆ, ಆ ಸಂಪುಟಕ್ಕೆ ಸಮಾನವಾದ ಪರ್ಯಾಯವೆಂದು ಭಾವಿಸಿದ್ದಾರೆ.** ಇದಕ್ಕೆ ತೀವ್ರವಾದ ಟೀಕೆಗಳು ಬಂದಿವೆ. ಇಷ್ಟು ಮಾತ್ರವಲ್ಲ ವಿಧಾನಸೌಧದ ಮುಖ್ಯಮಂತ್ರಿ ಕೊಠಡಿಯಲ್ಲಿ ಜನತಾ ದರ್ಶನವನ್ನು ಆರಂಭಿಸಿರುವುದು ಕೆಲವು ಪ್ರಮುಖ ಕಡತಗಳನ್ನು ಪುನರ್ ಪರಿಶೀಲನೆಗೆ ತರಿಸಿಕೊಂಡಿರುವುದು ರಾಜ್ಯಪಾಲರ ನೈತಿಕ ನಡವಳಿಕೆಯ ಲೋಪವನ್ನು ಮತ್ತು ಸಾಗುವ ದಿಕ್ಕನ್ನು ತೆರೆದಿರಿಸಿದೆ.


ಭಾರತದ ಸಂವಿಧಾನದಲ್ಲಿ ಚುನಾಯಿತ ಸರ್ಕಾರಕ್ಕೆ ಅಧಿಕಾರ ಇರುವಾಗಲೇ ರಾಷ್ಟ್ರಪತಿಗಳಿಗೆ ಅಪರಮಿತವಾದ ಅಧಿಕಾರಗಳೂ ಇವೆ. ಅವರು ದೇಶದ ಸಂವಿಧಾನದ ಮುಖ್ಯಸ್ಥ, ಪ್ರಥಮ ಪ್ರಜೆ. ಅವರ ಪ್ರತಿನಿಧಿಯಾಗಿರುವ ರಾಜ್ಯಪಾಲರಿಗೂ ಅಂತಹ ಅಧಿಕಾರ ನೀಡಿದೆ. ಅಂದರೆ ವಿಧಾನಸಭೆ, ಮುಖ್ಯಮಂತ್ರಿ, ಮಂತ್ರಿ ಮಂಡಲ ಸರ್ಕಾರವಿರುವಾಗಲೇ ಅದರ ಕಾರ್ಯಭಾರ ನಡೆಯುವುದು ರಾಜ್ಯಪಾಲರ ಹೆಸರಿನಲ್ಲೇ, ಇಡೀ ಕಾರ್ಯಾಂಗ ರಾಜ್ಯಪಾಲರ ಅಡಿಯಲ್ಲೇ. ಸಂವಿಧಾನದಲ್ಲಿ ಉಲ್ಲೇಖಿಸಿದಂತೆ 'ರಾಷ್ಟ್ರಪತಿ ಅಥವಾ ರಾಜ್ಯಪಾಲರಿಗೆ ಇಷ್ಟ ಪರ್ಯಂತ'-Pleasure of the president (ಇಷ್ಟವಾಗುವರೆಗೂ) ಮಾತ್ರವೇ ನಡೆಯಬಹುದು. ಅವರಿಗೆ ಇಷ್ಟವಿಲ್ಲ ಎಂದಾದರೆ ಯಾವ ಅಧಿಕಾರಿಯನ್ನೂ ಕಿತ್ತು ಹಾಕಬಹುದು ಅಥವಾ ಅವರ ಮೇಲೆ ಕ್ರಮ ವಹಿಸಬಹುದು. ಅವರು ತೆಗೆದುಕೊಂಡ ನಿರ್ಣಯ, ಅಥವಾ ಎಸಗಲಾದ ಕೃತ್ಯಗಳ ಬಗ್ಗೆ ಮೊಕದ್ದಮೆ ಹೂಡುವಂತಿಲ್ಲ.

ಎಲ್ಲರಿಗೂ ತಿಳಿದಿರುವಂತೆ ಒಂದು ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಕುಸಿದಿದೆ ಎಂದೋ, ಸಂವಿಧಾನ ಜಾರಿ ಅಸಾಧ್ಯವೆಂದೋ ಒಂದು ವರದಿಯನ್ನು ರಾಷ್ಟ್ರಪತಿಗಳಿಗೆ ಕಳುಹಿಸಿದರೆ ಅಂತಹ ಸರ್ಕಾರ ಅಥವಾ ವಿಧಾನಸಭೆಯನ್ನು ವಿಸರ್ಜಿಸಬಹುದು. ಹೀಗೆ ಕೇಂದ್ರದ ಸರ್ವಾಧಿಕಾರದಲ್ಲಿ ರಾಜ್ಯಪಾಲರಿಗೆ ಪಾಲಿದೆ. ಆದ್ದರಿಂದಲೇ ರಾಜ್ಯಪಾಲರ ನೇಮಕಗಳು ವಹಿಸಿದ ಪಾತ್ರ ವಿವಾದಕ್ಕೆಡೆ ಮಾಡಿಕೊಟ್ಟಿವೆ. ಕೇಂದ್ರದಲ್ಲಿನ ಸರ್ಕಾರ ಬಯಸಿದಂತಹವರನ್ನೇ, ನೇಮಿಸಲಾಗುತ್ತಿದೆ ಎಂದೂ, ಇಂತಹ ರಾಜ್ಯಪಾಲರು ನಿರ್ಣಾಯಕ ಸಂದರ್ಭದಲ್ಲಿ ಅವರು ವಹಿಸುವ ಪಾತ್ರವೂ ತೀವ್ರ ಪಕ್ಷಪಾತವಾಗಿರುವ ಟೀಕೆಗಳು ಇವೆ. ರಾಜ್ಯಪಾಲರು ಕೇಂದ್ರ ಸರ್ಕಾರದ ಏಜೆಂಟರಂತೆ ವರ್ತಿಸಿದ್ದಾರೆ. ಇಂತಹ ಅಭಿಪ್ರಾಯಗಳ ಹಿಂದೆ ಪ್ರಜಾಸತ್ತೆಗೆ ವಿರೋಧಿಯಾದ ಕಹಿ ಅನುಭವಗಳಿವೆ. ಅದಕ್ಕಾಗಿಯೇ ಎಡಪಕ್ಷಗಳು ಬಿಳಿಯಾನೆಯಂತಿರುವ ಪ್ರಜಾಸತ್ತಾತ್ಮಕ ಮೌಲ್ಯಗಳಿಗೆ ವಿರುದ್ಧವಾಗಿರುವ ರಾಜ್ಯಪಾಲರ ಹುದ್ದೆಯನ್ನೇ ರದ್ದುಗೊಳಿಸಬೇಕು ಎಂದು ಸತತವಾಗಿ ಆಗ್ರಹಿಸುತ್ತಿರುವುದು.

ರಾಜ್ಯಪಾಲರು ಈಗ ವಹಿಸುತ್ತಿರುವ ಪಾತ್ರದ ಬಗ್ಗೆ ಸಾರ್ವತ್ರಿಕವಾದ ವಿರೋಧದಂತಹ ಅಭಿಪ್ರಾಯಗಳು ಇರುವುದು ನಿಜ. ಸದ್ಯ ಕರ್ನಾಟಕದ ರಾಜ್ಯಪಾಲರ ಮುಂದಿರುವ ಕೆಲಸವೇನು? ಉಸ್ತುವಾರಿಯನ್ನು ಉಸ್ತುವಾರಿಯನ್ನಾಗಿ ನೋಡಿಕೊಳ್ಳುವುದು. ಕೇವಲ ದೈನಂದಿನ ಅತ್ಯಗತ್ಯ ವಿಷಯಗಳಿಗೆ ಅಷ್ಟೇ ಗಮನ ನೀಡುವುದು, ಯಾರು ಸರ್ಕಾರ ರಚಿಸುವ ಸಂದರ್ಭಗಳಿಲ್ಲದಿದ್ದಲ್ಲಿ ಹೊಸ ಜನಾದೇಶ ಪಡೆಯಲು ಚುನಾಯಿತ ಸರ್ಕಾರ ರಚನೆಯಾಗುವಂತೆ ಪ್ರಜಾಸತ್ತಾತ್ಮಕ ಕ್ರಮಗಳನ್ನು ವಹಿಸುವುದು. ಈ ಕೂಡಲೇ ಶಾಸಕರ ಖರೀದಿ ದಂಧೆಗೆ ತಡೆಯೊಡ್ಡುವುದು.

ಇಂತಹ ಕನಿಷ್ಠ ಕರ್ತವ್ಯಗಳಿಗೆ ಸೀಮಿತಗೊಳ್ಳದೇ ರಾಜ್ಯಪಾಲರು ತಿಳಿದಂತೆ ದರ್ಬಾರು ನಡೆಸುವುದು ಮತ್ತು ಕಾಂಗ್ರೆಸ್ ಪಕ್ಷವು ಹಿಂಬಾಲಿಗನಿಂದ ರಾಜಭವನದ ಮೂಲಕ ಅಧಿಕಾರ ಚಲಾಯಿಸುವುದು ಅನಾರೋಗ್ಯಕರ ಮಾತ್ರವಲ್ಲ ಅಪಾಯದ ಪ್ರವೃತ್ತಿ.

ದತ್ತಮಾಲೆ ಹಿಡಿದ ವಿಧ್ವಂಸಕರು



ಕೋಮು ಸಾಮರಸ್ಯ ಹಾಳುಗೆಡವಲು ಹತಾಶ ಸಂಘಪರಿವಾರ ಗಿರಿಯತ್ತ ಹೊರಟಿದೆ. ಸರ್ಕಾರ ಏನು ಮಾಡಲಿದೆ?

ಮುಖ್ಯಮಂತ್ರಿ ಸ್ಥಾನ ಗಿಟ್ಟಿಸಿಕೊಳ್ಳುವ ಅವಕಾಶದಿಂದ ಹೊರದೂಡಲ್ಪಟ್ಟ ಬಿಜೆಪಿಯು ಹತಾಶೆಯಿಂದ ಕುದಿಯುತ್ತಾ ರಾಜ್ಯದಲ್ಲಿ 'ಅನುಕಂಪಯಾತ್ರೆ' ನಡೆಸುತ್ತಿದೆ. ಮುಂದಿನ ಚುನಾವಣೆಯಲ್ಲಿ ಅತ್ಯಧಿಕ ಸ್ಥಾನ ಗಳಿಸಿ ತಾನೇ ಸರ್ಕಾರ ರಚಿಸಬೇಕು ಎಂಬುದು ಅದರ ಗುರಿ. ಸಂಘ ಪರಿವಾರದ್ದೂ ಅದೇ ಬಯಕೆ. ಈ ಗುರಿ ಅದೆಷ್ಟು ಸಾಧನೆಯಾಗುವುದೋ ಗೊತ್ತಿಲ್ಲ. ಆದರೆ ಆ ದಿಕ್ಕಿನಲ್ಲಿ ಸಂಘ ಪರಿವಾರದ ಗುಪ್ತ ಅಜೆಂಡಾಗಳು ಜಾರಿಗೊಳ್ಳತೊಡಗಿವೆ.

ತಕ್ಷಣದ ಪ್ರಶ್ನೆ ಬಾಬಾಬುಡನ್ ಗಿರಿಯದ್ದು. ವರ್ಷಕ್ಕೊಮ್ಮೆ ಉರುಸು ನಡೆಯುವುದೇ ಪಾರಂಪರಿಕ ಪದ್ಧತಿ. ಆದರೆ ಪ್ರತಿ ಋತುವಿನಲ್ಲಿಯೂ ಏನಾದರೂ ಕಿತಾಪತಿ ಹಚ್ಚಬಹುದಾದಷ್ಟು ಆಚರಣೆಗಳನ್ನು ಸಂಘ ಪರಿವಾರ ನಿಗದಿಗೊಳಿಸಿದೆ. ಈಗ ಅದು ತನ್ನ 'ತ್ರಿಶೂಲ'ವನ್ನು 'ದರ್ಗಾಪೀಠ'ದತ್ತ ತಿರುಗಿಸಿದೆ. ಅಕ್ಟೋಬರ್ 20ರಿಂದ 26ರವರೆಗೆ ಅಲ್ಲಿ 'ದತ್ತಮಾಲಾ' ಕಾರ್ಯಕ್ರಮ ನಡೆಸುವುದಾಗಿ, ನಂತರ ದತ್ತ ಜಯಂತಿ ಎಂದೂ ಬಜರಂಗದಳ ಮತ್ತು ಶ್ರೀರಾಮಸೇನೆಗಳು ಪ್ರಕಟಿಸಿವೆ.

ಇದಕ್ಕೆ ಈ ಬಾರಿ ಚಾಲನೆ ನೀಡಿದ್ದೇ ಮಾಜಿ ಕೇಂದ್ರ ಸಚಿವ ಅನಂತ್‌ಕುಮಾರ್. ಕುಮಾರಸ್ವಾಮಿ ಯಡಿಯೊರಪ್ಪನವರ ವಿರುದ್ಧ ಬಿಜೆಪಿ ಸಾರಿದ್ದ 'ಯುದ್ಧ'ದ ಬಹಿರಂಗ ಸಭೆಯಲ್ಲಿ ಬಾಬಾಬುಡನ್‌ಗಿರಿಯನ್ನು ದತ್ತಪೀಠವಾಗಿ ಮಾಡುವುದಾಗಿ ಬೆದರಿಕೆ ಹಾಕಿ ಪರಿವಾರದ ಪ್ರಯತ್ನಗಳಿಗೆ ಪ್ರಚೋದನೆ ತುಂಬಿದ್ದರು. ಈಗ ಬಜರಂಗದಳ, ಮುತಾಲಿಕನ ಶ್ರೀರಾಮಸೇನೆಗಳು ದತ್ತಮಾಲಾ ಆಚರಣೆಗೆ ಪೈಪೋಟಿ ಆರಂಭಿಸಿವೆ. ತಾವೇ ಹಿಂದುತ್ವದ ನಿಜವಾದ ಹೋರಾಟಗಾರರು ಎಂದು ಆಕ್ರಮಣಕಾರಿಯಾಗಿ ಮಾತನಾಡ ತೊಡಗಿವೆ, ಹೊರಟಿವೆ. ದತ್ತಮಾಲೆಯ ಧಾರ್ಮಿಕ ಹೆಸರಿನಲ್ಲಿ ಬಾಬಾಬುಡನ್ ಗಿರಿಯ ಕೋಮುಸೌಹಾರ್ದ ಪರಂಪರೆಯ ವಿರುದ್ಧ ಜನರನ್ನು ಎತ್ತಿಕಟ್ಟುವುದು ಅವರ ಗುರಿ. ಜನತೆಯನ್ನು ವಿಭಜಿಸಲು ಎಂತಹ ಹಂತಕ್ಕೂ ಈ ಕೋಮುವಾದಿ ಫ್ಯಾಸಿಸ್ಟರು ಹೋಗಬಲ್ಲರೆಂಬುದಕ್ಕೆ ಇದೂ ಒಂದು ನಿರ್ದಶನ.

ನೂರಾರು ವರ್ಷಗಳ ಆಚರಣೆಗಳಲ್ಲಿ ಎಂದೂ ಇಲ್ಲದ ಹೊಸ ಆಚರಣೆಯನ್ನು ಸಂಘ ಪರಿವಾರ ಆರಂಭಿಸಿದೆ. ಬಾಬ್ರಿಮಸೀದಿ ಧ್ವಂಸಗೊಳಿಸಿ ದೇಶಾದ್ಯಂತ ಹಲವಾರು ಅಯೋಧ್ಯೆಗಳನ್ನು ಸೃಷ್ಟಿಸಲೆಂದು ಗಿರಿಯನ್ನು ಆಯ್ಕೆ ಮಾಡಿಕೊಂಡಿತು. ಬೆನ್ನಲ್ಲಿ ಅಲ್ಲಿನ ಪರಂಪರೆ, ಸಂಸ್ಕೃತಿ, ಧಾರ್ಮಿಕ ನಂಬಿಕೆಗಳ ಮೇಲೆ ಧಾಳಿ ಆರಂಭಿಸಿತು. ಈ ಪ್ರಕ್ರಿಯೆಯಲ್ಲಿ ಹುಟ್ಟಿದ್ದು ಅಯ್ಯಪ್ಪ ಮಾಲೆ ಯಂತಹ ದತ್ತಮಾಲೆ, ನಂತರ ದತ್ತಜಯಂತಿ ಎಂಬುದು.



ಬಾಬಾಬುಡನ್‌ಗಿರಿಯ 'ದರ್ಗಾ ಪೀಠ'ವನ್ನು ಸಮನ್ವಯದ ಸೂಫಿ ಪರಂಪರೆಗೆ ವಿರುದ್ಧವಾಗಿ ಕೇವಲ ದತ್ತಪೀಠವೆಂದು ಪ್ರತಿಪಾದಿಸಲು ತೊಡಗಿದಾಗ ನ್ಯಾಯಾಲಯದಲ್ಲಿ ವಿವರವಾದ ಪರಿಶೀಲನೆ ಮತ್ತು ವಾದಗಳ ಬಳಿಕ ಅದು ಸೂಫಿ ಪರಂಪರೆಯ 'ದರ್ಗಾಪೀಠ'ವಾಗಿರುವ ಸಂಯುಕ್ತ ಸಂಸ್ಕೃತಿಯೆಂದು, ಕೋಮು ಸೌಹಾರ್ದತೆಗೆ ಅತ್ಯುತ್ತಮ ಮಾದರಿ ಎಂದೂ ಪ್ರಶಂಸಿಸಿ ಅಲ್ಲಿ ಏನಿದ್ದರೂ 1975ರ ಹಿಂದಿನ ಆಚರಣೆಗಳಿಗೆ ಮಾತ್ರ ಸೀಮಿತಗೊಳ್ಳಬೇಕು. ಹೊಸ ಆಚರಣೆಗಳಿಗೆ ಅವಕಾಶ ಇಲ್ಲವೆಂದಿತು. ಅಂತಹ ಆಚರಣೆಗಳ ಪಟ್ಟಿಯೂ ಇಂದು ಲಭ್ಯವಿದೆ. ಇದರಲ್ಲಿ ಎಲ್ಲೂ ದತ್ತಜಯಂತಿ, ದತ್ತಮಾಲೆ, ದತ್ತ ವಿಗ್ರಹ ಪೂಜೆ, ಯಜ್ಞ ಸತ್ಯಂಗ ಭಜನೆ, ಶೋಭಾಯಾತ್ರೆ ಎಂಬುದು ಇಲ್ಲವೇ ಇಲ್ಲ. ಆದರೆ ತನ್ನ ದುರುದ್ದೇಶದ ಹಸೀ ಸುಳ್ಳಿನ ಕಂತೆಗಳ ವಿಕೃತ ಸಾಧನೆಗೆ ನ್ಯಾಯಾಲಯದ ತೀರ್ಪನ್ನು ಧಿಕ್ಕರಿಸಿ ವಿತಂಡವಾದವನ್ನು ಸತ್ಯವೆಂದು ನಂಬಿಸಲು ಖಾವೀ ಪಡೆ ಹೊರಟಿದೆ. ಸಂಘಪರಿವಾರದ ಈ ಆಚರಣೆಗೆ ಸರ್ಕಾರ ಅವಕಾಶ ಕೊಡಕೂಡದು.


ಹಿಂದೆ ಕೃಷ್ಣರ ಕಾಂಗ್ರೆಸ್ ಸರ್ಕಾರ ಯಜ್ಞ, ವಿಗ್ರಹಪೂಜೆಗೆ ಅವಕಾಶ ಕೊಟ್ಟಿದ್ದನ್ನು ನಂತರ ಪ್ರಗತಿಪರರ ಒತ್ತಾಯದಿಂದಾಗಿ ಧರ್ಮಸಿಂಗ್ ಸರ್ಕಾರ ಆ ವಿಕೃತಿಗಳನ್ನು ಸರಿಪಡಿಸುವ ಕ್ರಮಗಳನ್ನು ಕೈಗೊಂಡು ಅಂತಹ ಹೊಸ ಆಚರಣೆಗಳಿಗೆ ಅವಕಾಶ ನೀಡಲಿಲ್ಲ ಮತ್ತು ಸಂಘಪರಿವಾರದ ಪುಂಡಾಟಿಕೆಗಳಿಗೂ ನಿಯಂತ್ರಣ ಹೇರಿತು. ನಂತರ ಜೆಡಿ(ಎಸ್)-ಬಿಜೆಪಿ ಪಕ್ಷಗಳ ಸರ್ಕಾರದ ಅವಧಿಯಲ್ಲಿಯೂ ಬಿಜೆಪಿ ಇದಕ್ಕೆ ಅವಕಾಶ ನೀಡಲಾಗಲಿಲ್ಲ. ಇದಕ್ಕೆ ಜೆಡಿ(ಎಸ್)ನ ನಿಲುವು ಕಾರಣವಾಗಿದ್ದಿತು. ಹೀಗಿರುವಾಗಲೂ ಆಡಳಿತದ ಮೇಲಿನ ಪ್ರಭಾವ, ನಿಯಂತ್ರಣ ಶಕ್ತಿಯನ್ನು ಬಳಸಿ ಗಿರಿಯಲ್ಲಿ ನಡೆವ ಪದ್ಧತಿಗಳನ್ನು ನ್ಯಾಯಾಲಯದ ಆದೇಶ ವನ್ನು ತಿರುಚಲು ಬಿಜೆಪಿಯು ಸಾಕಷ್ಟು ಯತ್ನಿಸಿತು.

ಈಗ ಜನರಿಂದ ಚುನಾಯಿತವಾದ ಸರ್ಕಾರ ಇಲ್ಲದಿರುವಾಗ ರಾಜ್ಯಪಾಲರ ಆಡಳಿತದಲ್ಲಿ ಈ ಸಮಸ್ಯೆಯನ್ನು ಸಮರ್ಥವಾಗಿ ನಿಭಾಯಿಸುವ ಸವಾಲು ರಾಜ್ಯಪಾಲರ ಮೇಲಿದೆ. ಸಂವಿಧಾನ ನಾಗರೀಕ ಕಾನೂನು ಹಾಗೂ ಜನರ ಆಸ್ತಿಪಾಸ್ತಿ, ಶಾಂತಿ ಕಾಪಾಡುವ ಗುರುತರ ಹೊಣೆಯನ್ನು ನಿಭಾಯಿಸಬೇಕಾಗಿದೆ.

ಇಂದಿನ ರಾಜಕೀಯ ಸಂದರ್ಭವನ್ನು ದುರ್ಬಳಕೆ ಮಾಡಿಕೊಳ್ಳಲು ಖಾವೀಪಡೆಗೆ ಅವಕಾಶ ನೀಡಲೇಬಾರದು. ಅದೇನಿದ್ದರೂ ಸುಪ್ರಿಂ ಕೋರ್ಟ್ ನಿರ್ದೇಶನದಂತೆ 1975ರ ಹಿಂದಿನ ಆಚರಣೆಗಳಿಗೆ ಮಾತ್ರ ಬದ್ಧವಾಗಿರಬೇಕು. ಹೊಸ ಆಚರಣೆಗಳನ್ನು ನಿಷೇಧಿಸಬೇಕು ಯಥಾಸ್ಥಿತಿ ಕಾಪಾಡಬೇಕು. ಇದಕ್ಕೆ ಅಗತ್ಯವಾದ ಜನಬೆಂಬಲ ಪಡೆಯಲು ಎಲ್ಲರನ್ನು ತೊಡಗಿಸುವ ಪ್ರಜಾಸತ್ತಾತ್ಮಕ ಪ್ರಕ್ರಿಯೆ ನಡೆಯಬೇಕು. ಈ ವಿಷಯದಲ್ಲಿ ರಾಜ್ಯಪಾಲರು ಚಂಚಲತೆ ತೋರಬಾರದು. ಸರ್ಕಾರದ ಕ್ರಮಗಳು ಏನೆಂದು ಈ ಕೂಡಲೇ ಜನರ ಮುಂದೆ ಸ್ಪಷ್ಟಪಡಿಸಬೇಕು.

- ಎಚ್. ವಿಶ್ವನಾಥ್

ನಂಬಿದ್ರೆನಂಬಿ ಬಿಟ್ರೆಬಿಡಿ



"ಬಿಜೆಪಿಗೆ ಅಧಿಕಾರ ನೀಡುತ್ತಿರುವುದಕ್ಕೆ ಅರೆಸ್ಟ್‌ನ ಪಿಡೆಸ್ ಆಜೆಂಡಾವೇ ಕಾರಣ."

- ಎಚ್. ಡಿ. ಕುಮಾರಸ್ವಾಮಿ

"ಯಾವುದೇ ಕಾರಣಕ್ಕೂ ಬಿಜೆಪಿ ಜೊತೆ ಮೈತ್ರಿ ಸಾಧ್ಯವಿಲ್ಲ."

- ಕುಮಾರಸ್ವಾಮಿ

"ಅಂತರರಾಷ್ಟ್ರೀಯ ಪರಮಾಣು ಇಂಧನ ಸಂಸ್ಥೆಯೊಂದಿಗೆ ಮಾತುಕತೆ ಪ್ರಾರಂಭಿಸಿದರೆ ಬೆಂಬಲ ವಾಪಸ್."

- ಎಡ ಪಕ್ಷಗಳ ನಾಯಕರು

"ಬಿಹಳ ದಿನಗಳಿಂದ ನೆನೆಗುದಿಗೆ ಬಿದ್ದಿರುವ ಬೆಂಗಳೂರು-ಮಂಗಳೂರು ರೈಲನ್ನು ಖಂಡಿತವಾಗಿ ನವೆಂಬರ್ 15ರಿಂದ ಪ್ರಾರಂಭಿಸುತ್ತೇವೆ."

- ಆರ್. ವೇಲು. ಕೇಂದ್ರದ ರಾಜ್ಯ ರೈಲು ಮಂತ್ರಿ

ಕಂಕನರಿಗಳ ಕೈಗೆ ಅಧಿಕಾರ

ಕೊಟ್ಟಿಗೆ ...

ಇಲ್ಲಿ ಗುರುತು ಮಾಡಿರುವ ಹೇಳಿಕೆಯನ್ನು ಗಮನಿಸಿ -

ಇಂತಹ ಹೇಳಿಕೆಯನ್ನು ರಾಷ್ಟ್ರದ ಜನತೆ ಮಾತ್ರವಲ್ಲ ಹೊರ ರಾಷ್ಟ್ರಗಳವರೂ ಗಮನಿಸುತ್ತಾ ಇದ್ದಾರೆ. ಭಾರತ ದೇಶವನ್ನು ದುಷ್ಟ ಅಮೇರಿಕಾ ತನ್ನ ಯುದ್ಧ ಮಿತ್ರನನ್ನಾಗಿಸಿಕೊಂಡು ಜಗತ್ತಿನ ಇನ್ನಷ್ಟು ದೇಶಗಳ ಮೇಲೆ ಎರಗಲು ಸಂಚು ಹೂಡಿರುವಾಗ ಅಣು ಒಪ್ಪಂದದಷ್ಟೇ ದುಷ್ಟತನದ ಜಾಗತೀಕರಣದ ನೀತಿಗಳನ್ನು ಜೊತೆಗೆ ಹೆಣೆದು ಭಾರತದ ಕತ್ತು ಹಿಸುಕಲು ಬರುತ್ತಿರುವಾಗ ಭಾರತ ಈ ಸಂಚಿಕೆ ಬಲಿಯಾಗಬಾರದು ಎಂದು ಭಾರತದ ಎಡಪಕ್ಷಗಳು ದೃಢವಾದ ನಿಲುವು ತಳೆದು ಹೋರಾಡುತ್ತಿರುವುದು ಇದೀಗ ಜಗಜ್ಜಾಹೀರಾಗಿದೆ.

ಆದರೆ ಎಡಪಕ್ಷಗಳಿಗೆ ಅದರಲ್ಲೂ ಸಿಪಿಐ(ಎಂ)ನ ಮುಖಕ್ಕೆ ಮಸಿ ಬಳಿಯಲು ಸಿಗುವ ಯಾವ ಸಣ್ಣ ಅವಕಾಶವನ್ನು ಕಳೆದು ಕೊಳ್ಳಲು ತಯಾರಿಲ್ಲ - ಬೇಕಿದ್ದರೆ ಎಂತಹ ಆಧಾರರಹಿತ ಆರೋಪವನ್ನಾದರೂ ನಾವು ಮಾಡಲು ತಯಾರ್ ಅನ್ನುತ್ತವೆ ಕೆಲವು ಪತ್ರಿಕೆಗಳು. ಈ ಮೇಲಿನ ಹೇಳಿಕೆ ಪ್ರಕಟವಾಗಿರುವುದು ನಕ್ಸಲ್ ಮುಖವಾಣಿ ಎಂದೇ ಕರೆಯಲಾದ ಗೌರಿ ಲಂಕೇಶ್ ಪತ್ರಿಕೆಯಲ್ಲಿ. ಈ ಹೇಳಿಕೆಯ ತಲೆಯ ಮೇಲೆ ನಂಬಿದ್ರೆ ನಂಬಿ ಬಿಟ್ರೆ ಬಿಡಿ ಅಂತ ಶೀರ್ಷಿಕೆ.

ಅಂದರೆ ಎಡಪಕ್ಷಗಳು ನಂಬಿಕೆ ಅರ್ಹ ಅಲ್ಲ. ಅವು ಹೇಳಿದ್ದನ್ನೂ ಮಾಡುವುದಿಲ್ಲ. ಸಾಮ್ರಾಜ್ಯಶಾಹಿ ಅಮೇರಿಕಾವನ್ನು ವಿರೋಧಿಸುವುದಿಲ್ಲ ಅಂತ ಅದರ ಅರ್ಥ.

ಈ ಬಗ್ಗೆ ನಾವು ಹೆಚ್ಚಿಗೆ ಹೇಳುವಂತದ್ದೇನಿಲ್ಲ. ಪ್ರಜಾವಾಣಿಯ ದೆಹಲಿ ನೋಟ ಅಂಕಣದಲ್ಲಿ ದಿನೇಶ್ ಅಮೀನ್‌ಮಟ್ಟು ಅವರ ಈ ಮಾತನ್ನು ನೋಡಿದರೆ ಸಾಕು.

'ಪರಮಾಣು ಒಪ್ಪಂದಕ್ಕೆ ಎಡಪಕ್ಷಗಳು ಒಪ್ಪದಿದ್ದರೆ ಅವರ ದಾರಿ ನೋಡಿಕೊಳ್ಳಬಹುದು ಎಂದು ಕಳೆದ ಆಗಸ್ಟ್‌ನಲ್ಲಿ ಪ್ರಧಾನಿ ಮನಮೋಹನ್‌ಸಿಂಗ್ ಕಮ್ಯುನಿಸ್ಟ್‌ರನ್ನು ಅನಗತ್ಯವಾಗಿ ಕೆಣಕಿದ್ದರು..

'.......ಎಡಪಕ್ಷಗಳು ನಿಂತ ಸ್ಥಳದಿಂದ (ತಮ್ಮ ನಿಲುವಿನಿಂದ) ಒಂದಿಂಚೂ ಆಚೆ ಈಚೆ ಕದಲಲಿಲ್ಲ'

ಅವತ್ತೇ ಏನಾಯಿತು ?

ಈ ರೀತಿ 'ಮಸಿ ಬಳಿಯಲು' ನಿಂತ ಪತ್ರಿಕೆ ಮಾರುಕಟ್ಟೆ ಬಂದ ದಿನ ಏನಾಗಿದೆ ಗೊತ್ತೆ. ಭಾರತದ ಪ್ರಧಾನಿ ಮನಮೋಹನಸಿಂಗ್, ಅವರು ವಿಶ್ವದ ಪೋಲೀಸ್ ಜಾರ್ಜ್ ಬುಶ್ ಅಣ್ಣನಿಗೆ ಫೋನ್ ಮಾಡಿ ಅಣು ಒಪ್ಪಂದ ಜಾರಿ ಮಾಡಲಾಗದು ಅಂತ ಹೇಳಿದ್ದಾರೆ. ಸರ್ಕಾರದ ಧೋರಣೆಯಲ್ಲಿ ಇಷ್ಟು ದೊಡ್ಡ ತಿರುಗು ಮುರುಗು ಏನು ಸುಮ್ಮನೇ ಆಗಿದ್ದೇ? ಎಡಪಕ್ಷಗಳನ್ನು 'ಬೊಗಳುವ ನಾಯಿ, ಅವು ಕಚ್ಚುವುದಿಲ್ಲ' ಎಂಬ ಆರೋಪ ಮಾಡಿದಾಗ ಕಾಂ: ಯೆಚೂರಿ ಹೇಳಿದಂತೆ ಅವು ತೊಡೆಯ ಮೇಲೆ ಕೂರುವಂತಹವುಗಳಲ್ಲ. ದೇಶ ಹಿತ ಕಾಯುವ ಕಾವಲು ನಾಯಿಗಳು ಎಂದು ಮನವರಿಕೆ ಮಾಡಿಕೊಟ್ಟಿದ್ದಕ್ಕಲ್ಲವೇ ದೊಡ್ಡಣ್ಣನ ಮಾತಿಗೆ ಭಾರತ ಎದುರಾಡುವಂತಾಗಿರುವುದು. ಕಾಂಗ್ರೆಸ್ ಅಷ್ಟು ಸುಲಭವಾಗಿ ಅಣು ಒಪ್ಪಂದವನ್ನು ಕೈಬಿಡೋದಿಲ್ಲ. ಎಡಪಕ್ಷಗಳನ್ನು 'ಒಪ್ಪಿಸುವ' ಪ್ರಯತ್ನವನ್ನು ಮುಂದುವರಿಸುವುದೂ ಖಚಿತ. ಕಾಂಗ್ರೆಸ್ ಬಗ್ಗೆ ಎಡಪಕ್ಷಗಳಿಗೆ ಭ್ರಮೆಯೇನೂ ಇಲ್ಲ. ಆದರೂ ಕಾಂಗ್ರೆಸ್ ನಿಲುವಿಗೆ ಒಂದು ಹೆಜ್ಜೆ ಹಿನ್ನಡೆ ಆಗಿದೆಯಲ್ಲಾ.

ಈಗ ಹೇಳಿ ನೀವು ಎಡಪಕ್ಷಗಳನ್ನು ನಂಬುತ್ತೀರೋ? ಇಲ್ಲ ವಿಕೃತ, ಉತ್ಪ್ರೇಕ್ಷೆ, ಸುಳ್ಳುಗಳನ್ನೇ ಸುದ್ದಿ ಎನ್ನುವ ನಕ್ಸಲ್‌ವಾಣಿಯನ್ನು ನಂಬುತ್ತೀರೋ?

ನಕ್ಸಲ್ ನಾಯಕರ ಶರಣಾಗತಿ : ಏನು ಕಾರಣ?

ಆಂಧ್ರ ಪ್ರದೇಶದಲ್ಲಿ ಸಿಪಿಐ(ಎಂ) ಮತ್ತು ಎಡಪಕ್ಷಗಳ ನೇತೃತ್ವದ ಭೂಮಿ ಆಕ್ರಮಣ ಚಳುವಳಿ ಸಂಬಂಧ ಮೂರನೇ ಹಂತದ ಹೋರಾಟಕ್ಕೆ ಭರದ ಸಿದ್ಧತೆಗಳು ನಡೆಯುತ್ತಿದ್ದರೆ, ಮತ್ತೊಂದು ದಿಕ್ಕಿನಿಂದ ಬಂದಿರುವ ಈ ಸುದ್ದಿಯನ್ನು ನೋಡಿ.

ಈಗಿಂದೀಗಲೇ ಶಸಸ್ತ್ರ ಕ್ರಾಂತಿ ಅಂತ ಹೇಳಿ ಕಮ್ಯುನಿಸ್ಟ್ ಚಳುವಳಿಯ ಪ್ರಧಾನ ಧಾರೆಯಿಂದ ಬೇರೆಯಾಗಿ ಹೋಗಿದ್ದರಲ್ಲ ನಮ್ಮ ನಕ್ಸಲೀಯ ಮಿತ್ರರು ಅವರಿಗೆ ಸಂಬಂಧಿಸಿದ ಸುದ್ದಿ ಇದು.

ಆಂಧ್ರದ ಮೆಹಬೂಬನಗರದಲ್ಲಿ ರಮಾಕಾಂತ್ ಎಂಬ ನಕ್ಸಲೈಟ್ ಪೋಲೀಸರಿಗೆ ಶರಣಾಗಿದ್ದಾರೆ. ಎಷ್ಟೋ ಜನ ನಕ್ಸಲೀಯರು ಪೋಲೀಸರಿಗೆ ಶರಣಾಗಿದ್ದಾರೆ. ಇದೇನು ವಿಶೇಷನಾ ಅಂತ ಅನಿಸುತ್ತೆ ಅಲ್ವಾ? ಇದರಲ್ಲಿ ವಿಶೇಷಗಳಿವೆ. ಸ್ವಲ್ಪ ಓದಿ ನೋಡಿ.

ರಮಾಕಾಂತ್ ಅಂದರೆ ಯಾರೋ ಒಬ್ಬ ಸಾಮಾನ್ಯ ನಕ್ಸಲ್ ಕಾರ್ಯಕರ್ತರೋ, ಯಾವುದೇ ದಳಂನ ಸಾಮಾನ್ಯ ಸದಸ್ಯರೋ ಅಂತ ತಿಳೀಬೇಡಿ. ಈತ ಸಿಪಿಐ(ಎಂ)- ಎಂ ಅಂದರೆ ಮಾವೋವಾದಿ- ಈ ಪಕ್ಷದ ಮೆಹಬೂಬ್ ನಗರ ಜಿಲ್ಲಾ ಕಾರ್ಯದರ್ಶಿ. ಮಾವೋವಾದಿ ಪಕ್ಷದ ಹಿರಿಯ ಮುಖಂಡ.

ಇವರ ಬಳಿ ಎ.ಕೆ.47 ರೈಫಲ್ ಇತ್ತು ಅಂದರೆ ಯೋಚಿಸಿ. ಈ ಎ.ಕೆ.47 ರೈಫಲ್ ಎಲ್ಲರ ಕೈಗೂ ಸಿಕ್ಕೋದಲ್ಲ. ಹಿರಿಯ ಮುಖಂಡರ ಕೈಗೆ ಮಾತ್ರ ಸಿಗುವಂತದ್ದು ಅದು.

ಈ ರಮಾಕಾಂತ್ ಮೇಲೆ 8 ಕೊಲೆ ಪ್ರಕರಣ ಸೇರಿದಂತೆ ಸುಮಾರು 75 ಪ್ರಕರಣಗಳು ದಾಖಲಾಗಿದ್ದವಂತೆ. ಎಂದರೆ ಇವರನ್ನು ಹಿಡಿದುಕೊಟ್ಟವರಿಗೆ 5 ಲಕ್ಷ ಬಹುಮಾನವನ್ನು ರಾಜ್ಯ ಸರ್ಕಾರ ಘೋಷಿಸಿತ್ತು.

ಏನು ಕಾರಣ ಶರಣಾಗತಿಗೆ ?

ಮುಕ್ತಲ್‌ನ ಕಾಂಗ್ರೆಸ್ ಶಾಸಕ ಸಿ.ನರಸೀರೆಡ್ಡಿಯ ಕೊಲೆಯನ್ನು ಈಗಲೂ ಸಮರ್ಥಿಸಿಕೊಳ್ಳುವ ಈ ನಾಯಕನಿಗೆ ಉಳಿದಂತೆ ಸಶಸ್ತ್ರ ದಾಳಿಯ ಮೂಲಕ 10 ಜನರನ್ನು ಕೊಂದಿರುವ ಬಗೆಗೆ ಪಶ್ಚಾತ್ತಾಪಯಾಗಿದೆಯಂತೆ. ಇತ್ತೀಚೆಗೆ ಇವರ ಆರೋಗ್ಯ ಬೇರೆ ಕೆಟ್ಟದೆಯಂತೆ.

ಅದಕ್ಕಿಂತ ಮುಖ್ಯ ವಿಷಯ ಅಂದರೆ ಸಿಪಿಐ(ಮಾವೋವಾದಿ) ಪಕ್ಷ ದಿನೇ ದಿನೇ ದುರ್ಬಲಗೊಳ್ಳುತ್ತಿದೆಯಂತೆ. ಗ್ರಾಮಸ್ಥರು ಇವರ ಶಸ್ತ್ರಾಸ್ತ್ರ ಹೋರಾಟವನ್ನು ನಿರೀಕ್ಷೆಯಂತೆ ಬೆಂಬಲಿಸುತ್ತಿಲ್ಲವಂತೆ. ಇತ್ತೀಚಿನ ದಿನಗಳಲ್ಲಿ ಪಕ್ಷಕ್ಕೆ ಯಾವ ಹೊಸ ಕಾರ್ಯಕರ್ತರೂ ಸೇರ್ಪಡೆ ಯಾಗುತ್ತಿಲ್ಲವಂತೆ. ಇದೆಲ್ಲ ನಾವು ಅಂದಾಜು ಮಾಡ್ತಾ ಇರೋದಲ್ಲ. ಅವರೇ ಬಹಿರಂಗಪಡಿಸಿರುವ ವಿಷಯಗಳು. ರಮಾಕಾಂತ್ ಪತ್ನಿ ರಚಿತ ಕೂಡ ತೆಲ್ಕಪಲ್ಲಿ ಶಸಸ್ತ್ರ ದಳಂನ ಕಮಾಂಡರ್ ಆಗಿದ್ದವರು. ಅವರೂ ಪೋಲೀಸರಿಗೆ ಇತ್ತೀಚೆಗೆ ಶರಣಾಗಿದ್ದರು. ಇದೇನು ತಪ್ಪು ಅಂತಿರಾ? ಸರಿ ಅಂತಿರಾ?

ಆ ಪ್ರಾಣಿಗಳಿಗೆ ಶಾನೆ ಬೇಜಾರಾಗಕಿಲ್ವಾ?

ಕಟ್ಟೆ

'ಏನ್ಲಾ ನಾಣಿ ಬೆಳಿಗ್ಗ ಬೆಳಿಗ್ಗನೇ ಎತ್ಲಾಗೋ ವಂಟಿದೀಯಾ? ಕೇಳಿದ ವೆಂಕ.

'ಎತ್ನೋಡಕೆ ಓಯ್ತಾಯಿದೀನಿ ಕಣ್ಲಾ ಎಂಕ' ಎಂದ ನಾಣಿ. 'ಎಲ್ಲಿ' ಅಂದ ವೆಂಕ. ಆಸ್ನದಲ್ಲಿ (ಹಾಸನದಲ್ಲಿ!) ದನಿನ್ ಜಾತ್ರೆ ಅಂತೆ ಒಂದು ಜತೆ ಎತ್ತು ಕೊಂಡ್ಕಳನ ಅಂತ. ವಲ ಊಳಕ್ಕೆ ಬೇಕಲ್ಲ' ಎಂದು ಸಮಜಾಯಿಸಿ ನೀಡಿದ ನಾಣಿ. ಜನತಾದಳ, ಬಿಜೆಪಿ, ಕಾಂಗ್ರೆಸ್ ಶಾಸಕರುಗಳು ಬೇರೆ ಕಡೆ ಜಿಗಿಯದಂತೆ ಪಕ್ಷದಲ್ಲೇ ಹಿಡಿದಿಟ್ಟುಕೊಳ್ಳಲು ಆಯಾ ಪಕ್ಷಗಳ ಮುಖಂಡರು ಮಾಡ್ತಾ ಇರೋ ಸರ್ಕಸ್ ನೆನೆಸಿಕೊಳ್ತಾ 'ಅಸ್ನಕ್ಕೆ ಯಾಕ್ಲ ಓಯ್ತಿಯಾ? ಬೆಂಗ್ಳೂರಿಗೆ ಓಗು, ಕುದ್ರೆ ಯಾಪಾರ ನಡಿತಾ ಐತಂತೆ' ಎಂದು ಪುಕ್ಕಟೆ ಸಲಹೆ ನೀಡಿದ ವೆಂಕ(ಪುಕ್ಕಟೆ ಸಲಹೆ ಕೊಡುವವರು ಹೀಗೆ ತಾನೆ?) 'ಬೆಂಗ್ಳೂರಲ್ಲಿ ಕುದ್ರೆ ಯಾಪಾರ ಯಾಕೆ ನಡಿತವೇ? ಮೈಸೂರಲ್ಲಾದ್ರೂ ಟಾಂಗ, ಜಟಕಾ ಐತೆ. ಬೆಂಗ್ಳೂರಾಗೇನೈತೆ? ಅದಾಳಾಗೋಗ್ಲಿ ಕುದ್ರೆ ತಗಂಬಂದು ನಾನೇನ್ಮಾಡ್ಲಿ? ವಲ ಉಳಕ್ಕಾಯ್ತದಾ? ಮುಗ್ಧವಾಗಿ ಕೇಳಿದ ನಾಣಿ.

'ಬರ್ತಾ ಬರ್ತಾ ರಾಯರ ಕುದುರೆ ಕತ್ತೆ ಆಯ್ತಂತೆ' ಎಂದ ಅಲ್ಲಿಗೆ ಬಂದ ಸೀನ. 'ಯಾಕ್ಲ ಸೀನ? ಈ ಎಂಕ ನೋಡಿದ್ರೆ ಕುದ್ರೆ ಯಾಪಾರ ಅಂತಾವ್ನೆ ನೀನು ಕತ್ತೆ ಅಂತಿದೀಯ. ನಂಗೇನು ಗೊತ್ತಾಗ್ತಿಲ್ಲ' ಎಂದ ನಾಣಿ, ಅದಕ್ಕೆ ನಿಂಗೆ ಏಳಿದ್ದು ಗಾದೇನ. 'ಬರ್ತಾ ಬರ್ತಾ ರಾಯ್ರು ಕುದ್ರೆ ಕತ್ತೆ ಆಯ್ತಂತೆ' ಅಂತ. ಅಲ್ಲ ಕಣಲಾ ಈ ಎಂಕ ಏಳ್ತಿದ್ನಲ್ಲ ಕುದ್ರೆಯಾಪಾರ ಅಂತ ಅಂಗಂದ್ರೆ. ಸರ್ಕಾರ ರಚನೆ ಮಾಡಕ್ಕೆ ಸಾಸಕರನ್ನು ಖರೀದಿ ಮಾಡ್ತಾರಲ್ಲ ಅದು ಎಂದ ಸೀನ. 'ಏನ್ರಲಾ ನೀವೇಳದು? ಸಾಸಕ್ರನ್ನ ಕುದ್ರೆ, ಕತ್ತೆ ಎಮ್ಮೆ ತರ ಮಾರಕ್ಕೆ ಕೊಂಡ್ಕೊಳಕ್ಕೆ ಆಯ್ತದಾ? ಕೇಳಿದ ನಾಣಿ. 'ಯಾಕ್ಲ ಆಗಲ್ಲ? ದುಡ್ಡು... ದುಡ್ಡೊಂದು ಇರ್ಬೇಕು ಅಷ್ಟೇಯಾ' ಎಂದ ವೆಂಕ.

'ಅಲ್ಲ ಕಣ್ರಲಾ ನೀವು ನನ್ನನ್ನು ದಡ್ಡ ಅಂತೀರಾ ಆದ್ರೆ ಬುದ್‌ವಂತ್ರು ಅನ್ಕಂಡಿದೀರಲ್ಲ ನೀವು, ನೀವು ಮಾಡೋದು ಸಮನಾ? ಕೇಳಿದ ನಾಣಿ.

'ಏನ್ಲಾ? ಏನಂತಾದ್ದು ಮಾಡಿದ್ದು ನಾವು? ವೆಂಕ ಸೀನ ಇಬ್ಬರೂ ಕುತೂಹಲದಿಂದ ಕೇಳಿದರು'.

'ಅಲ್ಲ ಕಣ್ರಲಾ ಓಗಿ ಓಗಿ ನೀವು ಈ ಸಾಸಕ್ರುನ್ನ ಕುದ್ರೆ, ಕತ್ತೆಗಳಿಗೆ ಓಲುಸ್ತಿರಲ್ಲ, ಸ್ರಮಪಟ್ಟು ದುಡಿಯೋ ಜೀವಿಗಳು ಅವು. ಮೋಸ ವಂಚನೆ ಒಂದೂ ತಿಳಿದಿರೋ ಮೂಕ ಪ್ರಾಣಿಗಳು ಅವು. ಅಂತವುನ್ನ ಈ ಸಾಸಕ್ರುಗೆ ಓಲಿಸಿದ್ರೆ ಆ ಪ್ರಾಣಿಗಳಿಗೆ ಶಾನ ಬೇಜಾರಾಗಕಿಲ್ವ? ಕೇಳಿದ ನಾಣಿ.

'ಎಲಾ ಇವ್ನ. ಲೇ ನಾಣಿ ನೀನೇನೋ ಅನ್ಕಂಡಿದ್ವಿ ಕಣ್ಲಾ... ಸರ್ಯಾದ ಲಾ ಪಾಯಿಂಟೇ ಆಕಿದಿಯಾ. ಪಾಪ ಆ ಅಂದಂಗೆ ಈರಸ್ವೆವರಿಗೆ 'ಎಂತಾ ಒಗ್ಗಟ್ಟು ನೋಡ್ರಲಾ ಈರಸ್ವೆವರದ್ದು. ಯಾವ ಯಾವ ಪಾಲ್ಟಿಲಿದ್ರೂ ಯಡೂರಪ್ಪಂಗೆ ಸಪೋಲ್ಟ್ ಮಾಡ್ತಾರೆ. ಅವ್ರ ಎಲ್ಲಾ ಮಠದ ಸಾಮಿಗಳೂ ಎಂಗೆ ಒಗಟ್ಟಾಗೌವ್ರೆ ನೋಡು' ಎಂದ ಸೀನ.

'ಅಲ್ಲ 'ಇಂಗೆ ಪಕ್ಸ ಗಿಕ್ಸ ನೋಡದಂತೆ ತಮ್ಮ ತಮ್ಮ ಜಾತಿಯೋರಿಗೆ ಸಪೋಲ್ಟ್ ಮಾಡಗಿಂದ್ರೆ. ಒಂದೊಂದು ಜಾತಿಗೂ ಒಂದೊಂದು ಪಕ್ಸ ಆಯ್ತದೇನೋಪ್ಪೆ ಮುಂದ್ಕೆ ಎಂದ ವೆಂಕ.

'ಏ ನಡೀರ್ಲಾ ಯಾವಾಗ್ಲೂ ಬರೀ ಆಳ್ ರಾಜಕೀಯ ಮಾತಾಡ್ತ ಕುಂತಿರ್ತೀರಲ್ಲ, ಏನಾದ್ರೂ ಕೆಲ್ಸ ಫಲ್ಸ ನೋಡ್ರಿ. ನಾನೂ ಎತ್ತು ನೋಡಕ್ಕೆ ಓಯ್ತಿನಿ' ಎಂದ ನಾಣಿ.

'ಎಲೆಕ್ಸನ್ ಬರ್ಲಿ ಬುಡ್ಲಾ, ಕೈ ತುಂಬಾ ಕೆಲ್ಸ ಮೈ ತುಂಬಾ ಸಂಪಾದ್ನೆ' ಎಂದ ವೆಂಕ.

'ನೀನು ನಡಿ ನಾಣಿ. ಎತ್ತು ತಗೊಂಡು ನೀನೂ ಒಂದು ಎತ್ತಿನ ತರ ವರ್ಸವೆಲ್ಲ ದುಡಿ.ಅದು ಒಂದು ತಿಂಗಳಗೂ ಸಾಕಾಯ್ತದೋ ಇಲ್ವೋ ಗೊತ್ತಿಲ್ಲ. ಎಲೆಕ್ಸನ್ ಬಂದ್ರೆ ಸಾಕು ನಾವು ಒಂದು ವರ್ಸಕ್ಕೆ ಆಗೋವಷ್ಟು ದುಡ್ಕಂತೀವಿ' ಎಂದ ಸೀನ.

'ಥೂ.... ಅದೂ ಒಂದು ದುಡ್ಮೆ ಏನ್ರಲಾ? ಅಂಗೆ ದುಡಿದಿದ್ನೆಲ್ಲಾ ಕುಡಿದು ಕಳ್ದಾಕ್ತೀರಾ. ಮೈ ಮುರ್ದು ದುಡಿದಿದ್ದೇ ಕಣ್ರಲಾ ಮೈ ಅತ್ತದು' ಎಂದ ನಾಣಿ.

ವಿ.ಎಸ್.

ಹಳಿ ಹತ್ತದ ರೈಲ್ವೆ ಅಭಿವೃದ್ಧಿ

ದೇಶದ ಅಭಿವೃದ್ಧಿಯಲ್ಲಿ ಸಾರಿಗೆ ವ್ಯವಸ್ಥೆ -ಅದರಲ್ಲೂ ರೈಲು ಸಂಚಾರ ವ್ಯವಸ್ಥೆಯು ಅತ್ಯಂತ ಮಹತ್ವದ್ದು. ಆದರೆ ಆಳುವ ಸರ್ಕಾರಗಳು ಇದನ್ನು ಗುರುತಿಸುವಲ್ಲಿ ವಿಫಲವಾಗಿವೆ. ಆಗಿರುವ ರೈಲ್ವೆ ಕೆಲಸಗಳಲ್ಲಿಯೂ ಕರ್ನಾಟಕಕ್ಕೆ ಅನ್ಯಾಯವಾಗಿದೆ. ಮಂಗಳೂರು, ಬೆಂಗಳೂರು ಮಾರ್ಗ ಅದರ ಜೀವಂತ ಉದಾಹರಣೆ

ಬಾಲಕೃಷ್ಣ ಶೆಟ್ಟಿ

ಇದು ಹೆಸರಾಂತ ಸಾಹಿತಿ, ಜನಶಕ್ತಿಯ ಸ್ಥಾಪಕ ಪಾದಕ ಕುಳಕುಂದ ಶಿವರಾಯರು (ನಿರಂಜನ) ಡ ಕನಸು. ಸಾಧಾರಣ 50 ವರ್ಷಗಳ ಹಿಂದಿನ ಾತು. ಮಂಗಳೂರು ಬಂದರು ಭಿವೃದ್ಧಿಯಾಗುತ್ತಿದ್ದರೂ, ಅದಕ್ಕೆ ಒಳನಾಡು ದೇಶಗಳಿಂದ ರೈಲು ಸಂಪರ್ಕ ಇಲ್ಲದೆ ಸೊರಗಿತ್ತು. ಸರಗೋಡು, ಮಂಗಳೂರು, ಹಾಸನದ ಜನರಿಗೆ ರ್ನಾಟಕ ರಾಜ್ಯದ ರಾಜಧಾನಿ ಬೆಂಗಳೂರಿಗೆ ಂಕ್ ಮಾಡುವ ರೈಲು ಇಲ್ಲವಾಗಿತ್ತು. ಆದ್ದರಿಂದ ಲೆನಾಡಿನ ಮೂಲಕ 'ಘಾಟಿ'ಯಲ್ಲಿ ಹಾದು ೋಗುವ 'ಚುಕ್‌ಪುಕ್ ರೈಲು' ನ ಕನಸು ಕಂಡಿದ್ದರು, ಹಿತಿ ನಿರಂಜನ. ಇದು ಈ ಪ್ರದೇಶದ ಜನರ ಶಯವೂ ಆಗಿತ್ತು.

ಹಲವು ವರ್ಷಗಳ ದೀರ್ಘ ಹೋರಾಟ, ತ್ತಡಗಳ ನಂತರ ಬೆಂಗಳೂರು-ಮಂಗಳೂರು ಡುವೆ ಮೀಟರ್ ಗೇಜ್ ರೈಲು ಬಂದರೂ ಅದು ಬ್ರಾಡ್‌ಗೇಜ್ ಆಗಿ ಪರಿವರ್ತನೆಗೆಂದು 15 ರ್ಷಗಳಿಂದ ಕಾಯುತ್ತಿದೆ. ಈಗ ಗೇಜ್ ರಿವರ್ತನೆಯಾಗಿ ಗೂಡ್ಸ್ ರೈಲು ಓಡಾಡುತ್ತಿದ್ದರೂ ್ರಯಾಣಿಕರ ರೈಲು ಬರಲೇ ಇಲ್ಲ. ಕರ್ನಾಟಕ ೇರಳ ಪ್ರಯಾಣಿಕರ ವೇದಿಕೆ (ಕೆಕೆಟಿಎಫ್) ರ್ನಾಟಕ ಚೇಂಬರ್ಸ್ ಆಫ್ ಕಾಮರ್ಸ್ ಎಫ್‌ಕೆಸಿಸಿಐ) ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ೊದಲಾದ ಸಂಘಟನೆಗಳು, ರಾಜಕೀಯ ಪಕ್ಷಗಳು ಡೆಸಿದ ಚಳುವಳಿ, ರೈಲ್ವೆ ಮಂತ್ರಿ ಲಾಲೂ ಪ್ರಸಾದ್ ಯಾದವ್, ರೈಲ್ವೆ ಸಂಸದೀಯ ಸ್ಥಾಯಿ ಸಮಿತಿ ಅಧ್ಯಕ್ಷ ಬಸುದೇವ್ ಆಚಾರ್ಯ ಮೊದಲಾದವರಿಗೆ ೀಡಿದ ಮನವಿಗಳ ನಂತರ 'ಈಗ ಆರಂಭವಾಗುತ್ತದೆ, ನಾಳೆ ಆರಂಭವಾಗುತ್ತದೆ' ಎಂಬ ೇಳಿಕೆಗಳು ಬಂದರೂ ರೈಲು ಮಾತ್ರ ಬರಲೇ ಇಲ್ಲ.

ಕಳೆದವಾರ ಕರ್ನಾಟಕದಲ್ಲಿ ಬೀಡು ಬಿಟ್ಟಿದ್ದ ೇಂದ್ರ ರೈಲ್ವೆ ಖಾತೆಯ ರಾಜ್ಯ ಸಚಿವ ಆರ್.ವೇಲುರವರು ನವೆಂಬರ್ 15 ರೊಳಗೆ ಬೆಂಗಳೂರು- ಹಾಸನ - ಮಂಗಳೂರು ಪ್ರಯಾಣಿಕ ರೈಲು ಸೇವೆ ಪ್ರಾರಂಭಿಸಲಾಗುವುದು ಎಂದು ಭರವಸೆ ಇತ್ತಿದ್ದಾರೆ. ಕಳೆದ 1 ವರ್ಷದಿಂದ ಪದೇ ಪದೇ ಈ ಮಾತನ್ನು ಕೇಳಿ ಜನರಿಗೆ ರೋಸಿ ಹೋಗಿದೆ. ಖಾಸಗಿ ಬಸ್ಸುಗಳ ಲಾಬಿಯಿಂದಾಗಿ ಈ ರೀತಿ ಆಗುತ್ತಿದೆ ಎಂದು ಮಾತಾಡಿಕೊಳ್ಳುತ್ತಿದ್ದಾರೆ. ಇದೇ ಸಂದರ್ಭದಲ್ಲಿ ಸಚಿವ ವೇಲುರವರು ಚೆನ್ನೈನಿಂದ ಮಂಗಳೂರಿಗೂ ರೈಲು ಸಂಪರ್ಕ ಕಲ್ಪಿಸುವುದಾಗಿ ಹೇಳಿದ್ದಾರೆ. ಒಂದು ವೇಳೆ ನವೆಂಬರ್ 15 ರೊಳಗೆ ಆರಂಭವಾದರೂ ಏನಾದರೂ ಒಂದು ನೆಪವೊಡ್ಡಿ ಅರ್ಧದಲ್ಲಿಯೇ ರೈಲು ನಿಂತರೆ ಆಶ್ಚರ್ಯಪಡಬೇಕಾದುದೇನಿಲ್ಲ. ಆದ್ದರಿಂದ ಕರ್ನಾಟಕ ಜನತೆ ಈ ಬಗ್ಗೆ ಕಾಳಜಿ ವಹಿಸಿ ರೈಲು ಸಂಪರ್ಕ ಜಾರಿಯಾಗುವಂತೆ ಒತ್ತಡ ತರಬೇಕಾಗಿದೆ.



ರಾಜ್ಯದಲ್ಲಿ ನೆನೆಗುದಿಗೆ ಬಿದ್ದಿರುವ ಇತರೆ ಯೋಜನೆಗಳು :

1. ಬಿಜಾಪುರದಿಂದ ಹಾದು ಹೋಗುವ ಸೋಲಾಪುರ-ಗದಗ ಮೀಟರ್ ಗೇಜ್ ಮಾರ್ಗ ಆರಂಭವಾದುದು 1880 ರಲ್ಲಿ ಅಂದರೆ 127 ವರ್ಷಗಳ ಹಿಂದೆ ಇದು ದೇಶದಲ್ಲಿಯೇ ಮೂರನೇ ರೈಲು ಮಾರ್ಗ. 16 ವರ್ಷಗಳ ಹಿಂದೆ ಈ ಮಾರ್ಗವನ್ನು ಮೀಟರ್ ಗೇಜ್‌ನಿಂದ ಬ್ರಾಡ್‌ಗೇಜ್‌ಗೆ ಪರಿವರ್ತಿಸಲು ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಯ್ತು. ಆದರೆ ದಶಕಗಳಿಂದ ಕೆಲಸ ಆಮೆ ಗತಿಯಲ್ಲಿ ಸಾಗಿತು.1998ರಲ್ಲಿ ಸೋಲಾಪುರ-ಭಿಜಾಪುರ ಮಾರ್ಗ ಪೂರ್ಣಗೊಂಡಿತು. 2003ರಲ್ಲಿ ಸಿಪಿಐ(ಎಂ) ಸೇರಿದಂತೆ ಹಲವಾರು ರಾಜಕೀಯ ಪಕ್ಷಗಳು, ಸಂಘಟನೆಗಳು 52 ದಿನಗಳ ನಿರಂತರ ಹೋರಾಟ ನಡೆಸಿದ ಬಳಿಕ ಇಂದು ಬಿಜಾಪುರದಿಂದ ಬಾಗಲಕೋಟೆಯವರೆಗೆ ಯೋಜನೆ ಪೂರ್ಣಗೊಂಡಿದೆ. ಆದರೆ ಗದಗ ಬಾಗಲಕೋಟೆ ಬ್ರಾಡ್‌ಗೇಜ್ ಮಾರ್ಗ ಪರಿವರ್ತನೆ ಇನ್ನೂ ಉಳಿದಿದೆ.

ಈ ಮಾರ್ಗ ಪೂರ್ಣಗೊಂಡಲ್ಲಿ ಹುಬ್ಬಳ್ಳಿಯ ಮೂಲಕ ವಾರಕ್ಕೆ ಎರಡು ಬಾರಿ ಸುತ್ತು ಬಳಸಿ ಹೋಗುತ್ತಿರುವ ಸಂಪರ್ಕ ಕ್ರಾಂತಿ ಎಕ್ಸ್‌ಪ್ರೆಸ್ ಅಥವಾ ದೆಹಲಿಗೆ ತಲುಪುವ ಇನ್ನಾವುದೇ ರೈಲುಗಳ ಪ್ರಯಾಣದ ಅವಧಿ 8 ಗಂಟೆಗಳಷ್ಟು ಕಡಿಮೆಯಾಗುತ್ತದೆ.



2. ಹುಬ್ಬಳ್ಳಿ -ಅಂಕೋಲಾ ರೈಲು ಮಾರ್ಗಕ್ಕೆ ಅಡಿಗಲ್ಲು ಹಾಕಿದ್ದು 1998ರಲ್ಲಿ, ಅಂದಿನ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿಯವರು ಅದರ ನಂತರ 6 ವರ್ಷಗಳ ಕಾಲ ಅವರೇ ಅಧಿಕಾರದಲ್ಲಿದ್ದರು. ಆ ಪಕ್ಷಕ್ಕೆ ಸೇರಿದ ಬಸವರಾಜ ಪಾಟೀಲ್ ಯತ್ನಾಳ್ ರೈಲ್ವೆ ಖಾತೆಯ ರಾಜ್ಯ ಸಚಿವರಾಗಿದ್ದು ಉದ್ದುದ್ದ ಬೊಗಳೆ ಬಿಡುತ್ತಿದ್ದರು. ಆದರೆ ಈ ಅವಧಿಯಲ್ಲಿ ರೈಲ್ವೆ ಬಜೆಟ್‌ನಲ್ಲಿ ವಿನಿಯೋಗಿಸಿದ ಹಣ ಏನೇನೂ ಸಾಲದು. ಕೊಂಕಣ ರೈಲ್ವೆಗೆ ಲಿಂಕ್ ಆಗಲಿರುವ ಈ ಮಾರ್ಗ ಕರಾವಳಿಗೂ ಒಳನಾಡಿಗೂ ಸಂಪರ್ಕ ಕಲ್ಪಿಸಲಿದೆ.

ಕರಾವಳಿಯುದ್ದಕ್ಕೂ ಕೊಂಕಣ ರೈಲ್ವೆ ಹಾದುಹೋಗುತ್ತಿದ್ದರೂ ರಾಜ್ಯದ ಇತರ ಭಾಗಗಳಿಂದ ಅದಕ್ಕೆ ಯಾವುದೇ ಸಂಪರ್ಕವನ್ನು ಇನ್ನೂ ಕಲ್ಪಿಸಲಾಗಿಲ್ಲ. ಈ ನಿಟ್ಟಿನಲ್ಲಿ ಮಂಗಳೂರು-ಬೆಂಗಳೂರು, ಅಂಕೋಲಾ-ಹುಬ್ಬಳ್ಳಿ ಮಾರ್ಗಗಳು ಸಾಕಷ್ಟು ಸಹಕಾರಿಯಾಗಲಿವೆ.

3. ಶಿಡ್ಲಘಟ್ಟ-ಚಿಂತಾಮಣಿ-ಶ್ರೀನಿವಾಸಪುರ ಮೂಲಕ ಸಂಚರಿಸುವ ಬಂಗಾರಪೇಟೆ-ಬೆಂಗಳೂರು ಬ್ರಾಡ್‌ಗೇಜ್ ಮಾರ್ಗ ಕೋಲಾರ ಜನತೆಯ ಬಹುದಿನಗಳ ಬೇಡಿಕೆ. ಈ ಮಾರ್ಗದಲ್ಲಿ ಮೀಟರ್ ಗೇಜ್ ರೈಲು ಚಲಿಸುತ್ತಿತ್ತು. ಅದು ನಿಂತು ಈಗಾಗಲೇ 30 ವರ್ಷಗಳು ಕಳೆದಿವೆ. ಆದರೂ ಕಾಮಗಾರಿಗಳು ನಡೆದಿಲ್ಲ. ಕೋಲಾರ ಜಿಲ್ಲೆಯ ವಿವಿಧ ರಾಜಕೀಯ ಪಕ್ಷಗಳು, ಸಂಘಟನೆಗಳು ಈ ಮಾರ್ಗದ ಕಾಮಗಾರಿ ನಡೆಸಲು ಒತ್ತಾಯ ಹೇರಿದ ನಂತರವೇ ಅದು ಕಾರ್ಯಗತಗೊಳ್ಳುತ್ತಿದೆ.

ಹಿಂದುಳಿದ ಪ್ರದೇಶಗಳ ಅಭಿವೃದ್ಧಿಗಾಗಿ:

ಬೀದರ್-ಗುಲ್ಬರ್ಗ ಮಾರ್ಗ ಮಂಜೂರಾಗಿದ್ದರೂ ಹಣ ಬಿಡುಗಡೆಯಾಗದೆ ಕಾಮಗಾರಿಗಳು ನಿಧಾನಗತಿಯಲ್ಲಿ ಸಾಗುತ್ತಿವೆ. ಈ ಮಾರ್ಗ ಪೂರ್ಣಗೊಂಡಲ್ಲಿ ಹಿಂದುಳಿದ ಪ್ರದೇಶವಾದ ಬೀದರ್ ಜಿಲ್ಲೆಗೆ ಅನುಕೂಲವಾಗಲಿದೆ. ಜತೆಯಲ್ಲಿ ಬೆಂಗಳೂರಿನಿಂದ ದೆಹಲಿಗೆ ಹೋಗಲು 300 ಕಿ.ಮೀ.ನಷ್ಟು ದಾರಿ ಕಡಿಮೆಯಾಗುತ್ತದೆ. ಅಲ್ಲದೆ ಗುಲ್ಬರ್ಗದಿಂದ ಹೈದರಾಬಾದ್ ಮೂಲಕ ಬೆಂಗಳೂರಿಗೆ ಇನ್ನೊಂದು ಮಾರ್ಗ ಕಲ್ಪಿಸಿದಂತಾಗುತ್ತದೆ.

ಹತ್ತು ವರ್ಷಗಳ ಹಿಂದೆಯೇ ಕೊಪ್ಪಳ ಜಿಲ್ಲೆಯ ಗಿಣಗೇರಾ ಮತ್ತು ಮುನಿರಾಬಾದ್‌ನಿಂದ ಆಂಧ್ರಪ್ರದೇಶದ ಮೆಹಬೂಬ ನಗರಕ್ಕೆ ರೈಲು ಮಾರ್ಗವನ್ನು ಹಾಕಲು ಯೋಜನೆ ರೂಪಿಸಲಾಗಿತ್ತು. ಈ ಕುರಿತು ಯಾವುದೇ ಮುನ್ನಡೆ ಸಾಧಿಸಲಾಗಿಲ್ಲ. ಪ್ರಾದೇಶಿಕ ಅಸಮತೋಲನವನ್ನು ನೀಗಿಸಲು ವರದಿ ನೀಡಿದರೆ ಸಾಲದು. ಸಾರಿಗೆ ಸಂಪರ್ಕಗಳನ್ನು ಉತ್ತಮಗೊಳಿಸಿದಲ್ಲಿ ಹಿಂದುಳಿದ ಪ್ರದೇಶವನ್ನು ಅಭಿವೃದ್ಧಿಗೊಳಿಸಲು ಸಾಧ್ಯ. ಸದ್ಯ ಗುಲ್ಬರ್ಗಾದಿಂದ ಬಳ್ಳಾರಿ ತಲುಪಲು ಗುಂಟಕಲ್ ಮಾರ್ಗವಾಗಿ ಸುತ್ತು ಬಳಸಿ ಬರಬೇಕಾಗುತ್ತದೆ. ಈ ಮಾರ್ಗ ಪೂರ್ಣಗೊಂಡಲ್ಲಿ ನೇರ ಮಾರ್ಗ ಕಲ್ಪಿಸಿದಂತಾಗುತ್ತದೆ.

ಪುಟ 6 ಕ್ಕೆ

150 ವರ್ಷಗಳ ಇತಿಹಾಸ

ಭಾರತೀಯ ರೈಲ್ವೆಗೆ 150 ವರ್ಷಗಳ ಇತಿಹಾಸವಿದೆ. ಬ್ರಿಟಿಷರು ದೇಶದ ಒಳನಾಡಿನಲ್ಲಿರುವ ಕಚ್ಚಾವಸ್ತುಗಳನ್ನು ಬಂದರುಗಳ ಮೂಲಕ ಇಂಗ್ಲೆಂಡಿಗೆ ಸಾಗಿಸಲು ರೈಲು ಮಾರ್ಗಗಳ ಸ್ಥಾಪನೆಗೆ ಹೆಚ್ಚು ಒತ್ತು ಕೊಟ್ಟಿದ್ದರು ಎಂದು ಹೇಳಲಾಗುತ್ತಿದೆ. ಆದರೆ ದೇಶಕ್ಕೆ ಸ್ವಾತಂತ್ರ ಬಂದ ನಂತರ ರೈಲ್ವೆ ಪ್ರಯಾಣಿಕರ ಸಂಖ್ಯೆ ಹೆಚ್ಚಾಯಿತೆ ಹೊರತು ರೈಲು ಮಾರ್ಗದ ಉದ್ದ ತೀವ್ರ ಹೆಚ್ಚಳವೇನೂ ಆಗಲಿಲ್ಲ.

ಉದಾಹರಣೆಗೆ ಸ್ವಾತಂತ್ರ ಪೂರ್ವದಲ್ಲಿ ದೇಶದಲ್ಲಿ 51,000 ಕಿ.ಮೀ. ಉದ್ದದ ರೈಲು ಮಾರ್ಗವಿತ್ತು. ಆದರೆ ಕಳೆದ 60 ವರ್ಷಗಳಲ್ಲಿ ಅದಕ್ಕೆ ಸೇರಿಸಿದ್ದು ಕೇವಲ 11,000 ಕಿ.ಮೀ. ಮಾತ್ರ. ಆದರೆ ಚೀನಾದೇಶವು ಕಳೆದ 50 ವರ್ಷಗಳಲ್ಲಿ 64,000 ಕಿ.ಮೀ. ಉದ್ದದ ನೂತನ ರೈಲು ಮಾರ್ಗವನ್ನು ನಿರ್ಮಿಸಿದೆ.

ದೇಶದ ಪ್ರಥಮ ರೈಲು ಮಾರ್ಗವನ್ನು 1852ರಲ್ಲಿ ಥಾಣೆಯಿಂದ ಮುಂಬೈವರೆಗೆ ಹಾಕಲಾಗಿತ್ತು. 1855 ರಲ್ಲಿ ರೈಲ್ವೆ ಕಂಪನಿಯನ್ನು ರಚಿಸಲಾಗಿದ್ದು ಅದೇ ವರ್ಷ ಅಂಕಲೇಶ್ವರದಿಂದ ಗುಜರಾತಿನ ಉತ್ರಾನ್‌ವರೆಗೆ ಮಾರ್ಗವನ್ನು ಹಾಕಲಾಯಿತು. ನಂತರ 1864 ರಲ್ಲಿ ಅದನ್ನು ಮುಂಬೈವರೆಗೆ ವಿಸ್ತರಿಸಲಾಯಿತು.

ದೇಶದ ಜೀವನಾಡಿಯೆಂದು ಹೆಸರಾಗಿರುವ ಭಾರತೀಯ ರೈಲ್ವೆ 1951ರಲ್ಲಿ ರಾಷ್ಟ್ರೀಕರಣಗೊಂಡಿತು. ಅದಕ್ಕೂ ಮೊದಲು ಬ್ರಿಟಿಷ್ ಕಂಪನಿಯ ಅಡಿಯಲ್ಲಿ ರೈಲ್ವೆ ಕಾರ್ಯ ನಿರ್ವಹಿಸುತ್ತಿರುವುದು ಮಾತ್ರವಲ್ಲದೆ, ವಿವಿಧ ರಾಜರುಗಳ ಆಡಳಿತದಲ್ಲಿ 32 ಸಂಸ್ಥೆಗಳಿದ್ದವು.

1880 ರ ಹೊತ್ತಿಗೆ ದೇಶದಾದ್ಯಂತ 14,500 ಕಿ.ಮೀ. ಮಾರ್ಗಗಳನ್ನು ಹೊಂದಿದ್ದ ರೈಲ್ವೆ ಮುಖ್ಯವಾಗಿ ಮುಂಬೈ, ಚೆನ್ನೈ ಮತ್ತು ಕಲ್ಕತ್ತ ಬಂದರುಗಳಿಗೆ ಸಂಪರ್ಕ ಹೊಂದಿತ್ತು.

ಮೊದಲ ಜಾಗತಿಕ ಮಹಾ ಯುದ್ಧದಿಂದಾಗಿ ರೈಲ್ವೆ ತೀವ್ರ ನಷ್ಟಕ್ಕೆ ಒಳಗಾಯಿತು. ಆದ್ದರಿಂದ 1920 ರಲ್ಲಿ ರೈಲ್ವೆಗೆ ಪ್ರತ್ಯೇಕ ಬಜೆಟ್ ಮಂಡನೆ ಆರಂಭವಾಗಿ ದೇಶದ ವಾರ್ಷಿಕ ಬಜೆಟ್‌ನಿಂದ ಪೂರಕ ಅನುದಾನ ನೀಡುವ ಪದ್ಧತಿ ಪ್ರಾರಂಭವಾಯಿತು. ಇಂದಿಗೂ ಆ ಪದ್ಧತಿ ಮುಂದುವರಿಯುತ್ತಿದೆ. ಆದರೆ ಸ್ವಾತಂತ್ರ್ಯ ಭಾರತದಲ್ಲಿ ಅನುದಾನ ವರ್ಷದಿಂದ ವರ್ಷಕ್ಕೆ ಅನುದಾನ ತೀವ್ರವಾಗಿ ಕುಸಿಯುತ್ತಿದೆ.

ರೈಲ್ವೆ ಸ್ಥಾಯಿ ಸಮಿತಿ ಅಧ್ಯಕ್ಷ ಹಾಗೂ ಲೋಕಸಭೆಯಲ್ಲಿ ಸಿಪಿಐ(ಎಂ)ನ ನಾಯಕರಾಗಿರುವ ಬಸುದೇವ ಆಚಾರ್ಯ ಹೇಳುವಂತೆ 'ಮೊದಲ ಪಂಚವಾರ್ಷಿಕ ಯೋಜನೆಯಲ್ಲಿ ರೈಲ್ವೆಗೆ ಅದರ ಖರ್ಚಿನ ಶೇ 75 ರಷ್ಟು ಬಜೆಟ್ ಬೆಂಬಲವಿದ್ದರೆ, 10ನೇ ಪಂಚವಾರ್ಷಿಕ ಯೋಜನೆಯಲ್ಲಿ ಅದು ಶೇ.24 ಕ್ಕೆ ಇಳಿದಿದೆ. ಕೇಂದ್ರ ಸರ್ಕಾರವು ಬಜೆಟ್ ಬೆಂಬಲವನ್ನು ಕಡಿತಗೊಳಿಸಿದ್ದು, ಮಾತ್ರವಲ್ಲದೆ ಇಲಾಖೆಯಲ್ಲಿರುವ ಹೆಚ್ಚುವರಿ ಹಣವನ್ನು ಸಹ ವಿಸ್ತರಣೆಗೆ ಉಪಯೋಗಿಸಿ ಕೊಳ್ಳಲು ಅವಕಾಶ ನೀಡುತ್ತಿಲ್ಲ. ಇದರಿಂದಾಗಿ ಸದ್ಯ ವರ್ಷಕ್ಕೆ ಸರಾಸರಿ ಕೇವಲ 100 ರಿಂದ 130 ಕಿ.ಮೀ ಉದ್ದದ ಹೊಸ ರೈಲ್ವೆ ಮಾರ್ಗ ಮಾತ್ರ ನಿರ್ಮಾಣವಾಗುತ್ತಿದೆ.

ಹೇಸಿಗೆ ತರಿಸುವ ಬೆಳವಣಿಗೆಗಳು ಜನಾದೇಶಕ್ಕಾಗಿ ಚುನಾವಣೆಯೊಂದೇ

ಬಿಜೆಪಿ ಚುನಾವಣೆಗೆ ಹೋಗೋಣ ಎಂದು ಸಭೆಗಳಲ್ಲಿ ಸಾರುತ್ತಿದೆ. ಕಾಂಗ್ರೆಸ್‌ನದು ಅದೇ ಧಾಟಿ. ಜೆಡಿ(ಎಸ್)ನ ರಾಷ್ಟ್ರಾಧ್ಯಕ್ಷರು, ಮಾಜಿ ಮುಖ್ಯಮಂತ್ರಿಗಳು ಚುನಾವಣೆಯನ್ನು ಪ್ರತಿಪಾದಿಸುತ್ತಿದ್ದಾರೆ. ಆದರೆ ಆ ಪಕ್ಷಗಳ ಶಾಸಕರುಗಳಲ್ಲಿ ಸಹಮತವಿಲ್ಲ. ಹೇಗಾದರೂ, ಯಾರ ಜೊತೆಗಾದರೂ ಎಂತಹದ್ದೋ ಒಂದು ಸರ್ಕಾರವನ್ನು ರಚಿಸಿಬಿಟ್ಟರೆ ಸಾಕು, ಎಂಬ ತೀರಾ ಅವರ ವ್ಯವಹಾರಿಕ ಪ್ರತಿಪಾದನೆಯಿಂದ ಗೊಣಗುತ್ತಿದ್ದಾರೆ. ಅಂದರೆ ಅವರಿರುವ ಪಕ್ಷವಾಗಲಿ, ರಚಿಸುವ ಸರ್ಕಾರವಾಗಲಿ ಯಾಕೆ? ಯಾವ ಹಿತಾಸಕ್ತಿಗಳಿಗೆ, ಯಾವ ನೀತಿಗಳ ಆಧಾರದಲ್ಲಿ ಎಂಬ ಬಗ್ಗೆ ಕಿಂಚಿತ್ತೂ ಕಾಳಜಿಯಿಲ್ಲದೇ ಕುರ್ಚಿಯ ಸುತ್ತ ತಿರುಗುತ್ತಿದ್ದಾರೆ. ಇಂತಹ ಸಂದರ್ಭ ಸಾಧಕತೆಯನ್ನು ಕರ್ನಾಟಕ ಹಿಂದೆಂದೂ ಕಂಡಿಲ್ಲ.

ಪಕ್ಷದ ನಿಲುವೇನಾಗಿರಲಿ, ಶಾಸಕರೇ ಪಕ್ಷದ ನಿಲುವನ್ನು ಬದಲಿಸುವಂತಹ ಸ್ಥಿತಿ. ಏರ್ಪಟ್ಟಿರುವುದು ಆ ಪಕ್ಷಗಳಲ್ಲಿ ಕಾಣುತ್ತದೆ. ಅಂತಹ ಗುಂಪುಗಳನ್ನು ಮನವೊಲಿಸಲು ವಿಶೇಷವಾಗಿ ಜೆಡಿ(ಎಸ್) ನಾಯಕತ್ವ ಪ್ರಯಾಸಪಡುತ್ತಿದೆ. ಇತ್ತೀಚಿಗೆ 'ರೆಸಾರ್ಟ್' ಸಮಾಲೋಚನೆ ನಡೆದಿದೆ. ಈ ಶಾಸಕರನ್ನು ಚುನಾವಣೆಗೆ ಸನ್ನದ್ಧರಾಗುವಂತೆ ಮನವೊಲಿಸಲು ಕುಮಾರಸ್ವಾಮಿ ಹರಸಾಹಸ ಪಟ್ಟಿದ್ದಾರೆ. ಕೊನೆಗೆ ಹಲವು ಭರವಸೆಗಳ ನಂತರ ಆಯ್ತು ಎಂದು ಒಲ್ಲದ ಮನಸ್ಸಿನಿಂದ ಒಪ್ಪಿದ್ದರಿಂದ ರೆಸಾರ್ಟ್ ರಾಜಕೀಯ ಸಮಾರೋಪಗೊಂಡಿದೆ.

ಬಿಜೆಪಿಯ ನಾಯಕರು ಯುದ್ಧ ಸಾರಿ ಊರೂರು ತಿರುಗುತ್ತಿದ್ದರೂ ಇನ್ನು ಯಾರಾದರೂ ಶಾಸಕರು ಹೇಳಿ ಕಳಿಸುತ್ತಾರೋ ಮರು ಮೈತ್ರಿ ಮತ್ತೇ ಕೂಡಿತೇ ಎಂದು ಜಪ ಮಾಡುತ್ತಲೇ ಇದ್ದಾರೆ. ಒಂದು ಸುದ್ದಿ ಹಿಡಿದು ಬೆಂಗಳೂರಿಗೆ ಸದಾನಂದಗೌಡ ಓಡಿ ಬರುತ್ತಾರೆ. ಅನಂತಕುಮಾರ್ ದೆಹಲಿಗೆ ಹಾರುತ್ತಾರೆ. ಯಡಿಯೂರಪ್ಪ ಕಣ್ಣೀರೂ ಹಾಕಿ ಭಾಷಣ ಮಾಡುತ್ತಾರೆ.

ಕಾಂಗ್ರೆಸ್ ನಾಯಕರು ಜೆಡಿ(ಎಸ್) ಮೈತ್ರಿ ನಿರಾಕರಿಸಿದರೂ ಸರ್ಕಾರ ಆಗುವುದಾದರೆ ನೋಡೋಣ ಎಂದು ಕೆಲವರಿದ್ದಾರೆ ರಾಷ್ಟ್ರಪತಿ ಆಡಳಿತವೆಂದರೆ ತಮ್ಮದೇ ಆಡಳಿತ ಅಲ್ಲವೇ? ಸರ್ಕಾರ ರಚನೆ ಬೇಡ ಎಂಬುದು ಅಲ್ಲಿದೆ. ಆದರೆ ಹೈಕಮಾಂಡ್ ಆದೇಶಕ್ಕೆ ಕಾದಿದ್ದಾರೆ.

ಇದೊಂದು ಗೊಂದಲ ಎಬ್ಬಿಸಿದ ಸ್ಥಿತಿ. ಇಂತಹ ಅಧಃಪತನದ ರಾಜಕಾರಣವೇ ಒಂದು ವ್ಯವಹಾರ ದಂಧೆ! ಇದಕ್ಕೆ ಅವಕಾಶ ನೀಡದಂತೆ ಹೊಸ ಜನಾದೇಶ ಪಡೆಯಲು ಚುನಾವಣೆ ನಡೆಸುವುದೇ ಅನಿವಾರ್ಯ.

ರೈಲ್ವೆ ಅಭಿವೃದ್ಧಿ............

ಪುಟ 5 ರಿಂದ

ಹಿಂದುಳಿದ ಪ್ರದೇಶಗಳನ್ನು ಜೋಡಿಸಲು ಇನ್ನೊಂದು ಮಾರ್ಗ ಬೆಂಗಳೂರು- ಬಾಗಲಕೋಟೆ- ಕುಡಚಿ. ಲೋಕಾಪುರ, ಮುಧೋಳ, ಜಮಖಂಡಿ ಮತ್ತು ತೆರದಾಳ ಮೂಲಕವಾಗಿ ಈ ಮಾರ್ಗವನ್ನು ರಚಿಸಬೇಕೆಂದು 55 ವರ್ಷಗಳ ಹಿಂದೆಯೇ ಸರ್ವೆ ನಡೆಸಲಾಗಿತ್ತು. ಇದರಿಂದ ಆ ಪ್ರದೇಶದ ಬಟ್ಟೆ, ಸಕ್ಕರೆ, ಸುಣ್ಣದ ಕಲ್ಲು ಕಾರ್ಖಾನೆಗಳ ಬೆಳವಣಿಗೆಗಳಿಗೂ ಅನುಕೂಲವಾಗುತ್ತಿತ್ತು.

ನಮ್ಮ ದೇಶದ ಹಾಗೂ ರಾಜ್ಯದ ಆಳುವ ಸರ್ಕಾರಗಳಿಗೆ ತಮ್ಮ ವರ್ಗ ಹಿತಾಸಕ್ತಿ ಮಾತ್ರವೇ ಗಮನದಲ್ಲಿದೆ ಹೊರತು ಇಡೀ ಪ್ರದೇಶದ ಬೆಳವಣಿಗೆ ಆಗಬೇಕು ಎಂಬ ಕಣ್ಣೋಟವೇ ಇಲ್ಲವಾಗಿದೆ.

ಬೆಂಗಳೂರು, ರಾಯಚೂರು, ಗುಲ್ಬರ್ಗಾ ಮಾರ್ಗದಲ್ಲಿ ಇನ್ನೊಂದು ರೈಲು

ಕೃಷಿ ಬಿಕ್ಕಟ್ಟಿನ ಕಾರಣದಿಂದ ಉತ್ತರ ಕರ್ನಾಟಕದ ಗುಲ್ಬರ್ಗಾ, ಬಿಜಾಪುರ, ರಾಯಚೂರು ಭಾಗಗಳಿಂದ ಬೆಂಗಳೂರಿನೆಡೆಗೆ ಗುಳೆ ಹೋಗುವುದು ದಿನೇ ದಿನೇ ಹೆಚ್ಚುತ್ತಿದೆ. ಇವರೆಲ್ಲರೂ ಕೃಷಿ ಕೂಲಿಕಾರರಾದುದರಿಂದ ದುಬಾರಿ ಹಣ ತೆತ್ತು,'ರಿಸರ್ವ್' ಮಾಡಿ ಹೋಗುವುದಾಗಲೀ ಅಥವಾ ಬಸ್ಸುಗಳಲ್ಲಿ ಪ್ರಯಾಣಿಸುವುದಾಗಲಿ ಸಾಧ್ಯವಿಲ್ಲ. ಆದ್ದರಿಂದ ಜನರು ನೂಕುನುಗ್ಗಲಿರುವ ಜನರಲ್ ಕಂಪಾರ್ಟ್‌ಮೆಂಟ್‌ನಲ್ಲೇ ಒಂದೇ ಕಾಲಿನಲ್ಲಿ ನಿಂತುಕೊಂಡು ಹೋಗಬೇಕಾಗುತ್ತದೆ. ಈಗಿರುವ ರೈಲುಗಳಿಗೆ ಇನ್ನೂ ಹೆಚ್ಚಿನ ಬೋಗಿಗಳನ್ನು ಸೇರಿಸುವುದು ಅಸಾಧ್ಯವಾಗಿರುವ ಸಂದರ್ಭದಲ್ಲಿ ಹೊಸ ರೈಲನ್ನು ಆರಂಭಿಸಬೇಕಾಗಿದೆ.

ನಗರಗಳಿಗೆ ಬರುವ ಕೂಲಿಕಾರರಿಗೆ, ಬಡಜನರಿಗೆ ಅನುಕೂಲವಾಗುವಂತೆ 'ಕೂಲಿ ಎಕ್ಸ್‌ಪ್ರೆಸ್' ರೈಲನ್ನು ಆರಂಭಿಸಬೇಕೆಂದು ಇತ್ತೀಚಿಗೆ ಗುಲ್ಬರ್ಗಾದಲ್ಲಿ ನಡೆದ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ರಾಜ್ಯ ಸಮಿತಿ ಸಭೆಯಲ್ಲಿ ನಿರ್ಣಯವನ್ನು ಕೈಗೊಳ್ಳಲಾಗಿದೆ. ಇನ್ನಷ್ಟು ಒತ್ತಾಯ ತರಬೇಕಿದೆ.

ಜತೆಯಲ್ಲಿ ಈಗಿರುವ ಬಸವ ಎಕ್ಸ್‌ಪ್ರೆಸ್ ಬೆಂಗಳೂರು, ಗುಂಟಕಲ್, ರಾಯಚೂರು, ಗುಲ್ಬರ್ಗ, ಸೋಲಾಪುರ, ಬಿಜಾಪುರ ಬಾಗಲಕೋಟೆಗಳಿಗೆ ಸಂಚರಿಸುತ್ತಿದ್ದು ವಾರದಲ್ಲಿ ಕೇವಲ 3 ದಿನ ಮಾತ್ರ ಇದೆ. ಇದನ್ನು ಪ್ರತಿನಿತ್ಯವೂ ಓಡಿಸುವ ಅಗತ್ಯವಿದೆ.

ಮೈಸೂರು, ತುಮಕೂರು ಕಡೆಗಣಿಸಲ್ಪಟ್ಟ ರೈಲ್ವೆ

ಬೆಂಗಳೂರು- ಮೈಸೂರು ರೈಲ್ವೆ ಸಂಪರ್ಕ ಇಂದು ನಿನ್ನೆಯದಲ್ಲ. ಹಲವಾರು ದಶಕಗಳಿಂದ ಇದು ಅಸ್ತಿತ್ವದಲ್ಲಿದೆ. ಒಂದೆ ಬೆಂಗಳೂರು ರಾಜಧಾನಿ ಹಾಗೂ ಕೈಗಾರಿಕಾ ಕೇಂದ್ರವಾಗಿದ್ದರೆ, ಮೈಸೂರು ಪ್ರವಾಸಿ ತಾಣವಾಗಿತ್ತು. ಇಂದು ಬೆಂಗಳೂರಿನಲ್ಲಿ ಕೈಗಾರಿಕೆಗಳ ದಟ್ಟಣೆ, ಜನವಸತಿ ಹೆಚ್ಚಾಗುತ್ತಿದ್ದಂತೆ ಇತರೆ ನಗರಗಳು ಬೆಳೆಯಲು ಅವಕಾಶ ಮಾಡಿಕೊಡದಿದ್ದಲ್ಲಿ ಅದು ಬೆಂಗಳೂರಿಗೇ ಅಪಾಯ. ಆ ನಿಟ್ಟಿನಲ್ಲಿ ಬೆಂಗಳೂರಿನ ಸುತ್ತಲಿನ ಜಿಲ್ಲೆಗಳಾದ ಕೋಲಾರ, ತುಮಕೂರು, ಮಂಡ್ಯ, ಮೈಸೂರು ಜಿಲ್ಲೆಗಳಿಗೆ ಸಂಪರ್ಕ ಹೆಚ್ಚು ಮಾಡುವುದು ಅಗತ್ಯ.

ಈ ನಿಟ್ಟಿನಲ್ಲಿ ಭಾರಿ ವಿವಾದ ಎಬ್ಬಿಸಿರುವ ಬೆಂಗಳೂರು ಮೈಸೂರು ಹೆದ್ದಾರಿಗಿಂತಲೂ ಜೋಡಿ ರೈಲು ಮಾರ್ಗವನ್ನು ರಚಿಸಿ, ವಿದ್ಯುತ್ತೀಕರಣಗೊಳಿಸುವುದು ಹೆಚ್ಚು ಲಾಭದಾಯಕ. ಇದರಿಂದ ಭೂಮಿ ಕಳೆದುಕೊಳ್ಳುವ ರೈತರ ಸಂಖ್ಯೆಯೂ ಕಡಿಮೆಯಾಗುತ್ತದೆ. ಬಂಡವಾಳ ಹೂಡಿಕೆಯೂ ಗಮನಾರ್ಹವಾಗಿ ಕುಸಿಯುತ್ತದೆ. ಜನರಲ್ ಬೋಗಿಗಳು ಹೆಚ್ಚಿದ್ದರೆ ಅಥವಾ ಜನರಲ್ ಬೋಗಿಗಳೇ ಹೊಂದಿರುವ ಪ್ರತ್ಯೇಕ ರೈಲನ್ನು ಆರಂಭಿಸಿದರೆ, ಪ್ರಯಾಣಿಕರಿಗೆ ವೆಚ್ಚವೂ ತಗ್ಗುತ್ತದೆ. ಆದ್ದರಿಂದ ಮೈಸೂರು- ಬೆಂಗಳೂರು ಜೋಡಿ ಮಾರ್ಗ ನಿರ್ಮಿಸಿ ಹೆಚ್ಚು ರೈಲುಗಳನ್ನು ಆರಂಭಿಸಬೇಕು ಇದರಿಂದ ಮೈಸೂರು, ಮಂಡ್ಯ, ರಾಮನಗರ ಜಿಲ್ಲೆಯ ಜನರಿಗೆ ಅನುಕೂಲವಾಗಲಿದೆ.

ಅಂತೆಯೇ ಬೆಂಗಳೂರಿನ 'ಸಬರ್ಬ್' (ಉಪ) ನಗರವಾಗಿ ಮಾರ್ಪಾಡಾಗುತ್ತಿರುವ ತುಮಕೂರಿಗೆ ಜೋಡಿ ಮಾರ್ಗವಾಗಿದ್ದರೂ ರೈಲುಗಳ ಸಂಖ್ಯೆ ಹೆಚ್ಚಾಗಿಲ್ಲ. ಕಛೇರಿಗಳಿಗೆ ಪ್ರತಿದಿನ ಓಡಾಡಲು ಅನುಕೂಲ ವಾಗುವಂತೆ ರೈಲುಗಳ- ಸಂಖ್ಯೆಯನ್ನು ಹೆಚ್ಚಿಸಬೇಕು.

ಜಿಲ್ಲಾ ಕೇಂದ್ರಗಳಿಗೆ ರೈಲು ಸಂಪರ್ಕವಿಲ್ಲ

ಸ್ವಾತಂತ್ರ್ಯ ಬಂದು 60 ವರ್ಷ ಕಳೆದರೂ ಜಿಲ್ಲಾ ಕೇಂದ್ರಗಳಾದ ಚಿಕ್ಕಮಗಳೂರು ಮತ್ತು ಮಡಿಕೇರಿಗಳಿಗೆ ಯಾವುದೇ ರೈಲು ಸಂಪರ್ಕವಿಲ್ಲ. ಅಲ್ಲದೆ, ಎರಡು ಬಾರಿ ರೈಲ್ವೆ ಮಂತ್ರಿಗಳಾಗಿದ್ದ ಸಿ.ಎಂ.ಪೂಣಚ್ಚ ಕೊಡಗಿನವರಾಗಿದ್ದರೂ ಆ ಜಿಲ್ಲೆಯಲ್ಲಿ 1 ಕಿ.ಮೀ.ಉದ್ದದ ರೈಲು ಮಾರ್ಗವೂ ಇಲ್ಲ. ಆದ್ದರಿಂದ ತುರ್ತಾಗಿ ಮೈಸೂರು, ಹುಣಸೂರು, ಪಿರಿಯಾಪಟ್ಟಣ ಮಾರ್ಗವಾಗಿ ಮಡಿಕೇರಿಗೆ ರೈಲು ಸಂಪರ್ಕ ಕಲ್ಪಿಸುವುದು ಅಗತ್ಯವಿದೆ. ಅಂತೆಯೇ ಬೀರೂರಿನಿಂದ ಚಿಕ್ಕಮಗಳೂರು ರೈಲು ಮಾರ್ಗ ರಚನೆಯಾಗಬೇಕು.

ಕರ್ನಾಟಕ ರಾಜ್ಯದಲ್ಲಿ ಕಾರ್ಯಗತವಾಗಬೇಕಾದ ಎಲ್ಲಾ ರೈಲು ಮಾರ್ಗಗಳನ್ನು ಪಟ್ಟಿ ಮಾಡುವುದು ಈ ಲೇಖನದ ಉದ್ದೇಶವಲ್ಲ. ಹಾಗೆ ನೋಡಿದರೆ, ಚಾಮರಾಜನಗರ - ಮೆಟ್ಟುಪಾಳ್ಯಂ, ಕೊಟ್ಟೂರು - ಹರಿಹರ ಹೊಸಮಾರ್ಗಗಳು ಶಿವಮೊಗ್ಗ - ತಾಳಗುಪ್ಪ ಗೇಜ್ ಪರಿವರ್ತನೆ ಇನ್ನೂ ಅನೇಕ ಯೋಜನೆಗಳು ಬಾಕಿ ಉಳಿದಿವೆ. ಈ ರಾಜ್ಯದಲ್ಲಿ ರೈಲು ಮಾರ್ಗಗಳ ಸಂಖ್ಯೆ ಹಾಗೂ ರೈಲು ಬಜೆಟ್ ಹೆಚ್ಚಾಗಬೇಕೆಂಬುದೇ ನಮ್ಮ ಆಗ್ರಹ. ಯಾವುದೇ ಸಂಪರ್ಕ ವ್ಯವಸ್ಥೆ ಜನ ಸಾಮಾನ್ಯರ್ನು ಒಳಗೊಳ್ಳಲು ಸಾಧ್ಯವಾಗದಿದ್ದರೆ ಅದು ನಿಜವಾದ ಬೆಳವಣಿಗೆ ಎನಿಸುವುದಿಲ್ಲ. ಆ ನಿಟ್ಟಿನಲ್ಲಿ ಬಾಕಿ ಇರುವ ಯೋಜನೆಗಳನ್ನು ಪೂರೈಸಬೇಕು ಹಾಗೂ ಹೊಸ ಯೋಜನೆಗಳನ್ನು ಹಮ್ಮಿಕೊಳ್ಳಬೇಕು. ಬೆಳವಣಿಗೆಯು ಕೆಲವೇ ಕೆಲವು ಪಟ್ಟಣಗಳಿಗೆ ಕೇಂದ್ರೀತವಾಗಿದ್ದರೆ ಸಾಲದು.

ಎಕ್ಸ್‌ಪ್ರೆಸ್ ಕಾರಿಡಾರ್ ಯೋಜನೆ

ಒಂದು ಊರಿನಿಂದ ಇನ್ನೊಂದು ಊರಿಗೆ ತ್ವರಿತಗತಿಯ ಸಂಪರ್ಕ ಸಾಧನಗಳು ಇದ್ದಲ್ಲಿ ಆರ್ಥಿಕ ಚಟುವಟಿಕೆಗಳು ಹೆಚ್ಚುತ್ತವೆ. ಇದೀಗ ದೆಹಲಿ-ಮುಂಬೈ ಮತ್ತು ದೆಹಲಿ-ಕಲ್ಕತ್ತ ಮಾರ್ಗಗಳಲ್ಲಿ ಸರಕುಗಳನ್ನು ಶೀಘ್ರಗತಿಯಲ್ಲಿ ಸಾಗಿಸಲು ಅನುಕೂಲವಾಗುವಂತೆ 'ರೈಲ್ ಫ್ರೈಟ್ ಕಾರಿಡಾರ್'ಗಳನ್ನು ಸ್ಥಾಪಿಸಲು ರೈಲ್ವೆ ಇಲಾಖೆ ನಿರ್ಧರಿಸಿದೆ. ಇದು ಉತ್ತರ ಭಾರತ ಹಾಗೂ ಪೂರ್ವ ಮತ್ತು ಪಶ್ಚಿಮ ಭಾರತದ ಹಲವು ರಾಜ್ಯಗಳಿಗೆ ಅನುಕೂಲವಾಗಲಿದೆ.

ಹಾಗೆಯೇ ದಕ್ಷಿಣ ಭಾರತದ ಆರ್ಥಿಕ ಚಟುವಟಿಕೆಗಳನ್ನು ಚುರುಕುಗೊಳಿಸಲು ಬೆಂಗಳೂರು ಹಾದುಹೋಗುವ ಚೆನ್ನೈ-ಮುಂಬೈ 'ಫ್ರೈಟ್ ಕಾರಿಡಾರ್' ನ್ನು ರಚಿಸಬೇಕೆಂದು ಕರ್ನಾಟಕ ಚೇಂಬರ್ ಆಫ್ ಕಾಮರ್ಸ್ ಒತ್ತಾಯಿಸಿದೆ. ಇದರಿಂದ ದಕ್ಷಿಣ ಭಾರತದ ರಾಜ್ಯಗಳಾದ ತಮಿಳುನಾಡು, ಕರ್ನಾಟಕ, ಆಂಧ್ರ, ಮಹಾರಾಷ್ಟ್ರಗಳ ಆರ್ಥಿಕ ಚಟುವಟಿಕೆಗಳಿಗೆ ಸಹಾಯವಾಗಲಿದೆ.

ಹಣ ಎಲ್ಲಿಂದ?

ಇಷ್ಟೊಂದು ಯೋಜನೆಗಳು ಕಾರ್ಯಗತಗೊಳಿಸಬೇಕಾದರೆ ಹಣ ಎಲ್ಲಿಂದ ಎಂಬುದು ಸ್ವಾಭಾವಿಕವಾಗಿ ಉದ್ಭವಿಸುವ ಪ್ರಶ್ನೆ. ಪ್ರತಿವರ್ಷದ ಬಜೆಟ್‌ನಲ್ಲಿ ಒಂದೊಂದು ಮಾರ್ಗಕ್ಕೆ 1ಕೋಟಿ, 2 ಕೋಟಿ ಅಥವಾ 5 ಕೋಟಿ ತೆಗೆದಿರಿಸಿರುವ ಮೂಲಕ ಅಲ್ಲಿನ ಕಾಮಗಾರಿ ಆಮೆ ವೇಗದಲ್ಲಿ ನಡೆಯುತ್ತದೆ. ಇದು 'ರಾಕ್ಷಸನ ಹೊಟ್ಟೆ ಅರೆಕಾಸಿನ ಮಜ್ಜಿಗೆ' ಎಂಬಂತಾಗುತ್ತದೆ. ಯೋಜನೆಗಳು ಬಾಕಿ ಇರುವುದು ನಮ್ಮರಾಜ್ಯದಲ್ಲಿ ಮಾತ್ರವಲ್ಲ. ದೇಶದ ಇತರೆಡೆಗಳಲ್ಲಿ ಹಲವಾರು ಯೋಜನೆಗಳು ಬಾಕಿ ಇವೆ.

ಆದರೆ ರೈಲ್ವೆ ಸ್ಥಾಯಿ ಸಮಿತಿ ಅಧ್ಯಕ್ಷ ಬಸುದೇವ್ ಆಚಾರ್ಯ ಬೇರೆಯೇ ಹೇಳುತ್ತಾರೆ. ರೈಲ್ವೆ ಇಲಾಖೆಯು ಎತ್ತಿಕೊಂಡಿರುವ ಎಲ್ಲಾ ಯೋಜನೆಗಳನ್ನು ಪೂರ್ಣಗೊಳಿಸಲು 45000 ಕೋಟಿ ರೂ. ಅಗತ್ಯವಿದೆ. ಒಂದು ಬಾರಿಯ ಅನುದಾನವಾಗಿ ಕೇಂದ್ರ ಸರ್ಕಾರ ತನ್ನ ಬಜೆಟ್‌ನಿಂದ ಈ ಹಣ ನೀಡಬೇಕು ಎಂದು ಒತ್ತಾಯಿಸುತ್ತಾರೆ ಶ್ರೀ ಆಚಾರ್ಯರವರು. ಚತುಷ್ಪಥ ಹೆದ್ದಾರಿಗಳ ನಿರ್ಮಾಣಕ್ಕೆ 60,000 ಕೋಟಿ ರೂ. ಖರ್ಚು ಮಾಡುವ ಸರ್ಕಾರಕ್ಕೆ ರೈಲ್ವೆ ಇಲಾಖೆಗೆ ಹಣ ನೀಡಲು ಏಕೆ ಸಾಧ್ಯವಾಗುತ್ತಿಲ್ಲ ಎಂದು ಪ್ರಶ್ನಿಸುತ್ತಾರೆ.

ಕರ್ನಾಟಕದಿಂದ ಅತಿಹೆಚ್ಚು ರೈಲ್ವೆಮಂತ್ರಿಗಳು. ಆದರೆ....

ಕರ್ನಾಟಕದಿಂದ ಅತಿಹೆಚ್ಚು ರೈಲ್ವೆ ಮಂತ್ರಿಗಳು ಕಾರ್ಯನಿರ್ವಹಿಸಿದರೂ ಸರಾಸರಿ ರೈಲು ಮಾರ್ಗ ಕರ್ನಾಟಕದಲ್ಲಿ ಕಡಿಮೆ. ಇಲ್ಲಿರುವ ಒಟ್ಟುರೈಲು ಹಳಿಗಳ ಉದ್ದ 3089 ಕಿ.ಮೀ. ಮಹಾರಾಷ್ಟ್ರ 10,000ಕಿ.ಮೀ ಗಿಂತಲೂ ಹೆಚ್ಚು, ತಮಿಳುನಾಡಿನಲ್ಲಿ 4200 ಕಿ.ಮೀ ಹಾಗೂ ಆಂಧ್ರಪ್ರದೇಶದಲ್ಲಿ 4200 ಕಿ.ಮೀ ಉದ್ದದ ರೈಲು ಮಾರ್ಗಗಳು ಇವೆ. ಜೋಡಿ ರೈಲು ಮಾರ್ಗ(ಡಬಲ್ ಲೈನ್) ಹಾಗೂ ವಿದ್ಯುತ್ ರೈಲು ಮಾರ್ಗಗಳ ವಿಸ್ತೀರ್ಣದಲ್ಲಿ ಕರ್ನಾಟಕ ಬಹಳ ಹಿಂದುಳಿದಿದೆ. ಸಿ.ಎಂ.ಪೂಣಚ್ಚ, ಕೆಂಗಲ್ ಹನುಮಂತಯ್ಯ, ಟಿ.ಎ.ಪೈ, ಸಿ.ಕೆ.ಜಾಫರ್ ಶರೀಫ್, ಬಸವರಾಜ್ ಪಾಟೀಲ್ ಯತ್ನಾಳ್ ಹೀಗೆ ಕರ್ನಾಟಕದ ಹಲವು ಸಂಸತ್ ಸದಸ್ಯರು ಕೇಂದ್ರದ ರೈಲ್ವೆ ಮಂತ್ರಿಗಳಾಗಿ ಕಾರ್ಯ ನಿರ್ವಹಿಸಿದರು. ಆದರೆ ಕರ್ನಾಟಕದಲ್ಲಿ ಆಗಿರುವ ರೈಲು ಕಾಮಗಾರಿಗಳು ಏನೇನೂ ಸಾಲದು. ಜಾಫರ್ ಶರೀಫ್ ಅವರ ಅವಧಿಯಲ್ಲಿ ಮಾತ್ರವೇ ಕರ್ನಾಟಕದ ಕೆಲವು ಕಾಮಗಾರಿಗಳು ಸುಸೂತ್ರವಾಗಿ ನಡೆದಿವೆ ಎಂದು ಹೇಳಲಾಗುತ್ತಿದೆ.

ತೀರಾ ಇತ್ತೀಚಿನವರೆಗೆ ಇಲ್ಲಿ ಪ್ರತ್ಯೇಕ ರೈಲ್ವೆವಲಯ ಇರಲಿಲ್ಲ. 2003ರ ಎಪ್ರಿಲ್ 1ರಂದು ಮಾತ್ರವೇ ನೈರುತ್ಯ ವಲಯ ರಚನೆಯಾಯಿತು. ಆಗಲೂ ಅದನ್ನು ಬೆಂಗಳೂರಿನಲ್ಲಿ ರಚಿಸಬೇಕೆ ಅಥವಾ ಹುಬ್ಬಳ್ಳಿಯಲ್ಲಿ ರಚಿಸಬೇಕೆ ಎಂದು ತೀವ್ರ ಚರ್ಚೆ, ಹೋರಾಟಗಳು ನಡೆದು ಕೊನೆಯಲ್ಲಿ ಹುಬ್ಬಳ್ಳಿಯಲ್ಲಿ ಸ್ಥಾಪನೆಗೊಂಡಿದೆ. ರಾಜ್ಯದ ರಾಜಧಾನಿ ಹಾಗೂ ಹೆಚ್ಚು ನಗರಗಳಿಗೆ ಸಂಪರ್ಕ ಹೊಂದಿರುವ ಬೆಂಗಳೂರಿನಲ್ಲಿ ಈ ವಲಯ ಸ್ಥಾಪನೆಯಾಗಬೇಕೆಂಬುದು ಬಹು ಜನರ ಬೇಡಿಕೆಯಾಗಿತ್ತು.

ಮುಖ್ಯಮಂತ್ರಿ ಮೇಲೆ ಕೊಲೆ ಆರೋಪ, ಹಿಂದೆಂದೂ ಇಲ್ಲದಷ್ಟು ಹಣದ ಹುಚ್ಚುಹೊಳೆ, ಮತದಾರರನ್ನು ಒತ್ತಡಕ್ಕೆ ಸಿಲುಕಿಸುವ ವಿನೂತನ ಕುತಂತ್ರಗಳು ಇವೆಲ್ಲಾ ಬಿಜೆಪಿ ಕಡೆಯಿಂದ ನಡೆಸಲಾಗಿದ್ದು ಯಾಕೆ? ಗಣಿ ಸಾಮ್ರಾಜ್ಯ ಮೇಲಿನ ಹಿಡಿತ ಉಳಿಸಿಕೊಳ್ಳುವುದಕ್ಕೆ, ಬೆಳೆಸಿಕೊಳ್ಳುವುದಕ್ಕೆ. ಜೆಡಿ(ಎಸ್) ಏನೂ ಕಮ್ಮಿ ಇಲ್ಲ. ಬಿಜೆಪಿಗೆ ತಕ್ಕಂತೆ ಪೈಪೋಟಿ ನೀಡಿದೆ. ಈ ತಿಕ್ಕಾಟದಲ್ಲಿ ಕಾಂಗ್ರೆಸ್ ಆಂತರಿಕ ಒಡಕಿನಿಂದಾಗಿ ಸ್ಥಳೀಯ ಸಂಸ್ಥೆಯಲ್ಲಿ ಒಂದು ಸ್ಥಾನ ಗೆಲ್ಲಲಾಗದೇ ನಜ್ಜುಗುಜ್ಜಾಗಿದೆ.

ಬಳ್ಳಾರಿ ಎಲೆಕ್ಷನ್ ಹಣಾಹಣಿ

ಗಣಿಗೆ ಧಣಿ ಯಾರು ಎನ್ನುವುದೇ ಪ್ರಶ್ನೆ

ಯು. ಬಸವರಾಜ

ನಗರಪಾಲಿಕೆ ಚುನಾವಣೆಯಲ್ಲಿ ಬಳ್ಳಾರಿ ಮತ್ತೊಮ್ಮೆ ರಾಜ್ಯ ಹಾಗೂ ದೇಶದ ಗಮನ ಸೆಳೆಯಿತು. ಚುನಾವಣಾ ಪೂರ್ವ ಪ್ರಚಾರದ ದಿನಗಳಲ್ಲಿ ಬಳ್ಳಾರಿಯ ಬಿಜೆಪಿ ಮುಖಂಡರು, ಮಾಜಿ ಮಂತ್ರಿಗಳಾದ ಬಿ.ಶ್ರೀರಾಮುಲುರವರು ತಮ್ಮ ಕೊಲೆಗೆ ಅಂದಿನ ಮುಖ್ಯಮಂತ್ರಿಗಳಾಗಿದ್ದ ಕುಮಾರಸ್ವಾಮಿ ಯತ್ನಿಸಿದ್ದಾರೆಂದು ಆರೋಪಿಸಿದರು. ಮಾತ್ರವಲ್ಲ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಲು ಯತ್ನಿಸಿದರು. ಆದರೆ ಬಳ್ಳಾರಿ ಪೊಲೀಸರು ದೂರು ದಾಖಲಿಸಲು ನಿರಾಕರಿಸಿದರು. ಅದು ಬೇರೆ ವಿಚಾರ. ಮುಖ್ಯ ಮಂತ್ರಿಗಳ ಮೇಲೆ ಕೊಲೆ ಯತ್ನದ ಆರೋಪ ಮಾಧ್ಯಮಗಳಲ್ಲಿ ದೊಡ್ಡ ಪ್ರಚಾರವಾಗಿ ರಾಜ್ಯದಾದ್ಯಂತ ದೊಡ್ಡ ಸಂಚಲನವನ್ನೇ ಸೃಷ್ಟಿಸಿತು. ಶ್ರೀರಾಮುಲು ಜೊತೆಯಲ್ಲಿ ಜನಾರ್ಧನರೆಡ್ಡಿ, ಎಂಎಲ್‌ಸಿ ಹಾಗೂ ಎಂಪಿ ಕರುಣಾಕರರೆಡ್ಡಿಯವರು ನಿಂತರು. ಶ್ರೀರಾಮುಲುರವರು ಹೆಲಿಕಾಪ್ಟರ್‌ನಲ್ಲಿ ತಮ್ಮ ರಾಜಿನಾಮೆ ಸಲ್ಲಿಸುವಾಗ ತಮ್ಮ ಪಕ್ಷದ ಮುಖಂಡರಿಗೆ ರಿವಾಲ್ವರ್‌ನಿಂದ ಬಂದ ಗುಂಡೊಂದನ್ನು ತೋರಿಸಿದ್ದು ಮಾಧ್ಯಮಗಳಲ್ಲಿ ಎಲ್ಲರೂ ಗಮನಿಸಿದ್ದಾರೆ.


ಇದೇ ಸಂದರ್ಭದಲ್ಲಿ ಯಡಿಯೂರಪ್ಪನವರಿಗೆ ಅಧಿಕಾರದ ಹಸ್ತಾಂತರದ ಕುರಿತು ಹಾಗೂ ಯಶವಂತ ಸಿನ್ಹಾರವರ ಅಭಿಪ್ರಾಯಗಳ ಕುರಿತು ರಾಷ್ಟ್ರಾಧ್ಯಕ್ಷರಾದ ರಾಜ್‌ನಾಥಸಿಂಗ್ ಜೊತೆ ಮಾತುಕತೆ ನಡೆಸಲು ದೆಹಲಿಯಲ್ಲಿದ್ದು ಮಾಜಿ ಪ್ರಧಾನಿ ಶ್ರೀ ದೇವೇಗೌಡರು ದಿಢೀರನೆ ಭೇಟಿ ಮುರಿದು ಕರ್ನಾಟಕಕ್ಕೆ ವಾಪಸ್ಸಾದದ್ದು, ಅನಂತರ ಬಿ.ಶ್ರೀರಾಮುಲುರವರು ಮಂತ್ರಿಸ್ಥಾನಕ್ಕೆ ರಾಜಿನಾಮೆ ನೀಡಿದ್ದು ಎಲ್ಲವನ್ನು ನಾವು ಗಮನಿಸಿದ್ದೇವೆ.

ಇವೆಲ್ಲಾ ಯಾಕೆ?

ಬಳ್ಳಾರಿನಗರ ಪಾಲಿಕೆಯನ್ನು ಹಿಡಿಯಲು. ಬಳ್ಳಾರಿ ನಗರ ಪಾಲಿಕೆ ಬಿಜೆಪಿ ಬಳ್ಳಾರಿ ಜನಾರ್ಧನರೆಡ್ಡಿ ಪಕ್ಷಕ್ಕೆ ಹಾಗೂ ಕುಮಾರಸ್ವಾಮಿಯವರ ಜನತಾದಳಕ್ಕೆ ಪ್ರತಿಷ್ಠೆಯ ವಿಚಾರವಾಗಿತ್ತು. ಜನಾರ್ಧನ ರೆಡ್ಡಿಯವರು 150 ಕೋಟಿ ಗಣಿಲಂಚ ಹಗರಣವನ್ನು ಕುಮಾರಸ್ವಾಮಿಯವರ ಮೇಲೆ ಎಸೆದದ್ದು, ಅದರ ಪರಿಣಾಮವಾಗಿ ಜನಾರ್ಧನರೆಡ್ಡಿಯವರು ಬಿಜೆಪಿಯಿಂದ 'ಅಮಾನತ್ತು'ಗೊಂಡಿದ್ದು, ಅನಂತರ ಅವರು ದೇಶದಾದ್ಯಂತ ಗಮನ ಸೆಳೆದ ಹಲವು ಸಿ-ಡಿಗಳನ್ನು ಬಿಡುಗಡೆ ಮಾಡಿದ್ದು, ಅದರಲ್ಲಿ ಮಾಜಿ ಅರಣ್ಯಸಚಿವ ಚನ್ನಿಗಪ್ಪ ಅವರು ತಮ್ಮ ತಲೆದಂಡವಾಗಬಹುದೆಂದು ತಿರುಪತಿ ತಿಮ್ಮಪ್ಪನೂ ಸೇರಿ ಹಲವು ದೇವಸ್ಥಾನಗಳಿಗೆ ತಿರುಗಿ ದೇವರ ಬೆನ್ನುಬಿದ್ದದ್ದು, ಸಿಡಿ ಬಾಂಬ್ ಠುಸ್ ಎಂದಿದ್ದು ಎಲ್ಲವೂ ಬಳ್ಳಾರಿ ನಗರಪಾಲಿಕೆ ಪ್ರತಿಷ್ಠೆಯ ಕಣವಾಗಲು ನೆಲೆಯನ್ನು ಒದಗಿಸಿತು. ಇನ್ನಷ್ಟು ಆಳಕ್ಕಿಳಿದರೆ, ಈ ಗಣಿಲಂಚ ಹಗರಣ ಸ್ಫೋಟಗೊಂಡಿದ್ದು, "ಬಳ್ಳಾರಿ ಜಿಲ್ಲೆಯ ಹಾಲಿ ಲಕ್ಷಾಂತರ, ಕೋಟಿ ಕೋಟಿ ರೂ.ಗಳನ್ನು ನೀಡುವ ಭಾರಿ ಕಾಮಧೇನು ವಾದ ಮ್ಯಾಂಗನೀಸ್ ಮತ್ತು ಕಬ್ಬಿಣದ ಅದಿರಿನ ಮೇಲೆ, ಆಡಳಿತದ ಮೇಲೆ ಯಾರ ಅಧಿಕಾರವಿರಬೇಕು" ಎಂಬ ಪ್ರಶ್ನೆಯ ಮೇಲೆಯೇ ಎಂಬುದನ್ನು ಗಮನಿಸಬೇಕಾಗಿದೆ. ಗಣಿ ಲಂಚ ಪ್ರಕರಣ ಬಯಲುಗೊಂಡಿದ್ದು ಕೇವಲ ಭ್ರಷ್ಟಾಚಾರದ ವಿರುದ್ಧ ನಡೆಯುವ ಕಾಳಜಿಯಿಂದಲ್ಲ ವೆಂಬುದು ರಾಜಕೀಯ ವಲಯಕ್ಕೆ ಹಾಗೂ ಬಳ್ಳಾರಿಯಲ್ಲಿ ಗಲ್ಲಿ ಗಲ್ಲಿಗಳಲ್ಲೂ ಚರ್ಚಿತವಾದ ವಿಷಯವಾಗಿದೆ.

ಗಣಿಗಾರಿಕೆ ಮಾಡಲು ಬರುವ ಬಂಡವಾಳದಾರ ಕುಳಗಳಿಗೆ ಲೈಸೆನ್ಸ್ ನೀಡುವ ಅಧಿಕಾರದ ಮೇಲೆ ಯಾರ ಹಿಡಿತವಿರಬೇಕೆಂಬ ಲಕ್ಷಾಂತರ ಕೋಟಿ ಬೆಲೆಯ ಪ್ರಶ್ನೆಯು ಇದರಲ್ಲಿ ಅಡಗಿತ್ತು. ಬಳ್ಳಾರಿ ಜಿಲ್ಲೆಯ ಗಣಿಗಾರಿಕೆಯ ಭಾರಿ ಲಾಭ, ರಾಜಕೀಯದಲ್ಲಿ ಅದರ ಬಂಡವಾಳ ಹೂಡಿಕೆಯ ಲಾಭ ಕಳೆದ ಸಾರ್ವತ್ರಿಕ ಚುನಾವಣೆಯಲ್ಲಿಯೇ ಬೆಳಕಿಗೆ ಬಂದಿತ್ತು. ವಿಧಾನಸಭಾ ಕ್ಷೇತ್ರಗಳು ಚುನಾವಣೆಯ ಪೂರ್ವ ಗಣಿಮಾಲೀಕರಿಂದ ಹೂಡಿದ ಭಾರಿ ಬಂಡವಾಳದಿಂದ ರಾರಾಜಿಸಿದ್ದವು. ಚುನಾವಣೆ ಪೂರ್ವದಲ್ಲಿಯೇ 5ರಿಂದ 10 ಕೋಟಿಯಷ್ಟು ಹಲವು ಗಣಿಮಾಲೀಕರು ಬಂಡವಾಳ ತೊಡಗಿಸಿದ್ದರು. ಚುನಾವಣೆಯಲ್ಲಂತೂ ಅದರ ಆಟಾಟೋಪ ಅದರ ಪ್ರಖರತೆ ಮತ್ತಷ್ಟು ಮಿಂಚಿತು. ರಾಜ್ಯದಲ್ಲಿ ಬಿಜೆಪಿ, ಜೆಡಿ(ಎಸ್) ಸಮ್ಮಿಶ್ರ ಸರ್ಕಾರದ ಮಂತ್ರಿಮಂಡಲದ ಮೇಲೆ ಬಿಜೆಪಿ ಹಾಗೂ ಜೆಡಿ(ಎಸ್) ಗಣಿ ಮಾಲೀಕರ ತೀವ್ರ ಒತ್ತಡ ಹಾಗೂ ಪ್ರಭಾವ ಕಂಡುಬಂತು. ಈ ಕಾರಣದಿಂದಾಗಿಯೇ ರಾಜಕೀಯ ಜೀವನದಲ್ಲಿ ಇನ್ನೂ ಎಳಸುಗಳಾಗಿದ್ದ ಶ್ರೀರಾಮುಲು ಮಂತ್ರಿಗಳಾದರೆ, ಸಂಡೂರು ಶಾಸಕರಾದ ಶ್ರೀ ಸಂತೋಷ್‌ಲಾಡ್‌ರವರು ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿಗಳಾಗಿದ್ದರು. ಶ್ರೀ ನಾರಾಯಣರೆಡ್ಡಿಯವರು ಮಂತ್ರಿಯಾಗಲು ಯತ್ನಿಸಿ ವಿಫಲರಾದರು. ಆನಂತರ ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿಗಳಾದರೆನ್ನಿ.

ಇಷ್ಟೊಂದು ರಾಜ್ಯಸರ್ಕಾರ ಹಿಡಿಯುವ, ಪರಿಣಾಮ ಬೀರುವ ಈ ಗಣಿಗಾರಿಕೆ ಬಂಡವಾಳ, ಅದರ ಕಾಮಧೇನು ಬಳ್ಳಾರಿ ಜಿಲ್ಲೆಯ ಮ್ಯಾಂಗನೀಸ್ ಮತ್ತು ಕಬ್ಬಿಣದ ಅದಿರು ಸಾಗಾಣಿಕೆಯ ಮೇಲೆ, ಸಾಗಾಟಕ್ಕೆ ಲೈಸೆನ್ಸ್ ನೀಡುವ ರಾಜಕೀಯ ಅಧಿಕಾರದ ಪ'ುೀಲ',



ಗಣಿಗಾರಿಕೆ ಮಾಡುವವನಿಗಿಂತ 10 ಪಟ್ಟು ಸಿಗುವ ಆದಾಯದ ಮೇಲೆ ಸಹಜವಾಗಿಯೇ ಪೈಪೋಟಿಯನ್ನು ನೀಡಿತ್ತು. ಕುಮಾರಸ್ವಾಮಿಯವರು ಇಲ್ಲಿನ ಗಣಿಗಾರಿಕೆಯು ಅವರಿಗೆ ಹೊಸದಾದರೂ ಮುಖ್ಯಮಂತ್ರಿಯಾದ ನಂತರ, ದೇಶದ ಎಲ್ಲಾ ಪ್ರಭಾವಿ ರಾಜಕಾರಣಿಗಳನ್ನು ಸೂಜಿಗಲ್ಲಿನಂತೆ ಸೆಳೆದ ಗಣಿಗಾರಿಕೆಯನ್ನು ಸರಕಾರದ ಪರಮಾಧಿಕಾರವನ್ನು ಬೇರೆಯವರಿಗೆ ಬಿಟ್ಟುಕೊಡಲು ಸಾಧ್ಯವೇ? ಇದುವೆ ರಾಜ್ಯದ ರಾಜಕಾರಣವನ್ನು ಗರಂಗೊಳಿಸಿದ್ದು ಮತ್ತು ಬಳ್ಳಾರಿ ಜಿಲ್ಲೆಯಲ್ಲಿ ಅದುವರೆಗೆ ಜನಾರ್ಧನರೆಡ್ಡಿ v/s ಕಾಂಗ್ರೆಸ್‌ನ ದಿವಾಕರಬಾಬು ಎಂದಿದ್ದನ್ನು ಬಿಜೆಪಿ v/s ಜನತಾದಳ(ಎಸ್) ಆಗಿ ಪರಿವರ್ತಿಸಿದ್ದು ಎಂಬುದನ್ನು ಸಕಾರಣವಾಗಿಯೇ ಗುರುತಿಸಬಹುದಾಗಿದೆ.

ಜನಾರ್ಧನ ರೆಡ್ಡಿಯವರು, ಶ್ರೀರಾಮುಲು ಆಗಾಗ ಘೋಷಿಸಿದಂತೆ ಅವರ ಮಹತ್ವಾಕಾಂಕ್ಷೆಯೀಗ, ಮುಂದಿನ ಮುಖ್ಯಮಂತ್ರಿ ಗಾದಿ ಹಿಡಿಯುವುದು ಅದಕ್ಕಾಗಿ ಈಗಾಗಲೇ ಉತ್ತರ ಕರ್ನಾಟಕದ 100 ಎಮ್‌ಎಲ್‌ಎ ಕ್ಷೇತ್ರ ಗೆಲ್ಲಿಸಲು ಬಂಡವಾಳ ತೊಡಗಿಸುವ ಗುರಿ ಹೊಂದಿದ್ದಾರೆ. ಹಾಗಿರುವಾಗ "ಬಳ್ಳಾರಿ ನಗರ ಪಾಲಿಕೆ"ಯನ್ನು ಬಿಟ್ಟುಕೊಡಲು ಸಾಧ್ಯವೆ? ಈ ಎಲ್ಲವೂ ಬಳ್ಳಾರಿ ನಗರಪಾಲಿಕೆಯ ಚುನಾವಣೆಯನ್ನು ಕಾವೇರಿಸಿತ್ತು. ಪ್ರತಿದಿನವೂ ಆತಂಕಭರಿತವೂ ಕುತೂಹಲಭರಿತವೂ ಆಗಿತ್ತು.

ಬಳ್ಳಾರಿನಗರಪಾಲಿಕೆ ಫಲಿತಾಂಶ

ಬಿಜೆಪಿ	30
ಜೆಡಿ(ಎಸ್)	03
ಬಿಎಸ್‌ಪಿ	02
ಕಾಂಗ್ರೆಸ್	00

ಎಲ್ಲೆಡೆಯಂತೆ ನಗರಪಾಲಿಕೆ ಮಾಡಬೇಕಾದ ಕೆಲಸಗಳು. ಹಿಂದಿನ ನಗರಪಾಲಿಕೆಯ ಕೆಲಸದ ವಿಮರ್ಶೆ, ಮುಂದೆ ಕೈಗೊಳ್ಳುವ ಕಾರ್ಯಗಳು ಇವು ಯಾವುವು ಬಳ್ಳಾರಿ ನಗರದಲ್ಲಿ ಚರ್ಚೆಯ ಅಂಶಗಳಾಗಲಿಲ್ಲ. ಯಾರೆಷ್ಟು ಹಣ ನೀಡುವರೆಂಬುದೇ ಹೆಚ್ಚಿನೆಡೆ ಚರ್ಚೆಯ ಅಂಶವಾದುದು ವಿಷಾದನೀಯ. ತೋಳ್ಬಲ, ಹಣ, ಹೆಂಡ, ಸೀರೆ, ಮೂಗುತಿಗಳು ನಗರದೆಲ್ಲೆಡೆ ಮೆರೆದಾಡಿದವು. 'ಶ್ರೀರಾಮುಲು, ಜನಾರ್ಧನರೆಡ್ಡಿಯವರ ಮೇಲೆ ಜೆಡಿ(ಎಸ್) ದಾಳಿಮಾಡಿತು. ಹತ್ಯೆಗೈಯ್ಯಲು ಯತ್ನಿಸಿತು. ಅದೇ ರೀತಿ ಒಬ್ಬ ಮಂತ್ರಿಗೆ ಅಧಿಕಾರಿಗಳ ಕಾಲು ಹಿಡಿಯುವಂತೆ ಮಾಡಲಾಯಿತು' ಎಂಬ ಪ್ರಚಾರದಿಂದ ಅನುಕಂಪನವೂ ಇಲ್ಲಿ ಕೆಲಸ ಮಾಡಿತೆಂದು ಹೇಳಲಾಗಿದೆ. ಕಳೆದ ಬಾರಿ ಮತದಾನದ ಮತಗಳು 50ರಿಂದ 100 ರೂ.ಗಳು ತೂಗಿದರೆ ಈ ಬಾರಿ 1000ರಿಂದ 2500ರೂವರೆಗೆ ತೂಗಿದವಲ್ಲದೆ ಮನೆಗೆರಡು ಸೀರೆಗಳ ಬೋನಸ್ಸು ಪಡೆದವು.

ಗೆದ್ದರೆ ನಿಮಗೆ, ಸೋತರೆ ಸಾಲ

10ರಿಂದ 15 ಮತಗಳಿರುವ ಕುಟುಂಬಗಳಿಗಂತು ಬಂಪರ್ ಲಾಟರಿ ಹೊಡೆದಿದೆ. ಇಂತಹ ಹಲವು ಕುಟುಂಬಗಳಿಗೆ 25,000 ರೂ.ಗಳ ಕಂತು ನೀಡಿ, ಗೆದ್ದರೆ ಹಣ ನಿಮಗೆ, ಸೋತರೆ ಸಾಲವೆಂದು ನೀಡಲಾಯಿತು. ಈಗ್ಯಾರು ಬಳ್ಳಾರಿಯ ಮತದಾರರು ಸಾಲಗಾರರಾಗುಳಿದಿಲ್ಲ. ವಿರೋಧಿ ಗುಂಪಿನ ಧ್ವಜ, ಬ್ಯಾನರ್ ತಗೆದರೆ 5ರಿಂದ 10 ಸಾವಿರ, ಬೇಕೆಂದರೆ ಇನ್ನಷ್ಟು. ತೆಗೆಯದಿದ್ದರೆ ಹುಷಾರ್ ಎನ್ನಲಾಗಿದೆ ಎಂಬ ಆರೋಪ ಕೇಳಿಬಂದಿದೆ. ಈ ಹಣ ಆಮಿಷ ನೀಡುವ ಪೈಪೋಟಿ ಎಲ್ಲ ಪಕ್ಷಗಳಲ್ಲಿಯೂ ಇತ್ತನ್ನಿ. ಜನಾರ್ಧನ ರೆಡ್ಡಿಯವರು ಅಧಿಕಾರ ಹಿಡಿಯಲು ಪ್ರತಿ ಕ್ಷೇತ್ರದಲ್ಲೂ 35 ಲಕ್ಷಕ್ಕೂ ಹೆಚ್ಚು ಹಣ ಹೂಡಿದರೆಂದು ಒಟ್ಟು 15ರಿಂದ 20 ಕೋಟಿ ಹೂಡಿದ್ದಾರೆಂದು ಜೆಡಿ(ಎಸ್) 5ರಿಂದ 10 ಕೋಟಿ ಖರ್ಚು ಮಾಡಿದೆಯೆಂದು ಬಳ್ಳಾರಿ ಮಾತನಾಡುತ್ತಿದೆ.

ಕಾಂಗ್ರೆಸ್ ಎದುರಿಸಲಿಲ್ಲ

ಕಾಂಗ್ರೆಸ್ ಈ ಬಾರಿಯೂ ಒಡೆದ ಮನೆಯಾಗಿಯೇ ಉಳಿಯಿತು. ಕಾಂಗ್ರೆಸ್‌ನೊಳಗೆ ಹಣಕ್ಕೇನು ಕೊರತೆಯಿಲ್ಲ. ಆದರೆ ಅವರೊಳಗೆ ಒಬ್ಬರ ಕಾಲು ಮತ್ತೊಬ್ಬರಿಗೆ ಎಳೆಯುವ ಪ್ರವೃತ್ತಿ ಅವರನ್ನು ಮತದಾರರು ಬಳ್ಳಾರಿಯಿಂದಾಚೆ ಎಸೆಯುವ ಪರಿಸ್ಥಿತಿ ನಿರ್ಮಿಸಿತು. ಆ ಪಕ್ಷ ಪಡೆದುದು ಎರಡು ದೊಡ್ಡ ಸೊನ್ನೆಗಳು. ಬಳ್ಳಾರಿ ನಗರಪಾಲಿಕೆಯನ್ನು ಮರಳಿ ಪಡೆಯಲು ನಡೆಸಿದ ಕಾಂಗ್ರೆಸ್ ವರಿಷ್ಠರ ತಾಲೀಮು ಇಲ್ಲಿ ಪ್ರದರ್ಶನ ಕಾಣಲಿಲ್ಲ. ಮಲ್ಲಿಕಾರ್ಜುನ ಖರ್ಗೆ ಕಾಂಗ್ರೆಸ್ ಮುಖಂಡರ ಸಭೆ ನಡೆಸಿ ದಿವಾಕರಬಾಬು, ಕೊಂಡಯ್ಯರಿಗೆ ತಲಾ 15 ಕ್ಷೇತ್ರಗಳಲ್ಲಿ ತಮ್ಮ ಹುರಿಯಾಳುಗಳನ್ನು ಗೆಲ್ಲಿಸಲು ರಾಜಿ ಸೂತ್ರ ನೀಡಿ ಕಳುಹಿಸಿದ್ದರು. ಆದರೆ ಅವರೊಳಗೆ ಒಮ್ಮತವಾಗದ್ದರಿಂದ ಅವರಿಗೆ ಗೆಲ್ಲುವ ಬಗ್ಗೆ ಜನಾರ್ಧನರೆಡ್ಡಿಯ ಬಂಡವಾಳ ಮತ್ತು ಬಲದ ಬಗ್ಗೆ ಅನುಮಾನ ದೊಡ್ಡದಾಗಿತ್ತು.

ಹೀಗಾಗಿ ಪಾರ್ಟಿಯಿಂದ ಹಣವನ್ನು ಅಭ್ಯರ್ಥಿಗಳಿಗೆ ನೀಡಬೇಕಾದಷ್ಟು ನೀಡಲಿಲ್ಲವೆಂಬ ಆರೋಪವು ಕೇಳಿಬಂದಿದೆ. ಇನ್ನು ತುರುಸಿನ ಸ್ಪರ್ಧೆಯಲ್ಲಿ ಕಾಂಗ್ರೆಸ್ ಪ್ರಚಾರದಲ್ಲಿ ಕಾಣಲಿಲ್ಲ. ಕಾಂಗ್ರೆಸ್, ಜೆಡಿ(ಎಸ್) ಜೊತೆ ಒಳ ಒಪ್ಪಂದ ಮಾಡಿಕೊಂಡಿದೆ, ಈ ಬಾರಿ ಬಿಜೆಪಿಗೆ ಸೋಲು ಕಟ್ಟಿಟ್ಟ ಬುತ್ತಿ ಎನ್ನಲಾಗಿತ್ತು. ಕಾಂಗ್ರೆಸ್‌ಗೆ ಸೇರಿದ ಮಾಜಿ ಬೂಡಾ ಅಧ್ಯಕ್ಷರೊಬ್ಬರು ತಮ್ಮ ಮನೆಯಲ್ಲಿಯೇ ಬಿಜೆಪಿ ಅಭ್ಯರ್ಥಿ ಗೆಲುವಿಗಾಗಿ ಸಭೆ ನಡೆಸಿದರೆಂಬ ಆರೋಪವಿದೆ. ಇದರ ಒಬ್ಬ ರಾಜ್ಯ ನಾಯಕರು ಮತ ಎಣಿಕೆಯ ದಿನ ಬಿಜೆಪಿ ಎಷ್ಟು ಗೆದ್ದಿತೆಂದು ಕೇಳಲು ಹಾತೊರೆಯುತ್ತಿದ್ದರೆಂದು ಬಳ್ಳಾರಿ ಜನತೆ ಮಾತನಾಡುತ್ತಿದ್ದಾರೆ. ಕಳೆದ ವಿಧಾನಸಭಾ ಚುನಾವಣೆಯಲ್ಲಿಯೇ ಕಾಂಗ್ರೆಸ್ ಒಂದೆರಡು ಕ್ಷೇತ್ರ ಬಿಟ್ಟರೆ ಉಳಿದೆಡೆ 3ನೇ ಸ್ಥಾನ ಪಡೆದಿತ್ತು. ಈಗಿನ ಬಳ್ಳಾರಿಯ ಫಲಿತಾಂಶ ಜನತೆ ಕಾಂಗ್ರೆಸ್‌ನಿಂದ ಹೊರಬರುವುದನ್ನು ತೋರಿಸುತ್ತಿದೆ.

ಜನತಾದಳ(ಎಸ್)

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಜೆಡಿ(ಎಸ್) ಬಳ್ಳಾರಿ ನಗರದಲ್ಲಿ ಠೇವಣಿ ಕಳೆದುಕೊಂಡಿತು. ಈಗ ಸೂರ್ಯನಾರಾಯಣರೆಡ್ಡಿಯವರ ನೇತೃತ್ವದಲ್ಲಿ ಬಳ್ಳಾರಿ ನಗರಪಾಲಿಕೆ ಚುನಾವಣೆಯಲ್ಲಿ ಗಟ್ಟಿ ಪೈಪೋಟಿ ನೀಡಿತು. ಜೆಡಿ(ಎಸ್)ನ ಕೆಲವು ಅಭ್ಯರ್ಥಿಗಳನ್ನು ಹಾಗೂ ಬೂತ್ ಏಜೆಂಟ್‌ಗಳನ್ನು ಬಿಜೆಪಿಯವರು ಖರೀದಿಸಿದ್ದರೆಂದು ಬಿಜೆಪಿ ಮೇಲೆ ಆರೋಪ ಮಾಡಲಾಗಿದೆ. ಇಡೀ ಚುನಾವಣೆಯು ಬಿಜೆಪಿ, ಜೆಡಿ(ಎಸ್) ನಡುವೆ ನಡೆಯುತ್ತಿದೆ ಎಂಬಂತೆ ತುರುಸಿನ ಸ್ಪರ್ಧೆ ನಡೆಯಿತು. 45,000 ಮತಗಳನ್ನು ಗಳಿಸಿದೆಯೆಂದು ಸೂರ್ಯನಾರಾಯಣರೆಡ್ಡಿ ಮತದಾರರಿಗೆ ಧನ್ಯವಾದ ತಿಳಿಸುವಾಗ ಹೇಳಿದ್ದಾರೆ. ಮುಸ್ಲಿಂರ ಗಣನೀಯ ಒಂದು ಭಾಗ ಈಚೆಗೆ ಜೆಡಿ(ಎಸ್) ಸೇರಿದ್ದು ಮತ್ತು ಬಿಜೆಪಿ ಜೊತೆ ಸರಿಸಮನಾಗಿ ತುರುಸಿನ ಸ್ಪರ್ಧೆ ನಡೆಸಿದ್ದು ಈ ಸಾಧನೆಯ ಹಿಂದಿದೆ.

ಬಿಜೆಪಿ

ಬಳ್ಳಾರಿ ನಗರಪಾಲಿಕೆಯಲ್ಲಿ 30 ಸ್ಥಾನಗಳನ್ನು ಗೆದ್ದುದು ಬಿಜೆಪಿಯ ಪಾಳೆಯದಲ್ಲಿಯೇ ಆಶ್ಚರ್ಯ ಉಂಟುಮಾಡಿದೆ. ಅವರ ಲೆಕ್ಕಾಚಾರ 15ರಿಂದ 17ರ ಆಜುಬಾಜು ಎಂದಿತ್ತು ಎಂದು ಹೇಳಲಾಗಿದೆ.

ಪುಟ 10ಕ್ಕೆ

ಜನಶಕ್ತಿ ಕನ್ನಡ ವಾರಪತ್ರಿಕೆ



ಭೂಮಿಯ ತಾಪಮಾನ ಬಿಸಿಯಾಗುತ್ತಿರುವುದು ಕೊನೆಗೂ ಸಾಬೀತಾಗಿದೆ. ಇದರ ಬಗ್ಗೆ ಸಂದೇಹವಿದ್ದದ್ದು ಜಾರ್ಜ್‌ಬುಷ್ ಸೇರಿದಂತೆ ಅಮೇರಿಕಾದ ನವ-ಸಂಪ್ರದಾಯವಾದಿಗಳು ಮತ್ತು ಬಲಪಂಥೀಯರಿಗೆ ಮಾತ್ರವೇ ಹೊರತು ಮುಂಚೂಣಿ ವಿಜ್ಞಾನಿಗಳಿಗಲ್ಲ. ಅಮೇರಿಕಾದ ನವ-ಸಂಪ್ರದಾಯವಾದಿಗಳು ಹವಾಮಾನ ಬದಲಾವಣೆ, ಅದರ ದುಷ್ಪರಿಣಾಮಗಳು, ಇತ್ಯಾದಿಗಳನ್ನು ವಿಜ್ಞಾನಿಗಳ ಕಟ್ಟುಕಥೆಯೆಂದು ಆಪಾದಿಸುತ್ತಿದ್ದರು. ಆದರೆ, ವಿಶ್ವಸಂಸ್ಥೆಯ ಅಂತರ-ಸರ್ಕಾರಿ ಹವಾಮಾನ ಬದಲಾವಣೆ ಕುರಿತ ಸಮಿತಿಯು (ಐಪಿಸಿಸಿ) ತಾನು ಎರಡೂವರೆ ದಶಕಗಳ ಕಾಲ ನಡೆಸಿದ ನೂರಾರು ಸಂಶೋಧನಾ ವರದಿಗಳಿಂದ ಇದನ್ನು ನಿರೂಪಿಸಿದೆ. ಮಾನವನ ಕೈಗಾರಿಕಾ ಚಟುವಟಿಕೆಗಳಿಂದ ಭೂಮಿಯ ತಾಪಮಾನ ಏರುತ್ತಿರುವುದನ್ನು ವೈಜ್ಞಾನಿಕವಾಗಿ ಸಾಬೀತು ಮಾಡಿರುವುದಕ್ಕೆ ನೊಬೆಲ್ ಶಾಂತಿ ಪ್ರಶಸ್ತಿ ಲಭಿಸಿರುವುದರಿಂದ ಜಾರ್ಜ್ ಬುಷ್‌ಗೆ ಕಪಾಳಮೋಕ್ಷ ಸಿಕ್ಕಂತಾಗಿದೆ.

ವಿಶ್ವಸಂಸ್ಥೆಯ ಅಂತರ-ಸರ್ಕಾರಿ ಹವಾಮಾನ ಬದಲಾವಣೆ ಕುರಿತ ಸಮಿತಿ ಮತ್ತು ಅಮೇರಿಕಾದ ಮಾಜಿ ಉಪಾಧ್ಯಕ್ಷ ಅಲ್ ಗೋರ್ ಗೆ ಜಂಟಿಯಾಗಿ 2007ರ ನೊಬೆಲ್ ಶಾಂತಿ ಪಾರಿತೋಷಕವನ್ನು ನೀಡಲಾಗಿದೆ. "ಮಾನವ-ನಿರ್ಮಿತ ಹವಾಮಾನ ಬದಲಾವಣೆಯ ಕುರಿತಂತೆ ಮಹತ್ತರವಾದ ಜ್ಞಾನವನ್ನು ಸಂಶೋಧಿಸಿ, ಕಲೆಹಾಕಿ ಎಲ್ಲೆಡೆ ಪ್ರಸರಣ ಮಾಡುತ್ತಿರುವುದಕ್ಕೆ" ನಾರ್ವೆಯ ನೊಬೆಲ್ ಸಮಿತಿಯು ಇವರನ್ನು ತುಂಬು ಪ್ರಶಂಸೆಯಿಂದ ಹೊಗಳಿದೆ.

ವಿಶ್ವಸಂಸ್ಥೆಯ ಐಪಿಸಿಸಿಯಲ್ಲಿ ಸುಮಾರು 2,000 ವಿಜ್ಞಾನಿಗಳು ಸಂಶೋಧನೆ ನಡೆಸುತ್ತಿದ್ದು, ಅದೊಂದು ಹವಾಮಾನ ಬದಲಾವಣೆ ಕುರಿತಂತೆ ಅಧಿಕಾರಯುತವಾಗಿ ಮಾತನಾಡಬಲ್ಲ ಸಂಸ್ಥೆಯಾಗಿದೆ. ಐಪಿಸಿಸಿಯನ್ನು 1988ರಲ್ಲಿ ಸ್ಥಾಪಿಸಲಾಗಿದ್ದು ಜಾಗತಿಕ ಹವಾಮಾನ ಕುರಿತಂತೆ ಕಳೆದ ಎರಡು ದಶಕಗಳ ಕಾಲ ನಿರಂತರವಾಗಿ ನೂರಾರು ಸರಣಿಯೋಪಾದಿಯ ವರದಿಗಳನ್ನು ಅದು ಪ್ರಕಟಿಸುತ್ತಾ ಬಂದಿದೆ. ನೊಬೆಲ್ ಪ್ರಶಸ್ತಿಯು ಈ ಜಗತ್ತಿನಾದ್ಯಂತ ಹವಾಮಾನ ಬದಲಾವಣೆ ಕುರಿತು ಸಂಶೋಧನೆ ನಡೆಸುತ್ತಾ ಅದನ್ನು ನಿಯಂತ್ರಿಸಲು ಪರ್ಯಾಯಗಳನ್ನು ಸೂಚಿಸುತ್ತಾ ಬಂದಿರುವ ವಿಜ್ಞಾನಿಗಳಿಗೆ ಪ್ರಮುಖವಾಗಿ ಸಂದ ಗೌರವವಾಗಿದೆ. ಭಾರತದ ಟಾಟಾ ಶಕ್ತಿ ಸಂಶೋಧನಾ ಸಂಸ್ಥೆ(ಟೆರಿ)ಯ ನಿರ್ದೇಶಕರಾಗಿರುವ ಡಾ: ಆರ್.ಕೆ.ಪಚೌರಿಯವರು ಐಪಿಸಿಸಿಯ ಅಧ್ಯಕ್ಷರೂ ಆಗಿದ್ದಾರೆ.


ಜೀರ್ಣಿಸಿಕೊಳ್ಳಲಾಗದ ಸತ್ಯ

ಅಮೇರಿಕಾದ ಕಳೆದ ಅಧ್ಯಕ್ಷೀಯ ಚುನಾವಣೆಯಲ್ಲಿ ಜಾರ್ಜ್ ಬುಷ್ ವಿರುದ್ಧ ಸಂದೇಹಾಸ್ಪದವಾಗಿ ಸೋತ ಅಲ್ ಗೋರ್‌ರವರು ಹವಾಮಾನ ಬದಲಾವಣೆಯಿಂದುಂಟಾಗುತ್ತಿರುವ ದುಷ್ಪರಿಣಾಮಗಳನ್ನು ಕುರಿತಂತೆ ಎಚ್ಚರಿಕೆ ನೀಡುವ 'ಜೀರ್ಣಿಸಿಕೊಳ್ಳಲಾಗದ ಸತ್ಯ' ಎಂಬ ಸಾಕ್ಷ್ಯಚಿತ್ರವನ್ನು ನಿರ್ಮಿಸಿದ್ದರು. ಅದಕ್ಕೆ 2007ನೇ ವರ್ಷದ ಅತ್ಯುತ್ತಮ ಸಾಕ್ಷ್ಯಚಿತ್ರವೆಂದು ಆಸ್ಕರ್ ಪ್ರಶಸ್ತಿ ಲಭಿಸಿತ್ತು. ಅವರ ಈ ಕಾರ್ಯವನ್ನು "ಜಾಣ್ಮೆಯುತ ವೈಜ್ಞಾನಿಕ ಕಾರ್ಯ" ಎಂದು ಪರಿಗಣಿಸಲಾಗಿದೆ. ಅಲ್‌ಗೋರ್ ರವರು ಹಲವಾರು ಪುಸ್ತಕಗಳ ಪ್ರಕಟಣೆ, ವಿಚಾರ ಸಂಕಿರಣಗಳು, ಇತ್ಯಾದಿಗಳ ಮೂಲಕ ಹವಾಮಾನ ಬದಲಾವಣೆ ವಿಷಯವನ್ನು ಜಾಗತಿಕ ಮಟ್ಟದಲ್ಲಿ ಪ್ರಮುಖವಾಹಿನಿಗೆ ತರಲು ಶ್ರಮಿಸಿದ್ದಾರೆ. ಕಳೆದ ವರ್ಷ ಅವರೇ ಸ್ಥಾಪಿಸಿರುವ "ಹವಾಮಾನ ಸಂರಕ್ಷಣೆಗಾಗಿ ಮೈತ್ರಿ" ಎಂಬ ಹೆಸರಿನ ಸಂಸ್ಥೆಗೆ ತಮ್ಮ ಪಾಲಿನ ಪ್ರಶಸ್ತಿಯ ಹಣವನ್ನು ನಿಧಿಯಾಗಿ ನೀಡುವುದಾಗಿಯೂ ತಿಳಿಸಿದ್ದಾರೆ.

- ಜಾಗತಿಕ ಪರಿಸರ ಮಾಲಿನ್ಯ ರಾಜಕೀಯ
- ವಿಶ್ವದ ಮುಂಚೂಣಿ ರಾಷ್ಟ್ರಗಳೇ ಮೊದಲ ಅಪರಾಧಿಗಳು

ಧರೆ ಹತ್ತಿ ಉರಿದೊಡೆ ?

ಜಯಕುಮಾರ್



ಜೀವ ಜಾಲದ ಸುಂದರ ಧರೆ ಉರಿದುಹೋಗಬೇಕೆ?

ಐಪಿಸಿಸಿಯ ಮಹತ್ವದ ವರದಿಗಳು:

ಈ ವರ್ಷದ ಮೇ 4ರಂದು ಐಪಿಸಿಸಿಯ ತೃತೀಯ ಕಾರ್ಯಕಾರಿ ಗುಂಪು ಬ್ಯಾಂಕಾಕ್ ನಲ್ಲಿ ತನ್ನ ವರದಿಯನ್ನು ಬಿಡುಗಡೆ ಮಾಡಿತು. ಅದರ ಪ್ರಕಾರ, ಭೂಮಿಯ ತಾಪಮಾನ ಜಾಗತಿಕವಾಗಿ ಏರುತ್ತಿರುವುದು ವಾಸ್ತವ ಅಂಶವಾಗಿದ್ದು ಅದು ಭೂಮಿಯ ಎಲ್ಲಾ ಜೀವಿಗಳು ಅಳಿವಿನಂಚಿಗೆ ಹೋಗುವ ಮಟ್ಟದತ್ತ ಸಾಗುತ್ತಿದೆ. ಆದರೆ ಇದರಲ್ಲಿನ ಶುಭ ಸುದ್ದಿಯೆಂದರೆ: ಲಭ್ಯವಿರುವ ತಂತ್ರಜ್ಞಾನಗಳ ಬಳಕೆಯಿಂದ ತತ್‌ಕ್ಷಣದಲ್ಲಿ ಸೂಕ್ತ ಕ್ರಮಗಳನ್ನು ಕೈಗೊಂಡಲ್ಲಿ ಕೆಲವರು ಹೆದರಿಕೆ ಸೃಷ್ಟಿಸುತ್ತಿದ್ದಕ್ಕಿಂತ ಕಡಿಮೆ ಆರ್ಥಿಕ ಮತ್ತು ಸಾಮಾಜಿಕ ವೆಚ್ಚದ ಮೂಲಕ ಭೂಮಿ ಬಿಸಿಯೇರುವ ಪ್ರಕ್ರಿಯೆಯನ್ನು ತಗ್ಗಿಸಬಹುದು ಎಂಬುದು. ಇದನ್ನು ನಿಯಂತ್ರಿಸಲು ಸಾಮಾನ್ಯ ವೆಚ್ಚಕ್ಕಿಂತ ಕೇವಲ ಶೇ. 5 ರಿಂದ 10ರಷ್ಟು ಹೆಚ್ಚಿನ ವೆಚ್ಚ ಭರಿಸಿ ತಂತ್ರಜ್ಞಾನ ಅಳವಡಿಸಬಹುದು.

ಐಪಿಸಿಸಿ ವರದಿಯ ಪ್ರಕಾರ, ಕಟ್ಟಡಗಳಲ್ಲಿನ ವಾತಾವರಣವನ್ನು ಬಿಸಿಗೊಳಿಸಲು, ತಂಪುಗೊಳಿಸಲು ಮತ್ತು ಬೆಳಕು ನೀಡಲು ಬಳಕೆಯಾಗುವ ಇಂಧನದಿಂದ ಅತಿದೊಡ್ಡ ಹಸಿರುಮನೆ ಅನಿಲಗಳು ವಿಸರ್ಜನೆಯಾಗುತ್ತಿವೆ. ಇದನ್ನು ನಿಯಂತ್ರಿಸಲು ನವೀಕರಿಸಬಹುದಾದ ಸಂಪನ್ಮೂಲಗಳಾದ ಸೌರಶಕ್ತಿ, ವಾಯುಶಕ್ತಿ, ಇತ್ಯಾದಿಗಳನ್ನು ಪ್ರಸಕ್ತ ಶೇ. 18ರಿಂದ ಶೇ. 35ರ



ಪ್ರಮಾಣಕ್ಕೆ ಹೆಚ್ಚಿಸಲು ಯೋಜನೆ ರೂಪಿಸಿದೆ. ಗಣನೀಯ ಪ್ರಮಾಣದಲ್ಲಿ ಹಸಿರುಮನೆ ಅನಿಲಗಳನ್ನು ಹೊರಸೂಸುವ ಮತ್ತೊಂದು ಮೂಲವೆಂದರೆ ಸಾರಿಗೆ ಸಂಪರ್ಕ ಸಾಧನಗಳು. ಬಿಡಿ ವಾಹನಗಳಿಗಿಂತ ಸಾಮೂಹಿಕ ಸಾರಿಗೆಯನ್ನು ಉತ್ತೇಜಿಸುವುದರಿಂದ ಇದನ್ನು ನಿಯಂತ್ರಿಸಬಹುದೆಂದು ವರದಿಯಲ್ಲಿ ದಾಖಲಿಸಲಾಗಿದೆ. ಇಂಧನದ ಮತ್ತೊಂದು ಪ್ರಮುಖ ಮೂಲವೆಂದು ಜನಪ್ರಿಯ ಗೊಳಿಸಲಾಗುತ್ತಿರುವ ಜೈವಿಕ ಇಂಧನಗಳ ಬಳಕೆಯನ್ನು ಶೇ. 3ರಿಂದ ಶೇ. 10ರವರೆಗೆ ಹೆಚ್ಚಿಸಲು ನಡೆಸಲಾಗುತ್ತಿರುವ ಯತ್ನದ ಕುರಿತು ವರದಿ ಆತಂಕ ವ್ಯಕ್ತಪಡಿಸಿದೆ. ಇದರಿಂದ ಅರಣ್ಯಭೂಮಿ ದುರ್ಬಳಕೆಯಾಗುವುದು, ಭೂಮಿ ಮತ್ತು ಜಲ ಸಂಪನ್ಮೂಲಗಳಿಗಾಗಿ ಪೈಪೋಟಿ ಮತ್ತು ಆಹಾರ ಭದ್ರತೆಯ ಮೇಲೆ ದೊಡ್ಡ ಪೆಟ್ಟು ಬೀಳುವುದೆಂದು ಅದು ತಿಳಿಸಿದೆ.

ಅರಣ್ಯನಾಶವನ್ನು ತಡೆಯುವುದರಿಂದಲೇ ಕಡಿತಗೊಳಿಸಬೇಕಾದ ಅನಿಲ ವಿಸರ್ಜನೆಯಲ್ಲಿ ಶೇ. 50ರಷ್ಟನ್ನು ಕಡಿತಗೊಳಿಸಬಹುದು. ಬಂಡವಾಳಶಾಹಿ-ಪ್ರೇರಿತ ಜಾಗತೀಕರಣ ಪ್ರಕ್ರಿಯೆಯಿಂದಾಗಿ ಮರಗಳಿಗಾಗಿ ಅಮೇಜಾನ್ ಮತ್ತು ಆಗ್ನೇಯಾ-ಏಷ್ಯಾದ ಕಾಡುಗಳನ್ನು ಯದ್ವಾತದ್ವಾ ನಿರ್ನಾಮಗೊಳಿಸಲಾಗುತ್ತಿದೆ, ಭೂಮಿಗಾಗಿ ಮತ್ತು ಸದ್ಯಕ್ಕೆ ಲಾಭತರುವ ಜೈವಿಕ-ಇಂಧನಗಳ ಬೆಳೆ ಬೆಳೆಯಲು ಕಾಡು ಕಡಿಯಲಾಗುತ್ತಿದೆ.

ಹವಾಮಾನ ಬದಲಾವಣೆ




ಭೂಮಿಯ ತಾಪಮಾನವು ಜಾಗತಿಕ ಮಟ್ಟದಲ್ಲಿ ಸತತವಾಗಿ ಏರುತ್ತಲೇ ಇದೆ. ಕೈಗಾರಿಕಾ ಚಟುವಟಿಕೆಗಳಿಂದ ಬಿಡುಗಡೆಯಾಗುವ ಇಂಗಾಲದ ಡೈ ಆಕ್ಸೈಡ್, ಕ್ಲೋರೋ ಫ್ಲೋರೋ ಕಾರ್ಬನ್ ಇತ್ಯಾದಿಗಳಂಥಹ (ಇಂಥಹ ಅನಿಲಗಳು ಭೂಮಿಯ ವಾತಾವರಣದಲ್ಲಿ ಸಿಲುಕಿ ವಾಪಸು ಹೊರಗೆ ಹೋಗದೆ ಭೂಮಿಯ ತಾಪಮಾನವನ್ನು ಹೆಚ್ಚಿಸುವುದರಿಂದ ಇವುಗಳನ್ನು ಹಸಿರುಮನೆ ಅನಿಲಗಳು ಎಂದು ಕರೆಯುತ್ತಾರೆ) ಮಲಿನಕಾರಕ ಅನಿಲಗಳು ವಾತಾವರಣದೊಳಗೆ ಸೇರಿ ಭೂಮಿಯ ವಾತಾವರಣವನ್ನು ರಕ್ಷಿಸುತ್ತಿರುವ ಓಜೋನ್ ಪದರವನ್ನು ನಾಶಪಡಿಸುತ್ತಿವೆ. ಇದರಿಂದಾಗಿ ಸೂರ್ಯನಿಂದ ಬಿಡುಗಡೆಯಾಗುವ ಅತಿನೇರಳೆ ಕಿರಣಗಳು ಭೂಮಿಯನ್ನು ತಲುಪಿ ಭೂಮಿಯ

ನೊಬೆಲ್ ಪ್ರಶಸ್ತಿ ವಿಜೇತರು



ಅಲ್‌ಗೋರ್



ಐಪಿಸಿಸಿಯ ಅಧ್ಯಕ್ಷ ಆರ್.ಕೆ.ಪಚೌರಿ

ಕ್ಯೋಟೋ ಒಪ್ಪಂದ ಎಂದರೇನು ?

ಕ್ಯೋಟೋ ಒಪ್ಪಂದದ ಪ್ರಕಾರ 2010ರ ವೇಳೆಗೆ ಕೈಗಾರಿಕಾ ರಾಷ್ಟ್ರಗಳು 1990ರ ಮಟ್ಟದಲ್ಲಿ ಶೇ. 8ರಷ್ಟು ಅನಿಲ ವಿಸರ್ಜನೆಯನ್ನು ಕಡಿತಗೊಳಿಸುವಂತೆ ನಿಬಂಧನೆಗೆ ಒಳಪಡಬೇಕಾಗುತ್ತದೆ. ಇಂಥಹ ವಿಷಪೂರಿತ ಅನಿಲಗಳ ವಿಸರ್ಜನೆಯನ್ನು ಕಡಿತಗೊಳಿಸುವಂತೆ ಕ್ಯೋಟೋ ಒಪ್ಪಂದಕ್ಕೆ ಯೂರೋಪ್ ರಾಷ್ಟ್ರಗಳಾದಿಯಾಗಿ ವಿಶ್ವದ ಬಹುತೇಕ ಎಲ್ಲ ಕೈಗಾರಿಕೀಕೃತ ಮತ್ತು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳು (ಅಂದಾಜು 160 ರಾಷ್ಟ್ರಗಳು) ಮುಂದಾಗಿ ಸಹಿ ಹಾಕಿವೆ. ಆದರೆ ಅಮೇರಿಕಾ ಮಾತ್ರ ಈ ಒಪ್ಪಂದದಿಂದ ಹಿಂದೆ ಸರಿಯಿತು. 1974ರಿಂದ 1990ರವರೆಗಿನ ಹಸಿರು ಮನೆ ಅನಿಲಗಳ ಸಾಂದ್ರತೆಯ ಬೆಳವಣಿಗೆಯ ದರವು ಶೇ. 70ರಷ್ಟಿದೆ. ಬಹುತೇಕ ರಾಷ್ಟ್ರಗಳು ಕ್ಯೋಟೋ ಒಪ್ಪಂದವನ್ನು ಜಾರಿಗೆ ತಂದರೂ ಕೂಡ 1990ರಿಂದ 2004ರವರೆಗಿನ ಹಸಿರು ಮನೆ ಅನಿಲಗಳ ಸಾಂದ್ರತೆಯ ಬೆಳವಣಿಗೆಯ ದರವು ಶೇ. 24ರಷ್ಟಿತ್ತು.



ವಿಷಾನಿಲ ರಾಸಾಯನಿಕ ಸೇರಿಸುತ್ತಲೇ ಇರುವ ಡಾಲರ್ ಗಿಡುಗ

ಮೇಲ್ಮೈನ ವಾತಾವರಣದಲ್ಲೇ ಉಳಿದು ಭೂಮಿಯ ತಾಪಮಾನವನ್ನು ಮತ್ತಷ್ಟು ಹೆಚ್ಚಿಸುತ್ತಿವೆ. ಇದನ್ನು ಭೂಮಿಯ ಜಾಗತಿಕ ತಾಪಮಾನ ಏರಿಕೆ ಅಥವಾ ಹವಾಮಾನ ಬದಲಾವಣೆ ಎಂದು ಕರೆಯಲಾಗುತ್ತದೆ.

ಕೈಗಾರಿಕಾ ಕ್ರಾಂತಿ ಸಮಯಕ್ಕಿಂತ ಮುಂಚಿನ ವರ್ಷಗಳಲ್ಲಿ ಹಸಿರು ಮನೆ ಅನಿಲಗಳ ಸಾಂದ್ರತೆಯು ಸುಮಾರು 300 ಪಿಪಿಎಂ (ಪಾರ್ಟ್ಸ್ ಪರ್ ಮಿಲಿಯನ್)ನಷ್ಟು ಇತ್ತು. ಪ್ರಸಕ್ತದಲ್ಲಿ ಅದರ ಪ್ರಮಾಣ 425 ಪಿಪಿಎಂ ಆಗಿದ್ದು, ಈ ಅನಿಲಗಳ ವಿಸರ್ಜನೆ ಇದೇ ಪ್ರಮಾಣದಲ್ಲಿ ಮುಂದುವರೆದಲ್ಲಿ 2030ರ ವೇಳೆಗೆ 475-490 ಪಿಪಿಎಂ ನಷ್ಟು ತಲುಪುತ್ತದೆಂಬ ಅಂದಾಜಿದ್ದು ಭೂಮಿಯ ಜಾಗತಿಕ ತಾಪಮಾನವು ಸುಮಾರು 2ರಿಂದ 2.8 ಡಿಗ್ರಿ ಸೆಂಟಿಗ್ರೇಡ್‌ನಷ್ಟು ಹೆಚ್ಚಿ ಅಪಾಯಕಾರಿ ಹಂತವನ್ನು ತಲುಪುತ್ತದೆ. ಈ ಶತಮಾನದ ಕೊನೆಯ ಹೊತ್ತಿಗೆ ಹಾಗೆಯೇ ಮುಂದುವರೆದಲ್ಲಿ, ಹಸಿರು ಮನೆ ಅನಿಲಗಳ ಸಾಂದ್ರತೆಯು 550-600 ಪಿಪಿಎಂ ನಷ್ಟು ತಲುಪಿ ಜಾಗತಿಕ ತಾಪಮಾನವು 4ರಿಂದ 5 ಡಿಗ್ರಿ ಸೆಂಟಿಗ್ರೇಡ್‌ನಷ್ಟು ಏರಿಕೆಗೊಂಡು ಭೂಮಿಯ ಮೇಲೆ ಯಾವುದೇ ಜೀವಸಂಕುಲವೂ ಇಲ್ಲದಂತೆ ನಾಶಗೊಳಿಸುತ್ತದೆ.

ಹವಾಮಾನ ಬದಲಾವಣೆಯ ದುಷ್ಪರಿಣಾಮಗಳು

ಹವಾಮಾನ ಬದಲಾವಣೆಯನ್ನು ಸರಿಯಾಗಿ ಬಗೆಹರಿಸದಿದ್ದಲ್ಲಿ ಕ್ಷಿಪ್ರಗತಿಯ ಕೈಗಾರಿಕಾಭಿವೃದ್ಧಿಯಿಂದ ಲಭಿಸುವ ಆರ್ಥಿಕ ಗಳಿಕೆಯು ತಂತಾನೇ ನಾಶಗೊಳ್ಳುವುದು. ಕಳೆದ 11 ವರ್ಷಗಳಲ್ಲಿ ದಾಖಲಾಗಿರುವ ಅತ್ಯಂತ ಬಿಸಿಯಾದ ವರ್ಷಗಳು ಕಳೆದ 12 ವರ್ಷಗಳಲ್ಲೇ ಉಂಟಾಗಿವೆಯಾದ್ದರಿಂದ ಹವಾಮಾನ ಬದಲಾವಣೆಯು ವೇಗವನ್ನು ಪಡೆದುಕೊಂಡಿದೆ. 20ನೇ ಶತಮಾನದಲ್ಲಿ, ಸರಾಸರಿ ತಾಪಮಾನದ ಏರಿಕೆಯು 0.74 ಡಿಗ್ರಿ ಸೆಂಟಿಗ್ರೇಡ್‌ನಷ್ಟು; ಸಮುದ್ರಮಟ್ಟವು 17 ಸೆಂಟಿಮೀಟರ್‌ನಷ್ಟು ಏರಿಕೆಯಾಗಿದ್ದು ಉತ್ತರ ಧ್ರುವ ಪ್ರದೇಶದ ಮಂಜುಗಡ್ಡೆಯ ವಿಶಾಲ ಭಾಗವು ಕರಗಿಹೋಗಿದೆ. ಮಂಜುಗಡ್ಡೆಯ ಪ್ರಮಾಣವು ಅತ್ಯಂತ ವೇಗವಾಗಿ ಕರಗುವುದರಿಂದ ಅದು ನೀರಿನ ಲಭ್ಯತೆಯ ಮೇಲೆ ನೇರವಾದ ಪರಿಣಾಮವನ್ನು ಬೀರುತ್ತದೆ. ಇದರಿಂದಾಗಿ ದಕ್ಷಿಣ ಏಷ್ಯಾದ 50ಕೋಟಿ ಜನರು ಮತ್ತು ಚೀನಾದ 25ಕೋಟಿ ಜನರು ಸಂಕಷ್ಟಕ್ಕೀಡಾಗುತ್ತಾರೆ. ಸಮುದ್ರದ ತೀರ ಪ್ರದೇಶಗಳು ಪ್ರವಾಹಗಳ ಅಪಾಯವನ್ನು ಸದಾ ಎದುರಿಸಬೇಕಾಗುತ್ತದೆ.

ಹವಾಮಾನ ಬದಲಾವಣೆಯಿಂದ ಆಫ್ರಿಕಾದ ರಾಷ್ಟ್ರಗಳು ಅತ್ಯಂತ ಹೆಚ್ಚಿನ ಸಂಕಷ್ಟಕ್ಕೀಡಾಗುತ್ತವೆ. 2020ರ ವೇಳೆಗೆ ಆಫ್ರಿಕಾ ಖಂಡದ ಸುಮಾರು 7.5ಕೋಟಿಯಿಂದ 25 ಕೋಟಿಯಷ್ಟು ಜನರು ನೀರಿನ ಅಲಭ್ಯತೆಯಿಂದ ಕಷ್ಟವನ್ನು ಅನುಭವಿಸುತ್ತಾರೆ.



ಇದರ ಜೊತೆಗೆ, ಪ್ರಾಣಿ ಪಕ್ಷಿಗಳು, ಅಳಿವಿನಲ್ಲಿರುವ ಜೀವಿಗಳು ಮತ್ತು ವಾತಾವರಣ ಬದಲಾವಣೆಗೆ ಸೂಕ್ಷ್ಮತೆಯಿಂದ ಪ್ರತಿಕ್ರಿಯಿಸುವ ನೂರಾರು ಪ್ರಭೇಧದ ಜೀವಿಗಳು ಸಂಕಷ್ಟಕ್ಕೆ ಸಿಲುಕುತ್ತವೆ. ಐಪಿಸಿಸಿಯ ಪ್ರಕಾರ ಭೂಮಿಯ ತಾಪಮಾನವೇನಾದರೂ 1.5ಯಿಂದ 2.5 ಡಿಗ್ರಿ ಸೆಂಟಿಗ್ರೇಡ್‌ನಷ್ಟು ಹೆಚ್ಚಾದರೂ ಶೇ. 20ರಿಂದ 30ರಷ್ಟು ಸಸ್ಯ ಮತ್ತು ಪ್ರಾಣಿಗಳು ವಿನಾಶದ ಅಂಚಿಗೆ ತಲುಪುತ್ತವೆ.

ಭೂಮಿಯು ತಾಪಮಾನವು ಹೆಚ್ಚೆಚ್ಚು ಬಿಸಿಯಾಗುವುದನ್ನು ತಡೆಗಟ್ಟಲು ಅವಶ್ಯವಿರುವ ವೆಚ್ಚವು ಈ ಮೊದಲು ನಿರೀಕ್ಷಿಸಿದ್ದಕ್ಕಿಂತ ಕಡಿಮೆಯಾಗಿರುವುದು ಸಮಾಧಾನಕರ ಅಂಶ. ಹಸಿರು ಮನೆ ಅನಿಲಗಳು ಮತ್ತು ಇಂಗಾಲದ ಡೈ ಆಕ್ಸೈಡ್ ಸಾಂದ್ರತೆಯನ್ನು 445 ರಿಂದ 490 ಪಿಪಿಎಂ ನಷ್ಟು ಮಿತಿಗೊಳಿಸಿದರೆ, ಉಷ್ಣಾಂಶವು 2ರಿಂದ 2.4 ಡಿಗ್ರಿ ಸೆಂಟಿಗ್ರೇಡ್ ನಷ್ಟು ತಗ್ಗವುದಿದ್ದು ಇದಕ್ಕೆ ತಗಲುವ ವೆಚ್ಚ 2030ರ ವೇಳೆಗೆ ಒಟ್ಟಾರೆ ದೇಶೀಯ ಉತ್ಪನ್ನದ (ಜಿಡಿಪಿ) ಶೇ. 3ಕ್ಕಿಂತಲೂ ಕಡಿಮೆ ಎಂದು ಅಂದಾಜಿಸಲಾಗಿದೆ.

ವಾತಾವರಣ ಏರುಪೇರು:

ಹವಾಮಾನದ ಬದಲಾವಣೆಯಿಂದಾಗಿ ವರ್ಷದ ಚಳಿಗಾಲ, ಬೇಸಿಗೆಗಾಲ ಮತ್ತು ಮಳೆಗಾಲಗಳ ಅವಧಿಗಳೇ ಬದಲಾಗುತ್ತಲಿವೆ. ಇದು ಕೃಷಿ ಕ್ಷೇತ್ರದ ಮೇಲೆ ಗಂಭೀರವಾದ ಪರಿಣಾಮವನ್ನುಂಟು ಮಾಡಿದ್ದು ಬೆಳೆ ಬೆಳೆಯುವ ವಿಧಾನಗಳು, ಕಾಲ, ಬೆಳೆಯ ವಿಧ, ಇತ್ಯಾದಿಗಳೆಲ್ಲವು ಬದಲಾಗುತ್ತಲಿರುವುದು



ಸಾಬೀತಾಗಿದೆ. ಇದರಿಂದ ಅತಿವೃಷ್ಟಿ, ಅನಾವೃಷ್ಟಿ, ಪ್ರವಾಹ, ಬರ ಮತ್ತು ಕ್ಷಾಮಗಳಂಥಹ ಭೀಕರ ಪ್ರಕ್ರಿಯೆಗಳು ಬರಸಿಡಿಲಿನಂತೆ ಇತ್ತೀಚಿನ ವರ್ಷಗಳಲ್ಲಿ ಅಪ್ಪಳಿಸುತ್ತಲಿವೆ. ಕಡಲತೀರದಲ್ಲಿ ವಾಸಿಸುವ ಸಮುದಾಯಗಳು, ದ್ವೀಪ ರಾಷ್ಟ್ರಗಳು ಮತ್ತು ರೈತರು, ವಿಶೇಷವಾಗಿ ಬಡ ರೈತರು ಇದರ ಭೀಕರತೆಗಳಿಗೆ ತಕ್ಷಣದಲ್ಲಿ ಸಿಲುಕುವವರಿದ್ದಾರೆ.

ವಿಶ್ವದ ಮುಂಚೂಣಿ ಮಾಲಿನ್ಯ ರಾಷ್ಟ್ರಗಳು

ಯೂರೋಪ್ ರಾಷ್ಟ್ರಗಳು ಮತ್ತು ಚೀನಾ ದೇಶವು ಅಮೇರಿಕಾಗಿಂತ ಕಡಿಮೆ ಅನಿಲ ವಿಸರ್ಜನೆ ಮಾಡುತ್ತಿರುವುದಲ್ಲದೆ, ಚೀನಾವು 1990ರ ದಶಕದಿಂದೀಚೆಗೆ ಶೇ. 17 ರಷ್ಟು ಅನಿಲ ವಿಸರ್ಜನೆಯನ್ನು ಕಡಿತಗೊಳಿಸಿದೆ. ಇವೆರಡೂ ಉಪಖಂಡಗಳಿಗಿಂತ ಕಡಿಮೆ ಜನಸಂಖ್ಯೆಯನ್ನು ಹೊಂದಿರುವ ಅಮೇರಿಕಾ ಮಾತ್ರ ಹೆಚ್ಚೆಚ್ಚು ವಿಷಾನಿಲಗಳನ್ನು ರಾಸಾಯನಿಕಗಳನ್ನು ವಾತಾವರಣಕ್ಕೆ ಸೇರಿಸುತ್ತಾ ಪರಿಸರ ಸಂರಕ್ಷಣೆಗೆ ಮಾತ್ರ ಕಿಂಚಿತ್ತೂ ಗಮನಹರಿಸಿಲ್ಲ. ವಿಶ್ವದ ಜನಸಂಖ್ಯೆಯಲ್ಲಿ ಕೇವಲ ಶೇ.4ರಷ್ಟು ಜನಸಂಖ್ಯೆಯನ್ನು ಹೊಂದಿರುವ ಅಮೇರಿಕಾ ಶೇ. 26ರಷ್ಟು ಮಲಿನಕಾರಕ ಅನಿಲಗಳನ್ನು ವಿಸರ್ಜಿಸುತ್ತಿದ್ದು ಪ್ರಥಮ ಸ್ಥಾನದಲ್ಲಿದೆ. ವಿಶ್ವದ ಹಸಿರುಮನೆ ಅನಿಲ ವಿಸರ್ಜನೆಯಲ್ಲಿ ಶೇ. 10ರಷ್ಟು ಪಾಲನ್ನು ಹೊಂದಿರುವ ಚೀನಾ ಎರಡನೇ ಸ್ಥಾನದಲ್ಲಿದೆ. ಶೇ. 3ರಷ್ಟು ಪಾಲು ಹೊಂದಿರುವ ಭಾರತ ಮೂರನೇ ಸ್ಥಾನದಲ್ಲಿದ್ದು, ಅದರ ವಿಸರ್ಜನೆಯ ಪ್ರಮಾಣವು ಇಡೀ ಆಫ್ರಿಕಾ ಖಂಡಕ್ಕಿಂತಲೂ ಹೆಚ್ಚಿನದಾಗಿದೆ.! ವಿಶ್ವದ ಶೇ. 54ರಷ್ಟು ಹಸಿರುಮನೆ ಅನಿಲ ವಿಸರ್ಜಿಸುವ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಿಗೆ ಕ್ಯೋಟೋ ಒಪ್ಪಂದದಡಿಯಲ್ಲಿ ಅನಿಲ ವಿಸರ್ಜನೆ ಕಡಿತಮಾಡಲು ಗುರಿ ನೀಡಿಲ್ಲ.

ಆದರೆ ತಲಾ ಅನಿಲ ವಿಸರ್ಜನೆಯ ಮಟ್ಟವನ್ನು ಪರಿಗಣಿಸಿದಲ್ಲಿ ಅಭಿವೃದ್ಧಿ ಹೊಂದಿರುವ ರಾಷ್ಟ್ರಗಳ ವಿಸರ್ಜನೆಗೆ ಹೋಲಿಸಿದರೆ ಕೇವಲ ಹತ್ತನೇ ಒಂದು ಪಾಲು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳದ್ದು. ಆದರೆ, ಅಮೇರಿಕಾದಂಥಹ ರಾಷ್ಟ್ರಗಳು ಇಡೀ ದೇಶದ ವಿಸರ್ಜನೆಯನ್ನು ಲೆಕ್ಕಕ್ಕೆ ತೆಗೆದುಕೊಳ್ಳುತ್ತವೆಯೇ ಹೊರತು ತಲಾ ವಿಸರ್ಜನೆಯನ್ನು ಪರಿಗಣಿಸಲು ಹಿಂಜರಿಯುತ್ತವೆ.

ಮುಂದೇನು?

ಬರುವ ಡಿಸೆಂಬರ್ 3ರಂದು ಇಂಡೋನೇಷ್ಯಾದಲ್ಲಿ 180 ರಾಷ್ಟ್ರಗಳು ಕೂಡಿದ ವಿಶ್ವಸಂಸ್ಥೆಯ ಹವಾಮಾನ ಬದಲಾವಣೆ ಸಮ್ಮೇಳನ ನಡೆಯುತ್ತದೆ. 2012ರ ವೇಳೆಗೆ ಕ್ಯೋಟೋ ಒಪ್ಪಂದವು ಮುಗಿಯುವುದಿದ್ದು, ಅದರ ನಂತರದಲ್ಲಿ ರೂಪಿಸಬೇಕಾದ ಕ್ರಮಗಳನ್ನು ಕುರಿತಂತೆ ಈ ಸಮ್ಮೇಳನದಲ್ಲಿ ಚರ್ಚಿಸಲಾಗುತ್ತದೆ. ಅದರಲ್ಲಿ ಚೀನಾ, ಭಾರತ, ಬ್ರೆಜಿಲ್, ಮೆಕ್ಸಿಕೋ ಮತ್ತು ದಕ್ಷಿಣ ಆಫ್ರಿಕಾ ಮುಂತಾದ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಿಗೂ ಕೂಡ ಅನಿಲ ವಿಸರ್ಜನೆ ಕಡಿತದಲ್ಲಿ ಗುರಿ ನೀಡುವ ಸಾಧ್ಯತೆಯಿದೆ. ಭಾರತ ಸಹ ಇಂಥಹ ವಿಷಯಗಳ ಕುರಿತು ಅಧ್ಯಯನ ನಡೆಸಲು ಉನ್ನತ ಮಟ್ಟದ ಸಮಿತಿಯನ್ನು ರಚಿಸಿದೆ.

○

ಜಾರ್ಜ್ ಬುಷ್‌ನ ಅಡ್ಡದಾರಿಗಳು

ಇಂಗಾಲ ಮತ್ತು ಇತರೆ ಹಸಿರುಮನೆ ಅನಿಲಗಳ ವಿಸರ್ಜನೆಗೆ ಕಡಿವಾಣ ಹಾಕಲು ತಾನು ಕ್ರಮ ಕೈಗೊಳ್ಳುವುದಾಗಿ 2000ನೇ ಇಸವಿಯ ಅಮೇರಿಕಾದ ಅಧ್ಯಕ್ಷೀಯ ಚುನಾವಣಾ ಪ್ರಚಾರದಲ್ಲಿ ಜಾರ್ಜ್‌ಬುಷ್ ಘೋಷಿಸಿದ್ದರು. ಆದರೆ 2001ರಲ್ಲಿ ಅಧಿಕಾರಾರೂಢರಾದ ಮೇಲೆ ಕ್ಯೋಟೋ ಒಪ್ಪಂದದಿಂದ ಹಿಂದೆ ಸರಿದರು. "ಕ್ಯೋಟೋ ಒಪ್ಪಂದವು ತುಂಬಾ ವೆಚ್ಚದಿಂದ ಕೂಡಿದ, ಅವಾಸ್ತವಿಕವಾದ ಮತ್ತು ಸದಾ ಕಟ್ಟುನಿಟ್ಟಿನಿಂದ ಪಾಲಿಸಬೇಕಾದ ಒಪ್ಪಂದ" ಎಂಬುದು ಅವರು ನೀಡಿದ ಕಾರಣ. ಬುಷ್ ಅವರ ಈ ಹೇಳಿಕೆಯು ಬಹುರಾಷ್ಟ್ರೀಯ ಕಂಪನಿಯೊಂದು ತನ್ನ ಮೇಲೆ ಸರ್ಕಾರ ವಿಧಿಸುವ ಕಟ್ಟಳೆ ಕುರಿತಂತೆ ನೀಡುವ ಹೇಳಿಕೆಯಂತಿದೆಯಷ್ಟೆ.



ಮಹತ್ವದ ಕ್ಯೋಟೋ ಒಪ್ಪಂದಕ್ಕೆ ಸಹಿ ಹಾಕದ ಜಾರ್ಜ್‌ಬುಷ್‌ರನ್ನು ಯೂರೋಪ್ ರಾಷ್ಟ್ರಗಳಾದಿಯಾಗಿ ವಿಶ್ವದೆಲ್ಲೆಡೆ ಟೀಕಿಸಲಾರಂಭಿಸಿದಾಗ, ತಾನು ಕ್ಯೋಟೋ ಒಪ್ಪಂದಕ್ಕೆ ಪರ್ಯಾಯವಾಗಿ ಹೆಚ್ಚು ವಾಸ್ತವವಾದ (ಅಂದರೆ ಕಡಿಮೆ ವೆಚ್ಚದ!) ಕ್ರಮಗಳನ್ನು ಕೈಗೊಳ್ಳುವುದಾಗಿ ತಿಳಿಸಿದರು. ಕ್ಯೋಟೋ ಒಪ್ಪಂದದಡಿಯಲ್ಲಿ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳನ್ನು ತಂದಿಲ್ಲವೆಂಬುದು ಅಮೇರಿಕಾದ ಅಳಲು. ಇಂಥಹ ಅಡ್ಡಹಾದಿಗಳಿಂದ ಎಲ್ಲ ಜಾಗತಿಕ ಜನಪರ ಒಪ್ಪಂದಗಳಿಗೆ ಎಳ್ಳುನೀರು ಬಿಡಲು ಅಮೇರಿಕಾ ಯತ್ನಿಸುತ್ತಲಿದೆ.

ಹೇಗಿರಲಿ ನಾನು?



ಕಲ್ಲು ಕರಗಿಸಿ
ಅವ್ವ
ಮೂಡಿಸಿದ
ರಂಗವಲ್ಲಿ,
ಹರಿದ ಸೀರೆಯ
ನೋಡಿ
ನಗುವಾಗ.....

ಹೇಗಿರಲಿ
ನಾನು ಪ್ರತಿಭಟಿಸದೆ?

ರಂಟೆ ಕುಂಟೆಯ
ಹೊಡೆದು
ಬೆವರು ಬಸಿದು
ಅಪ್ಪನರಳಿಸಿದ
ಮಣ್ಣಿನಲ್ಲಿ
ಬೆಳೆದ ದವಸ ಧಾನ್ಯಗಳು
ಮಾರ್ಕೆಟ್ಟಿನಲ್ಲಿ
ಕುಳಿತು
ಅಪ್ಪನ ಹರಿದ ಪಂಚೆಯನ್ನು
ಅಣಕಿಸುವಾಗ
ಹೇಗಿರಲಿ
ನಾನು
ಪ್ರತಿಭಟಿಸದೆ.,..?
ನಾನಿನ್ನೂ
ಉಸಿರಾಡುತ್ತಿರುವಾಗ...?

ಬಿ. ಶ್ರೀನಿವಾಸ, ಹಾವೇರಿ



■ ಕೆ.ನೀಲಾ

ಪಿಸುಮಾತು ಬಹುದೂರ ಕೇಳುತ್ತ

- ಚೀನಿ ಗಾದೆ



'ನಿಮ್ಮೊವ್ವಗ ಮುಪ್ಪ ಆದ ಮ್ಯಾಲ ನೋಡ್ಕೊಮಾವ್ರು ಯಾರು? ನೀನು, ನಿನ್ನ ಇಬ್ರೂ ತಂಗಿದೇರು ಹಿಂಗ ಮದುವ್ಯಾಗಿ ಗಂಡನ ಮನಿಗೆ ಹೋದ್ರ ನಿಮ್ಮೊವ್ವ ಹಾದಿ ಹೆಣ ಆಗಬೇಕಾಗ್ತದ. ಅದಕ್ಕೆ ನಿಂಗೊಬ್ಬಾಕಿಗೆ ದೇವದಾಸಿ ಮಾಡ್ತಾದ. ತಿಳೀತಿಲ್ಲ...' ಅಂದಳು ಮುದುಕಿ

ಕನಸುಗಳ ಕೊಂದವರು

ಹೌದು, ನಾನು ಅವಳ ಕತೆ ಕೇಳುತ ಕೇಳುತ ಪಾತಾಳಕ್ಕಿಳಿದು ಹೋಗಿದ್ದೆ. ಶ್ರಾವ್ಯಶಕ್ತಿ ಮತ್ತು ಹೃದಯದ ಬಾಗಿಲು ಮಾತ್ರ ತೆರೆದಿದ್ದವು. ಪಾತಾಳದಾಳದ ಜಲರಾಶಿಯೆಲ್ಲ ಅವಳಂಥವರ ನನ್ನಂಥವರ ಕಣ್ಣೀರ ಹನಿಗಳೇ...? ತಿಳುವಳಿಕೆ ಬರುವ ಮುನ್ನವೇ ಕ್ರೌರ್ಯ ಲೋಕದ ಕೊಂಡಿಗಳು ಅವಳ ಇಡೀ ಬದುಕನ್ನೇ ಆವರಿಸಿದ್ದವು. ಬಿಡಿಸಿಕೊಳ್ಳಬೇಕೆಂಬ ಸ್ವಾಭಿಮಾನದ ಬಯಕೆಯು ಮನೆಯೊಳಗೂ, ಹೊರಗೂ ತಿರಸ್ಕರಿಸಲ್ಪಟ್ಟಿತ್ತು. ವಿಮೋಚನೆ ಪಡೆವ ಉತ್ಕಟ ಬಯಕೆ ಸಾಕಾರಗೊಳ್ಳದೆ ಹೋದದ್ದು ಅವಳ ಬದುಕಿನ ಚಕ್ರಕ್ಕೆ ಇನ್ನೊಂದು ತಡೆಯೂ ಆಗಿತ್ತು. ಬೆಂಕಿಯಿಂದ ಬಾಣಲೆಗೋ, ಬಾಣಲೆಯಿಂದ ಬೆಂಕಿಗೋ ಅಂತೂ ಅವಳ ಜೀವನವು ಪೆಟ್ಟಿನ ಮೇಲೆ ಪೆಟ್ಟು ಬಿದ್ದು ಬರೀ ಗಾಯದ ಗಾಥೆಯೇ ಆಗಿತ್ತು. ಈಗ ಏನಾದರೂ ಪಡೆದೇ ತೀರುವ ಹಠ ಬಿಟ್ಟು, ಸುಮ್ಮನೇ ತನ್ನ ಪಾಡಿಗೆ ತಾನು ಸರಿಯುವ ಸಮಯದೊಂದಿಗೆ ಹೆಜ್ಜೆ ಹಾಕಲು ತೀರ್ಮಾನಿಸಿದಂತೆ ಇದ್ದಳು. ಕೆಲಸ ಮಾಡುವುದು, ಒಂದಿಷ್ಟು ಸಂಪಾದನೆ ಮಾಡಿ ಹೊಟ್ಟೆ ತುಂಬಿಸಿಕೊಳ್ಳುವುದು, ಹಸಿವಾದದ್ದಕ್ಕೆ ಉಂಡು, ಆಯಾಸದಿಂದ ನಿದ್ದೆ ಬಂದು, ಮರುದಿನಕ್ಕೆ ಮತ್ತದೇ ದಿನಚರಿಯಲ್ಲಿ ತೊಡಗಿ ದಿನಗಳನ್ನು ತಳ್ಳುವ ಮಲ್ಲಮ್ಮ ನನ್ನೆದಿರು ಕುಂತಿದ್ದಳು...

ಕಣ್ಣು ಬಿಡುವಾಗ

...ಅಂದು ಮುಂಜಾನೆಯ ಹೊತ್ತು. ಆಕೆಗಾಗ ಬರೇ ಐದು ವರ್ಷ. ಹಿಂದಿನ ದಿನ ಅಕ್ಕಪಕ್ಕದ ತನ್ನಷ್ಟೇ ವಯಸ್ಸಿನ ಮಕ್ಕಳೊಂದಿಗೆ ಮಣ್ಣೆನಾಟ, ಹೆಂಡಿಯಾಟ ಆಡಿ ಮೈಯೆಲ್ಲ ಹೊಲಸಾಗಿ, ಹೈರಾಣಾಗಿ ಊಟ ಮಾಡದೆ ಗುಡಿಸಿಲ ಮೂಲೆಯ ಕೌದಿಯಲ್ಲಿ ಮುದುಡಿ ಮಲಗಿದ್ದಳು. ಕಣ್ಣು ಬಿಡುವಾಗ ಮನೆಯೆಲ್ಲ ಕಲಕಲ. ಸಾರಿಸಿದ ನೆಲ. ಬಾಗಿಲಿಗೆ ಮಾವಿನೆಲೆ ತೋರಣ. ಮನೆ ಮುಂದೆ ಹೊಸ ಕುರಿಮರಿ ಮ್ಯಾ ಅನ್ನುತ್ತಿದೆ. ಅಕ್ಷರಶಃ ಮದುವೆ ಮನೆಯಂತೆ. ಅದು ಮದುವೆಯೇ ಆಗಿತ್ತು. ಮುತ್ತು ಕಟ್ಟುವುದು. ದೇವರೊಂದಿಗೆ ಮಲ್ಲಮ್ಮನ ಮದುವೆ. ದೇವರಿಗೆ ದಾಸಿಯಾಗಿಸುವುದು. ದೇವದಾಸಿಯಾಗಿಸುವುದು.

ಮಲಗಿದ ಎಳೆಕೂಸು ಮಲ್ಲಮ್ಮನನ್ನು ಎಬ್ಬಿಸಿ, ಮೈ ತೊಳೆದು, ನೆರೆದ ಬಂಧು ಬಳಗ, ಹೊಸಕುರಿಮರಿ, ಎಲ್ಲ ಜೊತೆ ಸೇರಿ ಹೋಗಿದ್ದು ಯಲ್ಲಮ್ಮನ ಗುಡಿಗೆ. ಪೂಜಾರಿ ಬಂದ. ಮದುವೆ ತೆರನ ವಿಧಿ ವಿಧಾನಗಳು ನಡೆದವು. ಯಲ್ಲಮ್ಮನ ಗುಡಿಗೆ ಹುಟ್ಟುಡುಗೆಯ ಮಲ್ಲಮ್ಮನನ್ನು ಸುತ್ತು ಹಾಕಿಸಿದರು. ಪತ್ತಲು ನೂಲುಡುಸಿ ತಾಳಿ ಕಟ್ಟಲಾಯ್ತು. ಊರ ಯಜಮಾನನೊಬ್ಬ ಬಂದು ಉಡಿ ತುಂಬಿದ. ಎಳೆ ಕೂಸಾದ್ದರಿಂದ ಉಡಿಮಾತ್ರ ತುಂಬಲಾಯ್ತು. ಅಲ್ಲಿಂದ ಮುಂದೆ ಮಲ್ಲಮ್ಮನ ಕುತ್ತಿಗೆಯಲ್ಲಿ ಕರಿಮಣಿಯೊಂದು ನೇತಾಡತೊಡಗಿತು.

ಮುಜುಗರ... ತಳಮಳ

ದಿನಗಳು ಯಾರಿಗಾಗಿಯೂ ಕಾಯುವುದಿಲ್ಲ. ಮಲ್ಲಮ್ಮ ಮಲ್ಲಿಗೆಯಂತೆ ಅರಳಿ ಪ್ರಾಯಕ್ಕೆ ಬಂದಳು. ಹತ್ತನೆಯ ಕ್ಲಾಸು ಪಾಸಾಗಿ ಪಕ್ಕದ ಪಟ್ಟಣಕ್ಕೆ ಕಾಲೇಜೂ ಸೇರಿದಳು. ಹಾಜರಿಯಲ್ಲಿ ತನ್ನ ಹೆಸರೊಂದಿಗೆ ಅವ್ವನ ಹೆಸರಿರುವುದರಿಂದ, ಕ್ಲಾಸಿನಲ್ಲಿ ಹೆಸರು ಕರೆದಾಗೊಮ್ಮೆ ಕ್ಲಾಸಿಗೆ ಕ್ಲಾಸೇ ಇವಳನ್ನು ದಿಟ್ಟಿಸುತಿತ್ತು. ಪ್ರೈಮರಿಯಲ್ಲಿದ್ದಾಗ ಯಾವುದೂ ತಲೆಗೆ ಬರುತ್ತಿರಲಿಲ್ಲ. ಆದರೆ ತಿಳುವಳಿಕೆಯು ಅಂಬೆಗಾಲಿಡುತ ಬರುತ್ತಿದ್ದಂತೆ ಎಲ್ಲೋ ಮುಜುಗರ, ತಳಮಳ ಕಾಡತೊಡಗಿತು. ಕುತ್ತಿಗೆಯ ತಾಳಿಯನು ಅದೊಂದು ದಿನ ಮನೆಯ ಗೂಟಕೆ ನೇತು ಹಾಕಿದಳು. ಆಗೀಗ ಬಂದು ಹೋಗುವ ಪರ ಪುರುಷರ ಬಗ್ಗೆ ವಿಚಿತ್ರ ಸಿಟ್ಟು ಬರತೊಡಗಿತು. ಮಗಳೊಳಗಿನ ಈ ಬದಲಾವಣೆ ಗಮನಿಸಿದ ಮಲ್ಲಮ್ಮನ ತಾಯಿ, ಮುತ್ತು ಕಟ್ಟುವಾಗ ಉಡಿ ತುಂಬಿದ ಯಜಮಾನನೊಂದಿಗೆ ಮಾತಾಡಿ, ಮಗಳು ಆತನೊಂದಿಗೆ ಹೆಂಡಿಯಂತಿರಲು ಹೇಳಿದಳು. ಆಗ ತಾನೆ ಕಾಲೇಜು ಮೆಟ್ಟಿಲು ಹತ್ತಿದ್ದ ಮಲ್ಲಮ್ಮನಿಗೆ ಮುದಿ ಯಜಮಾನನ ಪ್ರಸ್ತಾಪ ಬಂದಿದ್ದೇ ತಾಯಿಯೊಂದಿಗೆ ಜಗಳಕ್ಕೆ ನಿಂತಳು. ಆತನೊಂದಿಗೆ ತನಗೇನು ಮದುವೆಯಾಗಿಲ್ಲ ಎಂದು ವಾದಿಸತೊಡಗಿದಳು. ಕೂದಲೆಳೆಗೊಂಡರಂತೆ ಪ್ರಶ್ನೆ ಕೇಳಿ ಕಕ್ಕಾಬಿಕ್ಕಿಯಾಗಿಸಿದ ಮಗಳನ್ನು ತನ್ನ ದಾರಿಗೆ ತರುವುದು ಹೇಗೆಂದು ತೋಚದೆ ತಾಯಿಯು ಗೋಡೆಗೆ ತಲೆಗಟ್ಟಿಸಿಕೊಂಡು ಹೋ... ಎಂದಳು ತೊಡಗಿದಳು. ಅಲ್ಲೇ ಬೀಸಾಕಲ್ಲಿನ ಪಕ್ಕ ಮೂಲೆಯಲ್ಲಿ ಕೂತ ಅಜ್ಜಿಯು ಕುಸಕ್ ಕುಸುಕ್ಕೆಂದು ಅಳತೊಡಗಿತು.

ಹರ್‍ಯಾ ನೀರಿಗೆ ಬೆಂಕಿ ಹಚ್ಚಾಳ

'ನಿಮ್ಮೊವ್ವನ ಕೈ ತೊಗಲು ಕೆಟ್ಟ ಹೋಗಿತ್ತು. ಏಟ್ ಮದ್ದ ಮಾಡದರ್ರೂ ಕೂಸಿನ ಕೈ ನೆಟ್ಟಗಾಗಲಿಲ್ಲ. ಕೈ ಬ್ಯಾನಿ ಬರ್‍ತಾ ಬರ್‍ತಾ ಮೈ ತುಂಬ ಹಬ್ಬಲಾತು. ಊರ ಯಲ್ಲಮ್ಮಗ ಮಗಳಿಗೆ ಕುಷ್ಠ್ರೀನಿ ಅಂತ ಹರಕಿ ಹೊತ್ತ ಮ್ಯಾಲ ಮಗಳು ಚೆಂದಾ ಉಳದಾಳ. ದೇವದಾಸಿ ಆಗಾದು ಅಂದ್ರ ಕೆಟ್ಟದಲ್ಲ. ಆ ದೇವಿಗೆ ಯಾನ ಇಚ್ಛಾ ಅದಾನೋ ಅದೇ ದೊಡ್ಡದು. ನೀ ಈಗ ದೇವದಾಸಿ ಇದ್ದಿ. ಅಂದ್ರ ದೇವ್ರ ಹೆಣ ಮಗಳು. ತಿಳೀತಿಲ್ಲ? ಹಿಂಗೆಲ್ಲ ಒಲ್ಲ ಒಸಕ ಅಂದ್ರ ಆ ದೇವಿಗಿ ಸಿಟ್ಟು ಬರ್‍ತದ. ಬೆಂಕಿಯಂಥಾ ತಾಯಿ, ಹರ್‍ಯಾ ನೀರಿಗೆ ಬೆಂಕಿ ಹಚ್ಚಾಳ. ಮೀಸಿ ಹೊತ್ತವ್ನಿಗಿ ಹೆಣ್ಣ ಮಾಡಿ ಸೀರಿ ಉಡಸ್ತಾಳ...' ಪಿಚ್ಚಗಣ್ಣ ಒರೆಸಿಕೊಳ್ಳುತ, ಬರಲಾರದ ದನಿಯನ್ನು ಒಡಲಾಳದಿಂದ ಹೊರತಳ್ಳುತ ಮುದುಕಿ ಹೇಳುತ್ತಲೇ ಇತ್ತು.

ಮಲ್ಲಮ್ಮ ಹಠ ಹಿಡಿದ ಮಗುವಿನಂತೆ ಜಿದ್ದಾಜಿದ್ದಿಗೆ ನಿಂತೇ ಇದ್ದಳು. 'ನಿನ್ ಮಗಳಿಗೆ ಚರ್ಮದ ಬ್ಯಾನಿ ಬಂದಿದ್ದಕ್ಕ ದೇವದಾಸಿ ಮಾಡಿರಬೇಕು. ನಂಗೇನ ಆಗಿತ್ತು? ನಂಗ ತಿಳ್ಳಾಕಿನಾ ಮೊದಲೇ ಯಾಕ ದೇವ್ರಿಗೆ ಬಿಟ್ಟೀರಿ? ನಂಗ ಹೇಳಿ ಕೇಳಿ ಬಿಟ್ಟಿರೇನು?... ನಾ ಸಾಲಿ ಕಲೀತಿನಿ. ನಂಗ ನಿನ ದೇವಿನೂ ಬ್ಯಾಡ. ಆ ಮುದುಕನೂ ಬ್ಯಾಡ...' ಅಂತ ಜೋರು ಜೋರಾಗಿ ವಾದಕ್ಕಿಳಿದಳು.

ಬೀದಿಗೆ ಬೀಳಬಾರದೆಂದು....

'ಆಯ್ತು ನೀ ಸಾಲಿ ಕಲಿ. ಬ್ಯಾಡಂತ ಯಾರಂದಾರ? ನಿಮ್ಮೊವ್ವಗ ಮುಪ್ಪ ಆದ ಮ್ಯಾಲ ನೋಡ್ಕೊಮಾವ್ರು ಯಾರು? ನೀನು, ನಿನ್ನ ಇಬ್ರೂ ತಂಗಿದೇರು ಹಿಂಗ ಮದುವ್ಯಾಗಿ ಗಂಡನ ಮನಿಗೆ ಹೋದ್ರ ನಿಮ್ಮೊವ್ವ ಹಾದಿ ಹೆಣ ಆಗಬೇಕಾಗ್ತದ. ಅದಕ್ಕೆ ನಿಂಗೊಬ್ಬಾಕಿಗೆ ದೇವದಾಸಿ ಮಾಡ್ತಾದ. ತಿಳೀತಿಲ್ಲ...' ಮಗಳು ಬೀದಿಗೆ ಬೀಳಬಾರದೆಂದು, ಮೊಮ್ಮಗಳೊಬ್ಬಳನ್ನು ಮನೆಯಲ್ಲಿಯೇ ಉಳಿಸಿ ಕೊಳ್ಳಲು ಹುಡುಕಿದ ಹಾದಿ ದೇವದಾಸಿ ಯಾಗಿಸುವುದು. ಆ ಮುದುಕಿ ತುಂಬ ಸಹಜವೆಂಬಂತೆ ಹೇಳುತ್ತಿತ್ತು. ಊರಲ್ಲಿ ಗುಡಿಸಲು ಬಿಟ್ಟರೆ ಅಂಗೈಯಗಲ ಜಾಗ ಇಲ್ಲದ, ಅಡವಿಯಲ್ಲಿ ಮೊಳದಷ್ಟು ಭೂಮಿಯಿರದ ಈ ಮನೆತನ ತಲೆ ತಲಾಂತರದಿಂದ ಕೂಲಿ ಮಾಡಿ, ಇಲ್ಲವೆ ಶ್ರೀಮಂತರ ಮನೆಯಲ್ಲಿನ ಕೊಟ್ಟಿಗೆಯ ದನಗಳ ಹೆಂಡಿ ತೆಗೆದು ಪ್ರತಿಯಾಗಿ ದಿನಕ್ಕೊಂದು ರೊಟ್ಟಿ ಮೇಲಿಷ್ಟು ಖಾರ ಪಡೆದು ಜೀವಿಸುತ್ತಿತ್ತು. ವರ್ಷಕ್ಕೊಮ್ಮೆ ಒಂದು ಜೊತೆ ಬಟ್ಟೆ ಖರೀದಿಸಲೂ ಕೈಯಲ್ಲಿ ನಗದು ಹಣ ಇರುತ್ತಿರಲಿಲ್ಲ.

ಬಾಕಿ ಚುಕ್ತಾ!

ಎಷ್ಟೋ ವರ್ಷಗಳ ಹಿಂದಿನ ಕತೆಯಿದು. ಈ ಮನೆಯ ಹಿರಿಯನೊಬ್ಬ ಬಟ್ಟೆಯಂಗಡಿಯಲ್ಲಿ ಮನೆಗೆ ಬೇಕಾದ ಸೀರೆ, ಧೋತ್ರ , ಇತ್ಯಾದಿಗಳನ್ನು ಉದರಿ ತಂದು ವರ್ಷಾನುಗಟ್ಟಲೇ ಸಾಲ ತೀರಿಸಲೇ ಇಲ್ಲ. ಅದೇ ಸಮಯದಲ್ಲಿ ಆತನ ಹರೆಯದ ಮಗಳಿಗೆ ಮೈ ಮೇಲೆ ದೆವ್ವ ಬಂದಿದ್ದರಿಂದ, ಬಟ್ಟೆ ಅಂಗಡಿಯ ಮಾಲೀಕ ಪೂಜಾರಿಯನ್ನು ಕರೆದು ಹೇಳಿಕೆ ಕೇಳಿಸಿ 'ನಿನ್ ಮಗಳಿಗೆ ದೇವ್ರಿಗೆ ಬಿಡು. ಅಂದ್ರೆ ದೆವ್ವ ಬಿಡ್ತಾದ' ಅಂತ ಹೇಳಿದ ಮೇಲೆ ಸಾಕ್ಷಾತ್ ದೇವರಂಥ ಪೂಜಾರಿಯ ಮಾತನ್ನು ಶಿರಸಾವಹಿಸಿ ಆ ಹಿರಿಯ ಜಾರಿ ಮಾಡಿಯೇ ಬಿಟ್ಟ. ಉಡಿ ತುಂಬಿದ್ದು ಬಟ್ಟೆ ಅಂಗಡಿಯ ಮಾಲಿಕ! ಮನೆಯ ಹಿರಿಯನಿಗೆ ಬಾಕಿ ಚುಕ್ತಾ ಮಾಡುವ ಪ್ರಮೇಯ ಬರಲೇ ಇಲ್ಲ!

ಈ ಕೂಲಿಕಾರ ದಲಿತ ಕುಟುಂಬದಲ್ಲಿನಂತೆ ಅನೇಕ ಕುಟುಂಬಗಳಲ್ಲಿ ಒಬ್ಬೊಬ್ಬ ದೇವದಾಸಿ ಬಿಡುವ ಪದ್ಧತಿ ಅನೂಚಾನವಾಗಿ ನಡೆಸಿಕೊಂಡು ಬಂದಿರುವುದಿದೆ. ಮಲ್ಲಮ್ಮನ ತಾಯಿ, ಆಯಿ ಮತ್ತಿತರ ಹಿರಿಯರೆಲ್ಲ ದೇವರ ಹೆಸರಲ್ಲಿ ಸೇವೆ ಸಲ್ಲಿಸುವುದೆಂದರೆ ತಪ್ಪೇ ಅಲ್ಲ. ಬದಲಿಗೆ ದೇವರಿಗೆ ಸಲ್ಲಿಸುವ ಭಕ್ತಿ ಎಂಬುದನ್ನು ಎಷ್ಟು ಮುಗ್ಧವಾಗಿ ವ್ಯಕ್ತಿಸುವರೆಂದರೆ ಗಾಬರಿಗೊಳ್ಳುವ ಸ್ಥಿತಿ ನಮ್ಮದೇ... ಮಲ್ಲಮ್ಮ ಅಂದು ಜಗಳ ಕಾದು ಕಾಲೇಜು ಮೆಟ್ಟಿಲು ಹತ್ತಿದಳು. ಆದರೆ ಮನೆ ಯಲ್ಲಿ ಪ್ರತಿ ದಿನಾ ಕಿರಿಕಿರಿ. ಮನೆಯ ಖರ್ಚಿಗೆ ನೆರವಾಗುತ್ತಿಲ್ಲವೆಂಬ ಸಿಟ್ಟು. ತಾಯಿಗೆ ಹೇಳಿದಂತೆ ಕೇಳಿದರೆ ಎಲ್ಲವೂ ಸುಗಮವೆಂಬ ಲೆಕ್ಕಾಚಾರ. ಆದರೆ ತಾಯಿಯ ಬದುಕಿನ ಯಾವ ರೀತಿ ರಿವಾಜುಗಳು, ಸಂಬಂಧಗಳು ಮಗಳು ಮಲ್ಲಮ್ಮಳಿಗೆ ಒಪ್ಪಲೇ ಆಗುತ್ತಿಲ್ಲ. ಪ್ರತಿ ದಿನವೂ ಕೈಯಿಂದ ದೂಡಿದಂತೆ...

ಆದರೆ ಅದೊಂದು ದಿನ ಚಿಗುರೆಗಂಗಳ ಆದರ್ಶದ ಮಾತಿನ, ತುಂಬುಹರೆಯದ ಯುವಕನೊಬ್ಬ ಮಲ್ಲಮ್ಮಳ ಪರಿಚಯಕ್ಕೆ ಬಂದ. ಕೆಲವು ತಿಂಗಳುಗಳ ನಂತರ ಸ್ನೇಹ ಪ್ರೀತಿಯಾಗಿ ಮದುವೆಯಾಗುವುದಾಗಿ ವಚನವಿತ್ತ. ಮನೆಯಲ್ಲಿ ಜಗಳವಾಡಿ ಕಾಡಿಬೇಡಿ, ಕಡೆಗೂ ಫಲಿಸದ ಮಲ್ಲಮ್ಮ ಮನೆ ಬಿಟ್ಟು ಬಂದು ಪ್ರಗತಿಪರನೆಂದು ಹೇಳಿಕೊಂಡ ಯುವಕನಿಗೆ ಮದುವೆಯಾಗಿ 'ದೇವದಾಸಿ' ಬಂಧದಿಂದ ಬಿಡುಗಡೆಗೊಂಡೆನೆಂದು ನೆಮ್ಮದಿಯಿಂದ ಇತರ ಹೆಂಗಸರಂತೆ ತಾನು ಸಂಸಾರ ಗಂಡ ಮಕ್ಕಳ ಮನೆಯ ಗೃಹಣಿಯಾಗಿ ಬದುಕುವ ಕನಸು ಹೊತ್ತು ಒಂದು ಪುಟ್ಟ ಖೋಲಿಗೆ ಕಾಲಿಟ್ಟಳು. ದೇವದಾಸಿಗೆ ಮದುವೆಯಾಗಿದ್ದಕ್ಕೆ ಆ ಹುಡುಗನಿಗೆ ಸರ್ಕಾರದಿಂದ ಹಣವೂ ಸಿಕ್ಕಿತು. ಆದರೆ ಮೂರು ತಿಂಗಳ ನಂತರದ ಅದೊಂದು ಬೆಳಗಿನಲ್ಲಿ ಹುಡುಗ 'ಮಲ್ಲಮ್ಮ'ಳನ್ನು ಆ ಖೋಲಿಯಲ್ಲಿ ಒಂಟಿಯಾಗಿಸಿ ನಾಪತ್ತೆಯಾದ... ಮಲ್ಲಮ್ಮ ತಲ್ಲಣಿಸಿ ಹೋದಳು.

.... ಮಲ್ಲಮಳಂಥವರ ಕನಸು ಕೊಂದವರು ಈ ಜಮೀನ್ದಾರಿ ಸಮಾಜದಲ್ಲಿ ಸಾಚಾತನದ ಮುಖವಾಡ ಹೊತ್ತು ಮೆರೆಯುತ್ತಿರುವರು. ಅವರನ್ನು ಗುರುತಿಸಲೇಬೇಕಲ್ಲ...? ಮಲ್ಲಮ್ಮಳ ಉಳಿದ ಬದುಕಿಗೆ ಬೆಳಕು ತರಲೇಬೇಕಲ್ಲ...? ಹಾಗಾದರೆ ಮಲ್ಲಮಗೆ ಹೋರಾಟ ಬಿಟ್ಟರೆ ಬೇರೆ ದಾರಿ ಯಾವುದಿದೆ ಹೇಳಿ?

ಗಣಿಗೆ ಧಣಿ ಯಾರು...

ಪುಟ 7 ರಿಂದ

ಅವರ ತಂತ್ರಗಳು, ಕಾಂಗ್ರೆಸ್‌ನ ದೌರ್ಬಲ್ಯ ಅನಿರೀಕ್ಷಿತ ಫಲ ನೀಡಿದೆ. ಎಲ್ಲಾ ಅಭ್ಯರ್ಥಿಗಳು ತಮ್ಮ ಸ್ವಂತಕ್ಕೆ 5 ಲಕ್ಷದಷ್ಟು ಖರ್ಚು ಮಾಡಿದರೆ ಸಾಕು ಉಳಿದೆಲ್ಲಾ ಪಕ್ಷ ನೋಡಿಕೊಂಡಿದ್ದೇ ತಮ್ಮ ಗೆಲುವಿನ ತಳಹದಿ ಎಂದು ಹಲವು ಅಭ್ಯರ್ಥಿಗಳು ತಮ್ಮ ಅಭಿಪ್ರಾಯ ಹಂಚಿಕೊಂಡಿದ್ದಾರೆ. ಮಾಜಿ ಸಚಿವ ಶ್ರೀರಾಮುಲು ಅವರ ಭಾವ ಚಿತ್ರವಿರುವ ಸೀರೆಗಳನ್ನು ಮಹಿಳಾ ಮತದಾರರಿಗೆ ನೀಡಿ ಮತ ಪಡೆಯಲು ಬಳ್ಳಾರಿಯ ಜನಾರ್ಧನ ರೆಡ್ಡಿಯವರ ಬಂಧುಗಳ ಮನೆಯಲ್ಲಿ ಕೂಡಿಹಾಕಲಾಗಿದೆಯೆಂದು, ಅದನ್ನು ಹಿಡಿದು ಕ್ರಮವಹಿಸಲು ಜೆಡಿ(ಎಸ್) ಯತ್ನಿಸಿದ್ದರಿಂದಲೇ ಶ್ರೀರಾಮುಲುರವರ ಮೇಲೆ ಗುಂಡು ಹಾರಿಸಲಾಯಿತೆಂಬ ಹಾಗೂ ಅದರಲ್ಲಿ ಕುಮಾರಸ್ವಾಮಿ ಸಂಚಿದೆಯೆಂಬ ಆರೋಪ ಕೇಳಿಬಂತು. ಅನಂತರ ಆ ಸೀರೆಗಳನ್ನು ಜನಾರ್ಧನ ರೆಡ್ಡಿಯವರ ತಂದೆಯವರ ಜನ್ಮ ದಿನದ ಅಂಗವಾಗಿ ಕಾರ್ಮಿಕರಿಗೆ ಹಂಚಲು ತಂದಿದ್ದೆಂದು ವಿವರಿಸಿದರೆನ್ನಿ. ಏನೇ ಆಗಲಿ ಸದ್ಯಕ್ಕಂತೂ ಮತ್ತೊಮ್ಮೆ ಬಳ್ಳಾರಿ ಜನತೆ ಜನಾರ್ಧನ ರೆಡ್ಡಿಯವರಿಗೆ ಬಿಜೆಪಿ ಬೆಂಬಲಿಸಿದ್ದಾರೆ.

ಜನಾರ್ಧನ ರೆಡ್ಡಿಯವರು ಭ್ರಷ್ಟಾಚಾರದ ವಿರುದ್ಧ ಜನ ಕಾಳಜಿಯಿಂದ ನಿಜಕಾಳಜಿಯಿಂದ ಮಾತನಾಡುತ್ತಿರುವೆ ನೆಂದು ಹೇಳಿದಾಗಲೂ, ವಿರೋಧಿ ವಲಯಗಳಲ್ಲಿ ಅವರು ಸ್ವಾರ್ಥದಿಂದ ಸರ್ಕಾರದ ಮೇಲೆ ಪ್ರಭಾವ ಬೀರುವ ಉದ್ದೇಶ ಈಡೇರಲಿಲ್ಲವೆಂಬ ಕಾರಣದಿಂದ ಹೀಗೆ ಹೇಳುತ್ತಿದ್ದಾರೆಂಬ ಆರೋಪವನ್ನು ಎದುರಿಸುತ್ತಿದ್ದಾರೆ. ಈ ವಿಷಯ ಬಹಿರಂಗವಾಗಿ ಬರದಿದ್ದರೂ ಒಳಗೆ ಚರ್ಚಿತಗೊಳ್ಳುತ್ತಿರುವ ವಿಚಾರವಾಗಿದೆ.

ಮುಂದೆ ಸಮ್ಮಿಶ್ರ ಸರ್ಕಾರದೊಳಗೆ ಈ ಕಾರಣಕ್ಕಾಗಿಯೇ ಬಳ್ಳಾರಿ ಜಿಲ್ಲಾ ಉಸ್ತುವಾರಿ ಯಾರದಿರಬೇಕೆಂಬ ಪ್ರಶ್ನೆ ಉದ್ಭವಿಸಿ ವಿವಾದವಾಗಿ ಕೊನೆಗೆ ಶ್ರೀರಾಮುಲುರವರನ್ನು ಗದಗ ಜಿಲ್ಲೆಗೆ ಉಸ್ತುವಾರಿ ವಹಿಸಲಾಯಿತು. ಮುಂದೆ ಯಾ... ಪರವಾದ ಐಎಎಸ್, ಐಪಿಎಸ್ ಹಾಗೂ ಐಎಫ್‌ಎಸ್ (ಅರಣ್ಯಾಧಿಕಾರಿ) ಮತ್ತು ಪೊಲೀಸ್ ಅಧಿಕಾರಿಗಳು ಇರಬೇಕೆಂಬ ವಿಚಾರ ಸಂಘರ್ಷಕ್ಕೆಡೆಕೊಟ್ಟಿತ್ತು ಎಂಬುದನ್ನು ಗಮನಿಸ ಬಹುದು. ಅನಂತ ಆಂಧ್ರದ ರಾಜಕೀಯದ ಸಂಚಲನ ಮೂಡಿಸುವಂತೆ, ಜನಾರ್ಧನ ರೆಡ್ಡಿಯವರು ಕರ್ನಾಟಕದ ಪ್ರದೇಶದಲ್ಲಿ ಅಕ್ರಮ ಗಣಿಗಾರಿಕೆ ನಡೆಸುವರೆಂದು, ಅದೇ ರೀತಿ ಆಂಧ್ರ ಪ್ರದೇಶದಲ್ಲಿ ಅದೇ ರೀತಿ ತೊಡಗಿದ್ದಾರೆಂದು ಆರೋಪಿಸಿದ್ದು ಸಂಚಲನ ಮೂಡಿಸಿದ್ದು ಜಗ... ಗೊತ್ತಿರುವ ವಿಚಾರ. ಇದು ಅದರ ಭಾಗವೇ ಆ...

'ಜಿಲ್ಲೆಯಲ್ಲಿ ಅಭಯಹಸ್ತಕ್ಕೆ ನೀಡಿದ ಕೈ, ಭಾರ ಹೆಚ್ಚಿಸಿಕೊಂಡ ಹೊರೆ ಹೊತ್ತಮಹಿಳೆ ಅರಳದೆ ಮುದುಡಿದ ಕಮಲ'

ರಾಯಚೂರು ಸ್ಥಳೀಯ ಸಂಸ್ಥೆ ಚುನಾವಣೆ

ಆಡಳಿತ ವಿರೋಧಿ ಅಲೆ ಅಪಾರ ನಿರೀಕ್ಷೆ

ಜಿಲ್ಲೆಯ ಎರಡು ನಗರಸಭೆ, ಹಾಗೂ 4 ಪುರಸಭೆಗಳಿಗೆ ಒಟ್ಟು 154 ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ 70, ಜೆಡಿ(ಎಸ್) 70, ಬಿಜೆಪಿ 10, ಪಕ್ಷೇತರ 4 ಸ್ಥಾನಗಳನ್ನು ಗೆಲ್ಲುವುದರ ಮುಖಾಂತರ ಜಾತ್ಯಾತೀತ ಶಕ್ತಿಗಳಿಗೆ ಗೆಲುವನ್ನು ತಂದುಕೊಟ್ಟು, ಕೋಮುವಾದಿ ಪಕ್ಷವಾದ ಬಿಜೆಪಿಯನ್ನು ಕಡೆಗಣಿಸಿರುವುದು, ಜಿಲ್ಲೆಯ ಜಾತ್ಯಾತೀತ ಮೌಲ್ಯಗಳಿಗೆ ಜಯ ಸಿಕ್ಕಂತಾಗಿದೆ.

ಆದರೆ, ಮತದಾರ ಯಾವುದೇ ಪಕ್ಷಕ್ಕೆ ಸ್ಪಷ್ಟ ಬಹುಮತ ನೀಡದೇ ಮಿಶ್ರ ಫಲಿತಾಂಶ ನೀಡಿದ್ದಾರೆ.

ಜಿಲ್ಲೆಯ ಆರು ನಗರ ಪುರಸಭೆಯ ಪೈಕಿ ಮಾನ್ವಿ ಮತ್ತು ಲಿಂಗಸೂಗೂರು, ಪುರಸಭೆ, ಮುದಗಲ್ ಪಟ್ಟಣ ಪಂಚಾಯ್ತಿಗಳಲ್ಲಿ ಕ್ರಮವಾಗಿ ಕಾಂಗ್ರೆಸ್, ಜೆಡಿ(ಎಸ್) ಪಕ್ಷಗಳು ಪ್ರಾಬಲ್ಯ ಮೆರೆದಿವೆ. ರಾಯಚೂರು, ಸಿಂಧನೂರು ನಗರಸಭೆ ಹಾಗೂ ದೇವದುರ್ಗ ಪುರಸಭೆಗಳಲ್ಲಿ ಅತಂತ್ರ ಸ್ಥಿತಿ ನಿರ್ಮಾಣವಾಗಿದೆ.

ನೀರು ಕುಡಿದ ಬಿಜೆಪಿ

ರಾಯಚೂರಿನಲ್ಲಿ ಬಿಜೆಪಿ ಶಾಸಕರಿದ್ದರೂ, ನಗರದ ಎಲ್ಲ ವಾರ್ಡ್‌ಗಳಲ್ಲಿ ಅಭ್ಯರ್ಥಿಗಳನ್ನು ಕಣಕ್ಕಿಳಿಸಲಾಗಲಿಲ್ಲ. 29 ಸ್ಥಾನಗಳಿಗೆ ಮಾತ್ರ ಅಭ್ಯರ್ಥಿಗಳನ್ನು ಸ್ಪರ್ಧೆಗೆ ಇಳಿಸಿದ ಬಿಜೆಪಿ ಚುನಾವಣೆಯಲ್ಲಿ ಏನೆಲ್ಲಾ ಕಸರತ್ತು ಮಾಡಿದರೂ, ಕೇವಲ 6 ಸ್ಥಾನಗಳಲ್ಲಿ ಮಾತ್ರ ಜಯ ಸಾಧಿಸುವಲ್ಲಿ ಸಫಲವಾಯಿತು. ತಮ್ಮ ಪಕ್ಷದ ಅಭ್ಯರ್ಥಿಗಳೇ ನಗರಸಭೆ ರಚನೆಯಾಗುವುದರಲ್ಲಿ ನಿರ್ಣಾಯಕ ಪಾತ್ರ ವಹಿಸಲಿದ್ದಾರೆ ಎಂದು ಶಾಸಕ ಪಾಪರೆಡ್ಡಿ ಜಂಭಕೊಚ್ಚಿ ಕೊಳ್ಳುತ್ತಿದ್ದರೂ ಕೊನೆಗಳಿಗೆಯವರೆಗೆ ಬಿಜೆಪಿಯಿಂದ ಗೆದ್ದು ಬಂದ ಸದಸ್ಯರು ಅಲ್ಲಿಯೇ ಉಳಿಯುತ್ತಾರೆಂಬ ಭರವಸೆ ಕಾಣುತ್ತಿಲ್ಲ. ಈಗಾಗಲೇ ಕೆಲ ಸದಸ್ಯರು ಕಾಂಗ್ರೆಸಿಗೆ ಬೆಂಬಲ ಸೂಚಿಸಿ ಬಿಜೆಪಿಗೆ ಕೈ ಕೊಡುತ್ತಾರೆಂಬ ದಟ್ಟ ವದಂತಿ, ರಾಯಚೂರಿನ ತೀನ್‌ಕಂದಿಲ್‌ನಿಂದ ಸುದ್ದಿ ಹಬ್ಬಿದೆ. ಆದರೆ ಈ ವಿಷಯ ರಾಜ್ಯ ರಾಜಕೀಯದಲ್ಲಿನ ಬೆಳವಣಿಗೆ ಕಡೆ ಕೇಂದ್ರಿಕರಿಸಿದ್ದ ಶಾಸಕರು, ಅಧಿಕಾರ ಹಸ್ತಾಂತರವಾಗುತ್ತದೆ. ಯಡಿಯೂರಪ್ಪ ನವರು ಮುಖ್ಯಮಂತ್ರಿಯಾಗುತ್ತಾರೆ. ಇವರ ಸಂಪುಟದಲ್ಲಿ ತಮಗೆ ಸಚಿವ ಸ್ಥಾನ ಖಚಿತವೆಂಬ ಭ್ರಮಾ ಲೋಕದಲ್ಲಿದ್ದ ಪಾಪಾರೆಡ್ಡಿಯವರು, ಅಧಿಕಾರ ಹಸ್ತಾಂತರದ ಕೊನೆಗಳಿಗೆಯಲ್ಲಿಯೂ ತಮ್ಮ ನಿವಾಸದಲ್ಲಿ ಸಂಭ್ರಮಾಚರಣೆಯಲ್ಲಿ ತೊಡಗಿದ್ದರಂತೆ ಪಾಪ! ದಿಲ್ಲಿ ಹೈಕಮಾಂಡ್‌ನಿಂದ ಹಸ್ತಾಂತರಕ್ಕೆ ಕಲ್ಲು ಬಿದ್ದ ವಿಷಯ ಗೊತ್ತಾದ ಮೇಲೆ ಶಾಸಕರ 'ಮುಖ ಕಮಲ' ಕಳೆಗುಂದಿತು. ಇಂತಹ ಅವಸರದಲ್ಲಿದ್ದ ಶಾಸಕರಿಗೆ ನಗರಸಭಾ ಸದಸ್ಯರ ಪಾಡೇನು ಗೊತ್ತಾಗಬೇಕು! ತಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ದೊಡ್ಡದಾಗಿ, ಎಲ್ಲರಿಗೆ ಶುದ್ಧ ಕುಡಿಯುವ ನೀರು, ರಸ್ತೆ ನಿರ್ಮಾಣ ಮುಂತಾದ ಅಭಿವೃದ್ಧಿ ಕಾರ್ಯಗಳಿಗೆ ಒತ್ತು ನೀಡುವುದಾಗಿ ಹೇಳಿಕೊಂಡಿದ್ದ ಬಿಜೆಪಿ ತಾನೇ ಹೀನಾಯ ಸೋಲು ಅನುಭವಿಸಿ ನೀರು ಕುಡಿಯಬೇಕಾಯಿತು!

ಜಿಲ್ಲೆಯಲ್ಲಿ ಇಬ್ಬರು ಸಂಸದರು, ಇಬ್ಬರು ಶಾಸಕರನ್ನು ಹೊಂದಿದ ಕಾಂಗ್ರೆಸ್ ಪಕ್ಷ ಜಿಲ್ಲೆಯ ಒಟ್ಟು 154 ಸ್ಥಾನಗಳಲ್ಲಿ 70 ಸ್ಥಾನಗಳನ್ನು, ಅದೇ ರೀತಿಯಾಗಿ ಜೆಡಿ(ಎಸ್) ದಿಂದ ಇಬ್ಬರು ಶಾಸಕರು, ಒಬ್ಬ ಸಚಿವರನ್ನು (ಈಗ ಮಾಜಿ) ಹೊಂದಿದ್ದು, ಇದು ಕೂಡ ಜಿಲ್ಲೆಯಲ್ಲಿ 70 ಸ್ಥಾನಗಳನ್ನು ಪಡೆದುಕೊಂಡು, ಕಾಂಗ್ರೆಸ್ಸಿಗೆ ಸಮಗಟ್ಟಿತು.

ಈ ಚುನಾವಣೆಯಲ್ಲಿ ತಮ್ಮ ಪಕ್ಷ ಅಧಿಕಾರಕ್ಕೆ ಬರುವಂತೆ ನೋಡಿಕೊಳ್ಳುವಲ್ಲಿ ಮಾನ್ವಿ ಶಾಸಕ ಬೋಸರಾಜ, ಲಿಂಗಸೂಗೂರು ಶಾಸಕ ಅಮರೇಗೌಡ ಬಯ್ಯಾಪುರ ಅವರು ಯಶಸ್ವಿಯಾಗಿದ್ದಾರೆ. ಉಳಿದಂತೆ ಜಿಲ್ಲಾ ಉಸ್ತುವಾರಿ ಸಚಿವ ಹನುಮಂತಪ್ಪ ಆಲ್ಕೋಡ, ಸಿಂಧನೂರು ಶಾಸಕ ಹಂಪನಗೌಡ ಬಾದರ್ಲಿ ತಮ್ಮ ಕ್ಷೇತ್ರದಲ್ಲಿ ತಮ್ಮ ಪಕ್ಷ ಅಧಿಕಾರ ಹಿಡಿಯುವಂತೆ ಮಾಡುವಲ್ಲಿ ವಿಫಲರಾಗಿದ್ದಾರೆ.

ಮುದಗಲ್ ಪಟ್ಟಣ ಪಂಚಾಯತ್ ಕುಷ್ಟಗಿ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಟ್ಟಿದ್ದು, ಅಲ್ಲಿನ ಬಿಜೆಪಿ ಶಾಸಕ ದೊಡ್ಡನಗೌಡರು ಮುದಗಲ್ ಪಟ್ಟಣ ಪಂಚಾಯ್ತಿ ಅಧಿಕಾರ ಹಿಡಿಯುವ ನಿಟ್ಟಿನಲ್ಲಿ ವಿಫಲವಾಗಿದ್ದ ಅಮರೇಗೌಡ ಬಯ್ಯಾಪುರ ಅವರು ತಮ್ಮ ಪ್ರಾಬಲ್ಯ ಹೆಚ್ಚಿಸಿಕೊಂಡು ಜೆಡಿ(ಎಸ್) ತೆಕ್ಕೆಗೆ ಅಧಿಕಾರ ತೆಗೆದುಕೊಳ್ಳಲು ಯಶಸ್ವಿಯಾಗಿದ್ದಾರೆ.

ಸಿಂಧನೂರಿನಲ್ಲಿ ಸಂಸದ ಕೆ.ವಿರುಪಾಕ್ಷಪ್ಪ ಮತ್ತು ಶಾಸಕ ಹಂಪನಗೌಡ ಬಾದರ್ಲಿ ಅವರ ಬಲಿಷ್ಠ ಶಕ್ತಿಯ ನಡುವೆ ಅಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರಲು ಸಾಧ್ಯವಾಗಿಲ್ಲ.

ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದ ಹನುಮಂತಪ್ಪ ಆಲ್ಕೋಡ್ ಸ್ವಕ್ಷೇತ್ರದಲ್ಲಿ ಜೆಡಿ(ಎಸ್) 10 ಸ್ಥಾನಗಳನ್ನು ಗೆಲ್ಲುವ ಮೂಲಕ ಎರಡನೇ ಸ್ಥಾನಕ್ಕೆ ತೃಪ್ತಿಪಡಬೇಕಾಗಿದೆ.

ವಿಧಾನ ಪರಿಷತ್ ಸದಸ್ಯರು ಹಾಗೂ ಬಿಜೆಪಿ ಜಿಲ್ಲಾಧ್ಯಕ್ಷರಾದ ಮನೋಹರ ಮಸ್ಕಿ, ತಮ್ಮ ತವರೂರು ಸಿಂಧನೂರಿನಲ್ಲಿ ಜಿಲ್ಲೆಯ ಇತರ ಕಡೆಗಳಲ್ಲಿ ಪಕ್ಷ ಹೆಚ್ಚಿನ ಸ್ಥಾನ ಗಳಿಸುವಂತೆ ನೋಡಿಕೊಳ್ಳುವಲ್ಲಿ ವಿಫಲರಾಗಿದ್ದಾರೆ. ಬಿಜೆಪಿ ಮುಖಂಡ ಆರ್. ತಮ್ಮಯ್ಯ ದೇವದುರ್ಗದಲ್ಲಿ ಪಕ್ಷ ಖಾತೆ ತೆಗೆಯುವಂತೆ ನೋಡಿಕೊಳ್ಳುವಲ್ಲಿ ವಹಿಸಿದ ಶ್ರಮ ವ್ಯರ್ಥವಾಗಿದೆ.

ರಾಯಚೂರು ನಗರದಲ್ಲಿ ಕಾಂಗ್ರೆಸ್ ಹೆಚ್ಚಿನ ಸ್ಥಾನಗಳನ್ನು ಪಡೆದುಕೊಂಡು, ಅಧಿಕಾರದ ಗದ್ದುಗೆಯನ್ನೇರಲು ಹವಣಿಸುತ್ತಿದೆ. ಎರಡನೇ ಸ್ಥಾನದಲ್ಲಿರುವ ಜೆಡಿ(ಎಸ್) 12 ಸ್ಥಾನಗಳನ್ನು ಪಡೆದಿದ್ದು, ಇದು ಕೂಡ ನಗರಸಭಾ ಮಾಜಿ ಅಧ್ಯಕ್ಷ ಎಂ.ಈರಣ್ಣ ನವರ ಸಾರಥ್ಯದಲ್ಲಿ ಅಧಿಕಾರ ಹಿಡಿಯುವ ಸಿದ್ಧತೆಯನ್ನು ತೆರೆಮರೆಯಲ್ಲಿ ನಡೆಸಿದೆ. ಕಳೆದ ಐದಾರು ಬಾರಿ ಅಧಿಕಾರದ ರುಚಿಯನ್ನು ಅನುಭವಿಸಿದ ಎಂ.ಈರಣ್ಣನವರು ಬಹುಮತವಿಲ್ಲದಿದ್ದರೂ ಹೇಗಾದರೂ ಮಾಡಿ, ಅಧಿಕಾರ ಹಿಡಿದರೆ ಆಶ್ಚರ್ಯವೇನಿಲ್ಲ. ಇದು ಅವರಿಗೆ ಅಸಾಧ್ಯವೇನೂ ಅಲ್ಲ! ಆದರೆ ಇದಕ್ಕೆ ಪ್ರತಿಯಾಗಿ ದೊಡ್ಡ ಪಕ್ಷವಾದ ಕಾಂಗ್ರೆಸ್ ಮತ್ತು ಅದರ ಜಿಲ್ಲಾಧ್ಯಕ್ಷರಾದ ಎ.ವಸಂತಕುಮಾರ್ ಮತ್ತವರ ಪರಿವಾರ ಅನುಸರಿಸುವ ತಂತ್ರ ಈರಣ್ಣನವರಿಗೆ ಮುಳುವಾಗವುದೋ! ವರವಾಗುವುದೋ! ಕಾದು ನೋಡಬೇಕು. ಏಕೆಂದರೆ ಈರಣ್ಣನವರು ನಗರಸಭೆ ಅಧಿಕಾರ ಹಿಡಿಯುವುದು ಪ್ರತಿಷ್ಠೆಯಾಗಿದ್ದು, ಈ ಹಿಂದೆಲ್ಲಾ ಅನುಸರಿಸಿದ ರಾಜಕೀಯ ತಂತ್ರಗಳಿಗೆ ಎಲ್ಲ ರಾಜಕೀಯ ಪಕ್ಷಗಳು ಸೆಲ್ಯೂಟ್ ಹೊಡೆದಿವೆ. ನಗರಸಭೆಯಲ್ಲಿ ಅವರದ್ದೇ ದರ್ಬಾರು, ಉಳಿದವರೆಲ್ಲ ನಗಣ್ಯ! ಈ ಬಾರಿ ರಾಯಚೂರು ನಗರ ಸಭೆಯಲ್ಲಿ ಆಡಳಿತ ವಿರೋಧಿ ಅಲೆಯಿದ್ದು, ಪರ್ಯಾಯ ನಗರಸಭೆ ರಚನೆಗೆ ಜನತೆ ಕಾತುರದಿಂದ ಇದ್ದಾರೆ. ಇದನ್ನು ಕಾಂಗ್ರೆಸ್ ಪಕ್ಷ ಈಡೇರಿಸಬಲ್ಲುದೇ? ಕಾದು ನೋಡಬೇಕು. ಉಳಿದಂತೆ ಜಿಲ್ಲೆಯ ಎಲ್ಲ ನಗರಸಭೆ ಪುರಸಭೆಗಳಲ್ಲಿ ಆಯಾ ಪಕ್ಷಗಳು ಅಧಿಕಾರ ಸ್ಥಾಪಿಸಿ, ಜನರ ಮೂಲ ಸೌಕರ್ಯಗಳತ್ತ ಗಮನ ಹರಿಸಲಿ. ಸಿಪಿಐ(ಎಂ) ಜಿಲ್ಲೆಯ 4 ಸ್ಥಾನಗಳಲ್ಲಿ ಸ್ಪರ್ಧಿಸಿತ್ತು. ಗೆಲುವು ಸಿಕ್ಕಿಲ್ಲ. ಸಿಪಿಐ(ಎಂ) ನಂತಹ ಪಕ್ಷದ ಪ್ರತಿನಿಧಿಗಳೂ ಗೆದ್ದರೂ ವಿರೋಧ ಪಕ್ಷದ ಜವಾಬ್ದಾರಿಯೇ ಅಲ್ಲವೇ? ಅದನ್ನು ಗೆಲ್ಲದಿದ್ದಾಗಲೂ ನಿರ್ವಹಿಸಲು ಸಜ್ಜಾಗಿದ್ದಾರೆ. ಜನದ ದನಿಯಾಗಿ ದುಡಿಯಲು ಅವರು ನಿರ್ಧರಿಸಿದ್ದಾರೆ.

ವರದಿ : ಡಿ.ಎಸ್.ಶರಣಬಸವ
ರಾಯಚೂರು

ನೆರೆಹಾವಳಿ-ಬಯಲಲ್ಲಿ ಬಯಲಾದ ಬಡವರ ಬದುಕು


ನರಗುಂದ ತಾಲ್ಲೂಕಿನ ಕೊಣ್ಣರನಿಂದ ರೋಣ ತಾಲೂಕಿನ ಹೊಳೆ ಆಲೂರು ಗ್ರಾಮದ ಕಡೆಗೆ ಹೊರಟರೆ ರಸ್ತೆ ಬದಿಗೆ ಬೀಡುಬಿಟ್ಟಿರುವ 80-100 ಕುಟುಂಬಗಳು ನಮಗೆ ಕಾಣಸಿಗುತ್ತವೆ. ಸದ್ಯ ಬಯಲಲ್ಲೇ ಇವರ ಬದುಕು. ಗೊಬ್ಬರ ಚೀಲದ ತಟ್ಟಿನಿಂದ ತಯಾರಿಸಲಾದ ಚಿಕ್ಕ ಗುಡಿಸಲುಗಳಲ್ಲಿ, ಇತ್ತೀಚಿಗೆ ಜಿಲ್ಲಾಡಳಿತದಿಂದ ನಿರ್ಮಿಸಲಾದ ಜಿಂಕ್ ತಗಡಿನ ಕಿಷ್ಕಿಂದೆಯಂತಹ ಶೆಡ್ಡುಗಳಲ್ಲಿ ಕಳೆದ 20-25 ದಿನಗಳಿಂದ ಇವರು ಇಲ್ಲಿ ವಾಸ ಮಾಡುತ್ತಿದ್ದಾರೆ. ಮುಖ್ಯರಸ್ತೆಯಿಂದ 1 ಕಿ.ಮೀ ದೂರದಲ್ಲಿರುವ ಹೊಳೆ ಮಣ್ಣೂರ. ಮತ್ತು ಅದರ ಪಕ್ಕದಲ್ಲಿರುವ ಗಾಡಗೋಳಿ ಗ್ರಾಮಗಳ ಕೃಷಿ ಕೂಲಿಕಾರರ ಜನರು ಇವರಾಗಿದ್ದಾರೆ. ಹಾಗೆ ಬೀದಿಗೆ ಬರಲು ಕಾರಣವೇನು? ಕಳೆದ ತಿಂಗಳು ಸುರಿದ ಭಾರಿ ಮಳೆಗೆ (ಸೆ.18-19)ಬೆಣ್ಣೆ ಹಳ್ಳ ಉಕ್ಕಿಹರಿಯಿತು. ಮಲಪ್ರಭಾ ನದಿಯನ್ನು ಸೇರುವ ಈ ಹಂತದಲ್ಲಿ ಆ ನದಿಗೂ ಮಹಾಪುರ, ಹೀಗಾಗಿ ಬೆಣ್ಣೆ ಹಳ್ಳದ ನೀರು ಸೀಳು ಹೊಡೆದು ಮಣಸಿಗಿ, ಹೊಳೆ ಮಣ್ಣೂರ, ನಾಡಗೋಳಿ ಮುಂತಾದ ಗ್ರಾಮಗಳನ್ನು ಜಲಾವೃತಗೊಳಿಸಿತು. ಗ್ರಾಮದ ಜನರೇ ಹೇಳುವ ಹಾಗೆ ಊರಲ್ಲಿ ಆಳಿಗಿಂತ ಹೆಚ್ಚು ಎತ್ತರಕ್ಕೆ ನೀರು ಜಮಾ ಆಗಿತ್ತು. ಕೆಲವು ಮನೆಗಳ ಮೇಲ್ಛಾವಣಿವರೆಗೂ ನೀರಿತ್ತು. ಸಾಮಾನ್ಯವಾಗಿ ಮಣ್ಣು ಕಲ್ಲುಗಳಿಂದ ನಿರ್ಮಾಣಗೊಂಡ ಇಲ್ಲಿಯ ಮನೆಗಳು ಶಿಥಲವಾಗಿವೆ, ಭಾಗಶಃ ಬಿದ್ದಿವೆ. ಸಂಪೂರ್ಣ ನೆಲಕಚ್ಚಿದವುಗಳೂ ಸಾಕಷ್ಟಿವೆ. ಹಳ್ಳಿಗಳಲ್ಲಿ ನೀರು ಹೊಕ್ಕು ಧಾನ್ಯಗಳೆಲ್ಲಾ ನೆನೆದು, ಊರೆಲ್ಲಾ ದುರ್ಗಂಧದ ವಾಸನೆ, ನೆರೆಹಾವಳಿಗೆ ಸಿಕ್ಕಿ ಬಿದ್ದ ಬಹುಪಾಲು ಮನೆಗಳು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳು ಹಾಗೂ ಕೃಷಿ ಕೂಲಿಕಾರರ ಕುಟುಂಬಗಳಾಗಿದ್ದವು. ಈಗ ಈ ಕುಟುಂಬಗಳು ಆಶ್ರಯ ಕಳೆದುಕೊಂಡು ಬಯಲಲ್ಲಿ ನಿಂತಿವೆ. ಹಾಗೆ ನೋಡಿದರೆ ಇಡೀ ಗ್ರಾಮವೇ ರಸ್ತೆ ಬದಿಗೆ ಬಂದು ನಾಲ್ಕಾರು ದಿನ ಕಳೆದುಹೋದ ಗುರುತುಗಳು ರಸ್ತೆ ಗುಂಟ ಕಾಣಸಿಗುತ್ತವೆ. ಆದರೆ ಸಂಪೂರ್ಣ ನೆಲಕಚ್ಚಿದ ಕೃಷಿ ಕೂಲಿಕಾರರ ಮನೆಗಳು ಅವರನ್ನು ಬಯಲಿಗೆ ತಳ್ಳಿವೆ. ಇದು ಒಂದು ಹಳ್ಳಿಯಲ್ಲಿ ಕಂಡ ದೃಶ್ಯವಾದರೆ, ಜಲಾವೃತಗೊಂಡ ಇತರ ಗ್ರಾಮದವರ ಪರಿಸ್ಥಿತಿ ಇದಕ್ಕಿಂತ ಭಿನ್ನವಾಗೇನೂ ಇಲ್ಲ.

ಜಿಲ್ಲಾ ಆಡಳಿತದ ನಿರ್ಲಕ್ಷ್ಯ : ನೆರೆ ಹಾವಳಿಗೆ ಸಿಲುಕಿದ ನಲುಗಿದ ಜನತೆಯ ನೆರವಿಗೆ ಬರಬೇಕಾಗಿದ್ದ ಜಿಲ್ಲಾಡಳಿತ ಸಮರೋಪಾದಿಯಾಗಿ ಪರಿಹಾರ ಕಾರ್ಯಕ್ಕೆಗೊಳ್ಳಬೇಕಾಗಿತ್ತು. 10-11 ದಿನಗಳವರೆಗೆ ಗಂಜೀ ಕೇಂದ್ರ ಪ್ರಾರಂಭಿಸಿ, ಜನರಿಗೆ ಅನ್ನ ಹಾಕಿದೆ. ನಂತರ ಜಿಂಕ್ ತಗಡಿನಿಂದ (ಹಳೇ) ಶೆಡ್ ನಿರ್ಮಾಣ ಮಾಡಿದೆ. 8 X 10 ಅಳತೆಯ ಒಂದು ಶೆಡ್‌ನಲ್ಲಿ 5 ಕುಟುಂಬಗಳು ಜೀವನ ಸಾಗಿಸುವ ಅಸಹನೀಯ ಬಾಳು ಇವರದಾಗಿದೆ. ಇತ್ತೀಚಿಗೆ ಬೆಂಗಳೂರಿನ ಧಾರ್ಮಿಕ ಸಂಸ್ಥೆಯೊಂದು (ಶ್ರೀ ದಯಾನಂದ ಸ್ವಾಮೀಜಿ, ಬಸವಧರ್ಮ ಜ್ಞಾನ ಪೀಠ) ಪ್ರತಿ ಕುಟುಂಬಕ್ಕೆ 1 ರಗ್ಗು, 1 ಬೆಡ್‌ಶೀಟ್ ಹಂಚಿಕೆ, ಜಿಲ್ಲಾಡಳಿತ 5 ಕೆ.ಜಿ ಅಕ್ಕಿ 1/4 ಬೇಳೆ, ಎಣ್ಣೆ, 1 ಲಿ.ಚಿಮಣಿ ಎಣ್ಣೆ ವಿತರಣೆ ಮಾಡಲಾಗಿದೆ. ಒಂದು ದುರಂತವೆಂದರೆ ಬಡವರಿಗೆ, ನಿರ್ಗತಿಕರಿಗೆ ಹಂಚಲು ಬಂದ ಯಾವುದೇ ಪದಾರ್ಥದಲ್ಲೂ ತಮಗೂ ಪಾಲು ಬೇಕು ಎಂಬುದು ಉಳ್ಳವರ ಆಹವಾಲು, ಹೀಗಾಗಿ ಇದ್ದುದರಲ್ಲೇ, ಹಂಚಿ, ಸಮಾಧಾನ ಮಾಡಿ ಕೈತೊಳೆದುಕೊಳ್ಳುವುದು ಅಧಿಕಾರಿ ವರ್ಗದ ಗುಣ.

ಶಾಶ್ವತ ಪರಿಹಾರ: ಬೆಣ್ಣೆ ಹಳ್ಳದ ದಡದಲ್ಲಿರುವ ಈ ಗ್ರಾಮಗಳು ಸದಾ ಅಪಾಯದ ನಿರೀಕ್ಷೆಯಲ್ಲಿಯೇ ಇರುತ್ತವೆ. ಈ ವರ್ಷ ಬಿದ್ದ ಮಳೆ ಪ್ರಮಾಣ ಜಾಸ್ತಿನೆ. ಆದರೆ ಇದು ಮರುಕಳಿಸಲಾರದು ಎಂಬ ಗ್ಯಾರಂಟಿ ಏನು? ಈಗ ಹೊಸ ಮನೆಗಳನ್ನು ಅದೇ ಸ್ಥಳದಲ್ಲಿ ಮನೆಗಳನ್ನು ನಿರ್ಮಿಸಿದರೂ ಮುಂದೊಂದು ದಿನ ಅಪಾಯಕ್ಕೆ ಸಿಲುಕಲೂ ಬಹುದು. ಆದ್ದರಿಂದ ಸರ್ಕಾರ ಈ ಗ್ರಾಮಗಳನ್ನು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸುವುದು ಸೂಕ್ತ. ಆಶ್ರಯ, ಇಂದಿರಾ ಆವಾಸ್‌ನಂತಹ ಯೋಜನೆಗಳನ್ನು ಬಡವರಿಗೆ ಸುರಕ್ಷಿತ ಸ್ಥಳದಲ್ಲಿ ಸರ್ಕಾರ ಮನೆ ನಿರ್ಮಿಸಿಕೊಡಲಿ. ಕೇವಲ 10 ಸಾವಿರ ರೂ. ನೀಡಿ ಕೈತೊಳೆದುಕೊಳ್ಳುವುದು ಖಂಡಿತ ಬೇಡ ಎಂದು ಸಮಸ್ಯೆ ಪರಿಶೀಲಿಸಿದ ವಿವಿಧ ಸಂಘಟನೆಗಳ ಮುಖಂಡರ ನಿಯೋಗ ಒತ್ತಾಯಿಸಿದೆ.


● ಬಿ.ಎಸ್.ಸೊಪ್ಪಿನ

ರಸ್ತೆ ಬದಿಯಲ್ಲಿ ನೊಂದವರ ನೆಲೆ



ಸೇತುಸಮುದ್ರಂ ಯೋಜನೆ ಜಾರಿಗೆ ಆಗ್ರಹಿಸಿ ತಮಿಳುನಾಡು ಯುವಜನರ ಸೈಕಲ್ ಜಾಥಾ

ಡಿವೈಎಫ್‌ಐ ತಮಿಳುನಾಡು ಘಟಕದ ನೇತೃತ್ವದಲ್ಲಿ ನೂರಾರು ಯುವಜನರು ಅಕ್ಟೋಬರ್ 8ರಿಂದ 10 ರವರೆಗೆ ದಕ್ಷಿಣ ತಮಿಳುನಾಡಿನ ನಾಲ್ಕು ಸ್ಥಳಗಳಿಂದ, ಅಂದರೆ ಮಧುರೈ, ವಿರುಧುನಗರ, ತುತುಕುರಿನ್ ಮತ್ತು ಶಿವಗಂಗೈನಿಂದ ರಾಮೇಶ್ವರದ ವರೆಗಿನ ಪ್ರಚಾರ ಜಾಥಾದಲ್ಲಿ ಭಾಗವಹಿಸಿದರು. ಡಿವೈಎಫ್‌ಐನ ರಾಜ್ಯ ಅಧ್ಯಕ್ಷರು, ಕಾರ್ಯದರ್ಶಿ, ಜತೆ ಕಾರ್ಯದರ್ಶಿ ಮತ್ತು ಖಜಾಂಚಿ ನೇತೃತ್ವ



ವಹಿಸಿದ್ದ ಜಾಥಾಗಳು ದಕ್ಷಿಣ ತಮಿಳುನಾಡಿನಾದ್ಯಂತ ಸಂಚರಿಸಿ ಅಕ್ಟೋಬರ್ 10ರಂದು ಪ್ರಖ್ಯಾತ ಯಾತ್ರಾ ಸ್ಥಳವೆನಿಸಿದ ರಾಮೇಶ್ವರಂ ತಲುಪಿದಾಗ ಸಾವಿರಾರು ಯುವಜನ, ಮಹಿಳೆಯರು, ಮೀನುಗಾರರು ಹಾಗೂ ಸಣ್ಣ ವ್ಯಾಪಾರಿಗಳು ಭವ್ಯ ಸ್ವಾಗತ ನೀಡಿದರು. 'ಸೇತು ಯೋಜನೆಯನ್ನು ಜ್ಯಾರಿಗೊಳಿಸಿ, ಯುವಜನರಿಗೆ ಉದ್ಯೋಗ ಸೃಷ್ಟಿಸಿ' ಎಂಬ ಘೋಷಣೆಗಳು ಮೊಳಗಿದವು.

ನಂತರ ನಡೆದ ಸಾರ್ವಜನಿಕ ಸಭೆಯನ್ನು ಉದ್ದೇಶಿಸಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿಗಳಾದ ಎನ್.ವರದ ರಾಜನ್, ಡಿಎಂಕೆ ಸಂಘಟನಾ ಕಾರ್ಯದರ್ಶಿ ಟಿಕೆಎಸ್ ಇಳಂಗೋವನ್, ಕಾಂಗ್ರೆಸ್ ಮುಖಂಡ ರವಿಚಂದ್ರ ರಮವಣ್ಣ , ಡಿವೈಎಫ್‌ಐ ಅಖಿಲ ಭಾರತ ಅಧ್ಯಕ್ಷ ಶ್ರೀರಾಮಕೃಷ್ಣನ್ ಮತ್ತು ರಾಜ್ಯ ಡಿವೈಎಫ್‌ಐ ಮತ್ತು ಎಐವೈಎಫ್ ಮುಖಂಡರು ಮಾತನಾಡಿದರು.

ಶೇ. 60 ಕೆಲಸ ಮುಗಿದಿರುವಾಗ?

'ಸೇತು ಸಮುದ್ರಂ' ತಮಿಳುನಾಡಿನ ಜನಗಳ ದೀರ್ಘಕಾಲದ ಕನಸು. ಏಕೆಂದರೆ ಇದು ಸಾವಿರಾರು ಯುವಜನರಿಗೆ ಉದ್ಯೋಗ ಕಲ್ಪಿಸುತ್ತದೆ. ದುರದೃಷ್ಟವಶಾತ್ 60 ಶೇಕಡ ಕೆಲಸ ಮುಗಿದ ಮೇಲೆ ಕೋಮುವಾದಿ ಶಕ್ತಿಗಳಿಂದ ಮತ್ತು ಸರ್ವೋಚ್ಚ ನ್ಯಾಯಾಲಯದಿಂದ ಅಡ್ಡಿಗಳು ಬಂದಿವೆ. ಇದು ಆರ್ಥಿಕ ಬೆಳವಣಿಗೆಗೆ ನೆರವಾಗುವುದಿಲ್ಲ' ಎಂದು ವರದರಾಜನ್ ಹೇಳಿದರು.

ಅವರು ಅಗೆದರೆ ಏನು ಮಾಡುವರು?

'ಶ್ರೀಲಂಕಾ ಸರಕಾರ ಕೊಲಂಬೋ ಬಂದರನ್ನು ಅಭಿವೃದ್ಧಿ ಪಡಿಸಲು ನಿರ್ಧರಿಸಿದರೆ ಅವರು ತನ್ನ ಭಾಗದ 'ರಾಮಸೇತು'ವನ್ನು ಅಗೆಯುತ್ತಾರೆ. ಆಗ ಶ್ರೀಯುತ ಅಡ್ವಾಣಿಯವರು ಏನು ಮಾಡುತ್ತಾರೆ' ಎಂದು ಇಳಂಗೋವನ್ ಪ್ರಶ್ನಿಸಿದರು. ಗುಜರಾತ್ ಅಸೆಂಬ್ಲಿ ಚುನಾವಣೆಗಳಲ್ಲಿ ವೋಟು ಬಾಚಿಕೊಳ್ಳಲು ಹೀಗೆ ಮಾಡುತ್ತಿದ್ದಾರೆ ಎಂದು ಅವರು ಟೀಕಿಸಿದರು.

ತಮಿಳರ ವಿರುದ್ಧ ಅಪಪ್ರಚಾರ

ಡಿವೈಎಫ್‌ಐ ನ ಅಖಿಲ ಭಾರತ ಅಧ್ಯಕ್ಷರಾದ ಶ್ರೀರಾಮಕೃಷ್ಣನ್ ತಮ್ಮ ವಿಶೇಷ ಭಾಷಣದಲ್ಲಿ ಬಿಜೆಪಿ ಉತ್ತರಭಾರತದಲ್ಲಿ, ಮಧ್ಯ ಪ್ರದೇಶದಂತಹ ರಾಜ್ಯಗಳಲ್ಲಿ ತಮಿಳು ಜನಗಳ ವಿರುದ್ಧ ದ್ವೇಷಪ್ರಚಾರ ನಡೆಸಿದ್ದಾರೆ ಎಂದು ತಿಳಿಸಿದರು. ತಮಿಳಿನವರು ರಾವಣನ ಮಕ್ಕಳು, ರಾಮನ ಶತ್ರುಗಳು ಎಂದು ಅವರು ಪ್ರಚಾರ ಮಾಡುತ್ತಿದ್ದಾರೆ ಎಂದ ಅವರು ಇದು ರಾಷ್ಟ್ರೀಯ ಸಮಗ್ರತೆಗೆ ಮಾರಕ ಎಂದರು.

ಜನ ಎಲ್ಲಿ?

ಡಿವೈಎಫ್‌ಐ ರಾಜ್ಯ ಕಾರ್ಯದರ್ಶಿ ಎಸ್ ಕಣ್ಣನ್ ಸೇತು ಕಾಲುವೆ ಯೋಜನೆಯ ಪ್ರಯೋಜನಗಳನ್ನು ವಿವರಿಸಿದರು. ಸೈಕಲ್ ಜಾಥಾದಲ್ಲಿ ಅತ್ಯಂತ ಬಡತನ ಇರುವ ವಿರುಧುನಗರದ ಮೂಲಕ ಬರುವಾಗ ಹೆಚ್ಚಿನ ಹಳ್ಳಿಗಳಲ್ಲಿ ಜನರೇ ಕಾಣಲಿಲ್ಲ. ಏಕೆಂದರೆ ಅಲ್ಲಿನ



ಜನಗಳಿಲ್ಲ ಬದುಕನ್ನು ಅರಸಿ ತಿರುಪುರ್ ಅಥವಾ ಕೊಯಮತ್ತೂರು, ಮುಂಬೈ ಅಥವ ಅಹಮದಾಬಾದ್, ದುಬೈ ಅಥವಾ ಸಿಂಗಪುರ-ಮಲೇಸ್ಯಾಗಳಿಗೆ ವಲಸೆ ಹೋಗುತ್ತಾರೆ. ದಕ್ಷಿಣ ತಮಿಳುನಾಡಿನ ಹೆಚ್ಚಿನ ಜಿಲ್ಲೆಗಳಲ್ಲಿ ಕೈಗಾರಿಕೆಗಳಿಲ್ಲ, ಕೃಷಿ ಬಿಕ್ಕಟ್ಟಿನಲ್ಲಿದೆ, ಬರ ಕಾಡುತ್ತಿದೆ. ಇಲ್ಲಿ 1996-97ರಲ್ಲಿ ಜಾತಿ ಗಲಭೆಗಳು ನಡೆದಿದ್ದನ್ನು ನೆನಪಿಸುತ್ತ ಅವರು ಇದಕ್ಕೆ ಯುವಜನರಲ್ಲಿನ ನಿರುದ್ಯೋಗ ಒಂದು ಪ್ರಮುಖ ಕಾರಣ ಎಂದು ನ್ಯಾಯಮೂರ್ತಿ ಮೋಹನ್ ಮತ್ತು ನ್ಯಾಯಮೂರ್ತಿ ಗೋಕುಲಕೃಷ್ಣನ್ ಆಯೋಗಗಳು ಹೇಳಿದ್ದನ್ನು ನೆನಪಿಸಿದರು. ಮುಖ್ಯವಾಗಿ ದಲಿತ ಯುವಜನರಿಗೆ ಉದ್ಯೋಗ ಪಡೆಯುವ, ಬದುಕು ಸಾಗಿಸುವ ಅವಕಾಶವೇ ಇಲ್ಲದಂತಾಗಿದ್ದು, ಇಂತಹ ಸನ್ನಿವೇಶದಲ್ಲಿ ಈ ಯೋಜನೆ ಮಹತ್ವದ್ದಾಗುತ್ತದೆ ಎಂದರು. ಈ ಯೋಜನೆ ಪೂರ್ಣಗೊಂಡಾಗ ತುತಿಕೋರಿನ್, ರಾಮೇಶ್ವರಂ, ನಾಗಪಟ್ಟಣಂ, ಕಡಲೂರು, ಪುದುಚೇರಿ ಮೂಲಕ ಚೆನ್ನೈಗೆ ಹಡಗುಗಳ ಸಂಚಾರ ದೊಡ್ಡ ಪ್ರಮಾಣದಲ್ಲಿ ಹೆಚ್ಚುತ್ತದೆ. ಸುಮಾರು 3000 ಹಡಗುಗಳು ಸಂಚರಿಸುವ ಅಂದಾಜು ಇದೆ. ಇದರಿಂದ ತಮಿಳುನಾಡಿನ 13 ಜಿಲ್ಲೆಗಳಲ್ಲಿ 13 ಕರಾವಳಿ ಜಿಲ್ಲೆಗಳಲ್ಲಿ ಉದ್ದಿಮೆಗಳು ತಲೆ ಎತ್ತುತ್ತವೆ. ಚೆನ್ನೈನಿಂದ ಕನ್ಯಾಕುಮಾರಿಯ ವರೆಗೆ 13 ಬಂದರುಗಳು ರೂಪುಗೊಳ್ಳುತ್ತವೆ. 5 ಮೀನುಗಾರಿಕಾ ಬಂದರುಗಳು, ಹಡಗು ಕಟ್ಟುವ ಘಟಕಗಳು, ಹಳೆಯ ಹಡಗುಗಳನ್ನು ಒಡೆಯುವ ಘಟಕಗಳು, ನೂರಾರು ಆಮದು-ರಫ್ತು ಘಟಕಗಳು ಇತ್ಯಾದಿ ಬಂದು ಉದ್ಯೋಗ ಸೃಷ್ಟಿಯಾಗುತ್ತವೆ. ಇದರಿಂದ ಈ ಪ್ರದೇಶದ ಯುವಜನರು ತಮ್ಮ ಬದುಕಿಗಾಗಿ ತಾಯ್ನಾಡು ಬಿಟ್ಟು ಹೋಗುವ ಕಷ್ಟ ತಪ್ಪುತ್ತದೆ. ಆದರೆ ಸಂಘ ಪರಿವಾರಕ್ಕೆ, ಅವರ ತಮಿಳುನಾಡು ಮಿತ್ರರಾದ ಜಯಲಲಿತರಿಗೆ ಇವೆಲ್ಲಾ ಬೇಕಿಲ್ಲ, ಎಂದು ಅವರು ಟೀಕಿಸಿದರು.

ಅಖಿಲ ಭಾರತ ಕಿಸಾನ್ ಮಂಡಳಿ ಕರೆ ಡಿಸೆಂಬರ್ 4-5 ರಂದು ದೇಶವ್ಯಾಪಿ ಚಳುವಳಿ

ಅಖಿಲ ಭಾರತ ಕಿಸಾನ್ ಸಭಾ(ಎಐಕೆಎಸ್)ದ ಅಖಿಲ ಭಾರತ ಮಂಡಳಿ ದೇಶದ ರೈತರು ಮತ್ತು ಕೃಷಿಕೂಲಿಕಾರರ ಬೇಡಿಕೆಗಳನ್ನು ಎತ್ತಿ ತೋರಿಸಲು ದೇಶಾದ್ಯಂತ ಡಿಸೆಂಬರ್ 4 ಹಾಗೂ 5ರಂದು ಸಭೆಗಳು, ಮತಪ್ರದರ್ಶನಗಳು, ಧರಣಿಗಳು ಮತ್ತಿತರ ಸಾಮೂಹಿಕ ಚಟುವಟಿಕೆಗಳನ್ನು ನಡೆಸಬೇಕೆಂದು ಕರೆ ನೀಡಿದೆ. ಮಂಡಳಿ ತಮಿಳುನಾಡಿನ ವಿಲ್ಲುಪುರಂನಲ್ಲಿ ಸಭೆ ಸೇರಿತ್ತು.

ಎಡಪಕ್ಷಗಳ ಒತ್ತಡದಿಂದಾಗಿ ಯುಪಿಎ ಸರಕಾರ ತನ್ನ ಸಾಮಾನ್ಯ ಕನಿಷ್ಟ ಕಾರ್ಯಕ್ರಮದಲ್ಲಿ ಭೂಮಿತಿ ಮೀರಿದ ಹೆಚ್ಚುವರಿ ಭೂಮಿ, ಸರಕಾರೀ ಭೂಮಿ ಮತ್ತು ಬಂಜರು ಭೂಮಿಯನ್ನು ಭೂಹೀನರಿಗೆ ಹಂಚಲಾಗುವುದು, ಕೃಷಿಯಲ್ಲಿ ಸಾಕಷ್ಟು ಸಾರ್ವಜನಿಕ ಹಣ ತೊಡಗಿಸಲಾಗುವುದು, ಭೂಸುಧಾರಣಾ ಕಾಯದೆಗಳನ್ನು ಹಿಂದೆ ತೆಗೆಯುವುದಿಲ್ಲ, ಗ್ರಾಮೀಣ ಸಾಲ ನೀಡಿಕೆಯನ್ನು ಹೆಚ್ಚಿಸಲಾಗುವುದು, ಕೃಷಿ ಕೂಲಿಕಾರರಿಗೆ ಕನಿಷ್ಟ ಕೂಲಿ ಮತ್ತು ರಕ್ಷಣಾ ಕಾಯಿದೆ ತರಲಾಗುವುದು , ವಿದೇಶಿ ಆಮದುಗಳಿಂದ ರೈತರಿಗೆ ರಕ್ಷಣೆ ನೀಡಲಾಗುವುದು, ರೈತರಿಗೆ ಫಲದಾಯಕ ಬೆಲೆ ನೀಡಲಾಗುವುದು, ಸಮಗ್ರ ಬೆಳೆ ವಿಮೆ ಯೋಜನೆಗಳನ್ನು ರೂಪಿಸಲಾಗುವುದು ಇತ್ಯಾದಿ ಹಲವು ಭರವಸೆಗಳನ್ನು ನೀಡಿತ್ತು. ಆದರೆ ಸಾಲ ನೀಡಿಕೆಯಲ್ಲಿ ತುಸು ಹೆಚ್ಚಳ, ಗ್ರಾಮೀಣ ಉದ್ಯೋಗ ಖಾತರಿ ಕಾನೂನು ಮತ್ತು ಅರಣ್ಯ ಭೂಮಿಯ ಮೇಲೆ ಬುಡಕಟ್ಟು ಜನಗಳ ಹಕ್ಕುಗಳು ಕುರಿತ ಕಾನೂನು ರೂಪಿಸಿರುವುದನ್ನು ಬಿಟ್ಟರೆ ಮೂರೂವರೆ ವರ್ಷಗಳಲ್ಲಿ ಯುಪಿಎ ಸರಕಾರ ಈ ವಚನಗಳನ್ನು ಈಡೇರಿಸಲು ಏನೂ ಮಾಡಿಲ್ಲ, ಇನ್ನೊಂದೆಡೆ ನವ-ಉದಾರವಾದಿ ನೀತಿಗಳನ್ನೇ ಮುಂದುವರೆಸಿಕೊಂಡು ಹೋಗಲಾಗುತ್ತಿದೆ ಎಂದು ಗಮನಿಸಿದ ಅಖಿಲ ಭಾರತ ಕಿಸಾನ್ ಮಂಡಳಿ ಈ ಹಿನ್ನೆಲೆಯಲ್ಲಿ ದೇಶದ ರೈತರ ಮತ್ತು ಕೃಷಿಕೂಲಿಕಾರರ 16 ಬೇಡಿಕೆಗಳನ್ನು ಸರಕಾರದ ಮುಂದಿಟ್ಟಿರುವ ಒಂದು ನಿರ್ಣಯವನ್ನು ಅಂಗೀಕರಿಸಿತು. ಇದರ ಆಧಾರದಲ್ಲಿ ದೇಶವ್ಯಾಪಿ ಚಳುವಳಿ ನಡೆಸಲು ಅದು ಕರೆ ನೀಡಿದೆ.

ಅದೇ ರೀತಿ ಈಗಾಗಲೇ ಆಗಸ್ಟ್ 31 ರ ಜಂಟಿ ಸಮಾವೇಶದಲ್ಲಿ ನಿರ್ಧರಿಸಿದಂತೆ ಸಿಐಟಿಯು ಮತ್ತು ಅಖಿಲ ಭಾರತ ಕೃಷಿ ಕೂಲಿಗಾರರ ಸಂಘದ ಘಟಕಗಳ ಜತೆಗೂಡಿ ಬಲಿಷ್ಟ ಜಂಟಿ ಆಂದೋಲನಕ್ಕೆ ತಯಾರಿ ನಡೆಸಬೇಕು ಎಂದೂ ಮಂಡಳಿ ಹೇಳಿದೆ.

ಭೂಹೀನರಿಗೆ ಭೂಮಿ ಮತ್ತು ಮನೆ ನಿವೇಶನಗಳಿಗಾಗಿ ಆಂಧ್ರ ಪ್ರದೇಶದಲ್ಲಿ ಕಳೆದ ನಾಲ್ಕು ತಿಂಗಳಿಂದ ಭೂಹೋರಾಟ ಕಾಂಗ್ರೆಸ್ ಸರಕಾರದ ಭಾರೀ ದಮನವನ್ನು ಎದುರಿಸಿಯೂ ನಡೆಯುತ್ತಿದೆ. ಎಐಕೆಎಸ್ ನ ರಾಜ್ಯ ಮತ್ತು ಜಿಲ್ಲಾ ಘಟಕಗಳು ಈ ಹೋರಾಟದಿಂದ ಸ್ಫೂರ್ತಿ ಪಡೆದು, ಅದರಿಂದ ಸರಿಯಾದ ಪಾಠ ಕಲಿತು ಭೂಹೀನರಿಗೆ ಭೂಮಿಗಾಗಿ ಹಾಗೂ ವಸತಿಹೀನರಿಗೆ ಮನೆ ನಿವೇಶನಕ್ಕಾಗಿ ಹೋರಾಟಗಳನ್ನು ರೂಪಿಸಬೇಕು ಎಂದು ಕಿಸಾನ್ ಮಂಡಳಿ ಕರೆ ನೀಡಿದೆ.



ನಮ್ಮದೇಶದಲ್ಲಿ 1997 ರಲ್ಲಿ ಕೆಲವೊಂದು ರಾಜ್ಯಗಳಲ್ಲಿ ದಾಖಲಿಸಿದ ಮಾತೃ ಮರಣದ ಅಂಕಿ ಅಂಶಗಳು

ರಾಜ್ಯಗಳಲ್ಲಿ ಲಕ್ಷ ಸಜೀವ ಜನ್ಮ ನೀಡಿದ ತಾಯಂದಿರಲ್ಲಿ ಮಾತೃ ಮರಣದ ಅನುಪಾತ	
ಉತ್ತರಪ್ರದೇಶ	707
ರಾಜಸ್ಥಾನ	677
ಬಿಹಾರ	451
ಅಸ್ಸಾಂ	401
ಮಧ್ಯಪ್ರದೇಶ	498
ಓರಿಸ್ಸಾ	361
ಕರ್ನಾಟಕ	195
ಆಂಧ್ರಪ್ರದೇಶ	154
ತಮಿಳುನಾಡು	76
ಗುಜರಾತ್	29
ಪಶ್ಚಿಮಬಂಗಾಳ	264
ಪಂಜಾಬ್	196
ಮಹಾರಾಷ್ಟ್ರ	135
ಹರಿಯಾಣ	105

ಕೃಪೆ: ಟೈಮ್ಸ್ ಆಫ್ ಇಂಡಿಯಾ
ಸಂಗ್ರಹ: ಎಂ. ಶ್ರೀನಿವಾಸ್

ಹ್ಹ...ಹ್ಹಾ...ಹ್ಹಾ...

ಸಮಾನ ಅಂತರ

'ಸಮಾನ ದೂರ ಕಾಯ್ದುಕೊಳ್ಳುವುದು' ಎಂಬ ಮಾತು ಈಗ ಬಹಳ ಚಾಲ್ತಿಯಲ್ಲಿದೆ. ಸದ್ಯದ ರಾಜಕೀಯ ಪರಿಭಾಷೆಯಲ್ಲಿ 'ಸಮಾನ ದೂರ ಕಾಯ್ದುಕೊಳ್ಳುವುದು' ಎಂದರೆ, ಎರಡು ವಿರೋಧಿ ಶಕ್ತಿಗಳಿವೆ ಅವರೆಡರಿಂದ ಸಮಾನ ಅಂತರವನ್ನು ಕಾಯ್ದುಕೊಳ್ಳುವುದು ಎಂದು ಅರ್ಥ.

ನಿಮಗೆ ಸರಿಯಾಗಿ ಅರ್ಥವಾಗದಿದ್ದರೆ ಜೆಡಿ(ಎಸ್)ನ ಕುಮಾರಸ್ವಾಮಿಯವರನ್ನು ಕೇಳಿ. ಅವರು ಅದನ್ನು ಉದಾಹರಣೆ ಸಹಿತ ಸರಿಯಾಗಿ ವಿವರಿಸುತ್ತಾರೆ. 20 ತಿಂಗಳು ಕಾಂಗ್ರೆಸ್ ಜೊತೆ ಸರ್ಕಾರ, 20 ತಿಂಗಳು ಬಿಜೆಪಿ ಜೊತೆ ಸರ್ಕಾರ. ಸಾಧಿಸಿದಂತಾಯ್ತಲ್ಲ ಸಮಾನ ಅಂತರ!!

ಪಶ್ಚಿಮ ಬಂಗಾಳ : ಆಹಾರ ಧಾನ್ಯಗಳ ಲೂಟಿಯಲ್ಲಿ ಗೂಂಡಾಗಳು, ಬಿಜೆಪಿ ಮುಖಂಡರು

ಪಶ್ಚಿಮ ಬಂಗಾಳದಲ್ಲಿ ಖಾಸಗಿ ಗೂಂಡಾಗಳು ನಡೆಸುತ್ತಿದ್ದ ಆಹಾರದಾನ್ಯಗಳ ಲೂಟಿಯನ್ನು ಸಾಮಾನ್ಯ ಜನತೆ ದಿಟ್ಟತನದಿಂದ ಎದುರಿಸಿ ಪೊಲೀಸರಿಗೆ ಹಿಡಿದುಕೊಟ್ಟಿದ್ದು, ಲೂಟಿ ಮಾಡಿದ್ದ ಧಾನ್ಯಗಳನ್ನು ಸಂಬಂಧಿಸಿದ ಇಲಾಖೆಗೆ ಒಪ್ಪಿಸಿದ್ದಾರೆ.

ಲೂಟಿಕೋರರ ಬಂಧನ

ಬಿರ್‌ಭೂಮ್‌ನಲ್ಲಿ ಒಂದು ಡಜನ್‌ಗೂ ಹೆಚ್ಚು ಲೂಟಿಕೋರರನ್ನು ಮಾಲು ಸಮೇತ ಬಂಧಿಸಲಾಗಿದೆ. ಈ ಮಾಲನ್ನು ಅವರು ನ್ಯಾಯಬೆಲೆ ಅಂಗಡಿಗಳಿಂದ ಕಳವು ಮಾಡಿದ್ದರು.

ಬರ್ಧ್ವಾನ್ ಜಿಲ್ಲೆಯಲ್ಲಿಯೂ ಗೂಂಡಾಗಳು ಇಂತದೇ ದುಷ್ಕೃತ್ಯಗಳಲ್ಲಿ ತೊಡಗಿದ್ದಾರೆ. ತೃಣ ಮೂಲ ಕಾಂಗ್ರೆಸ್‌ನ ಸ್ಥಳೀಯ ಮುಖಂಡ ಶೇಖ್ ಮೊಹಮದ್ ಫಕೀರ್ ಗೂಂಡಾಗಳ ದಾಳಿಗೆ ಗುರಿಯಾಗಿದ್ದಾರೆ. ಫಕೀರ್ ಅವರ ದಿನಸಿ ಅಂಗಡಿಯನ್ನು ಗೂಂಡಾಗಳು ಸಂಪೂರ್ಣವಾಗಿ ಲೂಟಿ ಮಾಡಿದ್ದರು. ಮಧ್ಯ ಪ್ರವೇಶಿಸಿದ ಸಿಪಿಎಂ ಕಾರ್ಯಕರ್ತರು ಅಂಗಡಿಯನ್ನು ರಕ್ಷಿಸುವುದರೊಂದಿಗೆ ಅವರ ಮನೆಗೆ ಗೂಂಡಾಗಳು ಬೆಂಕಿ ಹಚ್ಚಲು ನಡೆಸಿದ ಪ್ರಯತ್ನ ವಿಫಲಗೊಳಿಸಿ ಮನೆಯವರ ಪ್ರಾಣಗಳನ್ನು ರಕ್ಷಿಸಿದ್ದಾರೆ.

ನವಾಬ್ ಹಾತ್ ಪ್ರದೇಶದಲ್ಲಿಯೂ ಇದೇ ಕೃತ್ಯದಲ್ಲಿ ತೊಡಗಿದ್ದಾಗ ಅವರನ್ನು ಪ್ರತಿರೋಧಿಸಲು ಮುಂದಾದ ಜಿಲ್ಲಾ ಸಿಪಿಎಂ ಮುಖಂಡರಾದ ಗಣೇಶ್ ಚೌಧುರಿ, ಕಮಲ್ ಗಾಯೆನ್ ತೀವ್ರವಾಗಿ ಗಾಯಗೊಂಡಿದ್ದಾರೆ. ಪಕ್ಷದ ಶಾಸಕರಾದ ಪ್ರದೀಪ್ ತಾಹ್ ಸಹ ಈ ದಾಳಿಗಳಲ್ಲಿ ಗಾಯಗೊಂಡಿದ್ದಾರೆ. ಇವರೊಂದಿಗೆ 20ಕ್ಕೂ ಹೆಚ್ಚು ಸಾಮಾನ್ಯ ಜನರೂ ಸಹ ಗಂಭೀರವಾಗಿ ಗಾಯಗೊಂಡಿದ್ದಾರೆ.

ಕೇಂದ್ರ ಸರ್ಕಾರವು ಬಡತನ ರೇಖೆಯ ಮೇಲಿನವರಿಗೆ ಆಹಾರ ಕಡಿತ ಮಾಡಿದ್ದರಿಂದ ಉಂಟಾಗಿರುವ ಕೊರತೆಯ ಪರಿಸ್ಥಿತಿಯಲ್ಲಿ ಗೂಂಡಾಶಕ್ತಿಗಳೂ, ಬಿಜೆಪಿ, ತೃಣಮೂಲದವರೂ ಸೇರಿ ಗೊಂದಲ ಮೂಡಿಸುವ, ಗಲಭೆ ಸೃಷ್ಟಿಸುವ ಪ್ರಯತ್ನ ನಡೆಸಿದ್ದಾರೆ. ಆದರೆ ಜನತೆ ಈ ಸಂಚಿನ ವಿರುದ್ಧ ನಿಂತಿದ್ದಾರೆ.



ಲೂಟಿಕೋರರ ಸಂ[illegible] ವಿರುದ್ಧ ಜನತೆ

ಅದೇ ರೀತಿ ಮುಷೀರಾಬಾದ್‌ನಲ್ಲೂ ಸಹ ಪ್ರದೇಶ ಕಾಂಗ್ರೆಸ್ ಸಮಿತಿ ಮುಖಂಡರಾದ ಅಧೀರ್ ಚೌಧರಿ ಇಂತಹ ನಿರಂತರ ಗೂಂಡಾ ಕೃತ್ಯಗಳಲ್ಲಿ ತೊಡಗಿದ್ದಾನೆ. ರೇಷನ್ ಅಂಗಡಿಗಳ ಮೇಲೆ ಸಂಘಟಿತ ದಾಳಿಗಳನ್ನು ನಡೆಸುತ್ತಿದ್ದಾನೆ. ಶಾಲಾ ಮಕ್ಕಳಿಗೆ ನೀಡುವ ಮಧ್ಯಾಹ್ನದ ಊಟಕ್ಕಾಗಿ ಶೇಖರಿಸಿಟ್ಟಿದ್ದ ಆಹಾರ ಧಾನ್ಯಗಳನ್ನೂ ಗೂಂಡಾಗಳು ಲೂಟಿ ಮಾಡಿದ್ದಾರೆ. ಲೂಟಿಕೋರರನ್ನು ಹತ್ತಿಕ್ಕಲು ಹೋದಾಗ ಪೊಲೀಸರ ಮೇಲೆ ಪೆಟ್ರೋಲ್ ಬಾಂಬ್‌ಗಳಿಂದ ಹಲ್ಲೆಗಳನ್ನು ನಡೆಸಿದ್ದಾರೆ. ಇದನ್ನು ಪ್ರತಿರೋಧಿಸಲು ಪೊಲೀಸರು ಲಾಠಿ ಚಾರ್ಜ್ ನಡೆಸುವಂತಹ ಒತ್ತಡಕ್ಕೆ ಸಿಲುಕಿದ್ದಾರೆ.

ಸುಳ್ಳು ಪ್ರಚಾರ

ಸರ್ಕಾರ ಪಡಿತರ ವ್ಯವಸ್ಥೆಯನ್ನು ಹಿಂತೆಗೆದುಕೊಳ್ಳುತ್ತದೆ ಎಂದು ವಿರೋಧ ಪಕ್ಷಗಳು ಜನತೆ ನಡುವೆ ವ್ಯಾಪಕವಾಗಿ ಸುಳ್ಳು ಪ್ರಚಾರಗಳನ್ನು ಮಾಡಿದ್ದಾರೆ. ಇದರಿಂದ ಭೀತರಾದ ಜನತೆ ರೇಷನ್ ಅಂಗಡಿಗಳನ್ನು ಲೂಟಿ ಮಾಡಲು ಮುಂದಾದರು.

ಮುಷೀರಾಬಾದ್ ಸುತ್ತಮುತ್ತಲಿನ ಸುಮಾರು 200 ಗ್ರಾಮಗಳ ಜನತೆ ಇಂತಹ ಲೂಟಿಕೋರರ ವಿರುದ್ಧ ಸಂಘಟಿತರಾಗಿ ಹಿಮ್ಮೆಟ್ಟಿಸುವಲ್ಲಿ ಯಶಸ್ವಿಯಾಗಿದ್ದಾರೆ. ಪ್ರತಿಭಟನೆಗಳನ್ನು ನಡೆಸಿದ್ದಾರೆ. ಪಡಿತರ ವ್ಯವಸ್ಥೆಯನ್ನು ಹಿಂದೆಗೆದುಕೊಳ್ಳುತ್ತಾರೆ ಎಂದು ಕಾಂಗ್ರೆಸ್‌ನವರು ಹಬ್ಬಿಸಿದ್ದ ಸುಳ್ಳು ಪ್ರಚಾರಗಳನ್ನು ಸಿಪಿಎಂ ಕಾರ್ಯಕರ್ತರು ಅಲ್ಲಗಳೆದು ಇದೆಲ್ಲ ವಿರೋಧಿಗಳ ಸುಳ್ಳು ಪ್ರಚಾರ ಎಂದು ಜನತೆಗೆ ಮನವರಿಕೆ ಮಾಡಿಕೊಟ್ಟಿದ್ದಾರೆ.

ಇಂತಹ ಸುಳ್ಳು ಪ್ರಚಾರಗಳ ವಿರುದ್ಧ ಸಿಪಿಎಂ ಪಕ್ಷ ಅಹೋರಾತ್ರಿ ಕಾರ್ಯನಿರ್ವಹಿಸುತ್ತಿದೆ. ಅದರಲ್ಲೂ ವಿಶೇಷವಾಗಿ ಪಕ್ಷದ ವಿರುದ್ಧ ಮಾಧ್ಯಮಗಳಲ್ಲಿ ಪ್ರಸಾರವಾಗುವ ಸುಳ್ಳು ಪ್ರಚಾರವನ್ನು ಹತ್ತಿಕ್ಕಲು ಸತತ ಪ್ರಯತ್ನಗಳನ್ನು ನಡೆಸಲಾಗುತ್ತಿದೆ.

ಬಿಜೆಪಿ ಮುಖಂಡರ ಗೋಡೌನ್‌ಗಳಲ್ಲಿ ಆಹಾರಧಾನ್ಯಗಳು:

ಜನಸಾಮಾನ್ಯರಿಗೆ ದೊರಕಬೇಕಾದ ಅಗತ್ಯವಸ್ತುಗಳ ಕೊರತೆಯನ್ನು ಸೃಷ್ಟಿಸುವ ದುರುದ್ದೇಶದಿಂದ ಜಿಲ್ಲಾ ಕೇಂದ್ರಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿರುವ ಬಿಜೆಪಿ ಮುಖಂಡರು ತಮ್ಮ ಗೋಡೌನ್‌ಗಳಲ್ಲಿ ಅಕ್ರಮವಾಗಿ ಆಹಾರಧಾನ್ಯಗಳನ್ನು ಸಂಗ್ರಹಿಸಿಟ್ಟಿದ್ದಾರೆ. ಬರ್ಧ್ವಾನ್ ಜಿಲ್ಲೆಯ ನಂದಿಗ್ರಾಮ ಪಂಚಾಯತಿಯ ಪುರಬಸ್ತಲಿಯಲ್ಲಿ ಇತ್ತೀಚೆಗೆ ಬಿಜೆಪಿ ಮುಖಂಡರಾದ ಮಾಣಿಕ್ ಚಕ್ರವರ್ತಿ ಮತ್ತು ಬಂಕಿಮ್‌ದಾಸ್‌ರ ಮನೆಗಳನ್ನು ತಪಾಸಣೆಗೊಳಪಡಿಸಿದಾಗ ಈ ವಿಷಯ ತಿಳಿದುಬಂದಿದೆ.

ಸ್ಥಳೀಯ ಜನತೆ ನೀಡಿದ ಸುಳಿವಿನ ಮೇರೆಗೆ ಸರ್ಕಾರಿ ಅಧಿಕಾರಿಗಳು ತಪಾಸಣೆ ನಡೆಸಿದ್ದರು. ಆಹಾರಧಾನ್ಯಗಳ ಕೊರತೆ ಸೃಷ್ಟಿಸಲು ಇಲ್ಲಿನ ಅಂಗಡಿಗಳಿಂದ ಬಿಜೆಪಿ ಮುಖಂಡರು ಒತ್ತಾಯಪೂರ್ವಕವಾಗಿ ಆಹಾರದಾನ್ಯಗಳನ್ನು ಖರೀದಿಸಿ ಶೇಖರಿಸಿಡುತ್ತಿದ್ದಾರೆ ಎಂಬ ಅಂಶ ಬೆಳಕಿಗೆ ಬಂದಿದೆ.

ಮಾಧ್ಯಮದ ಪಾತ್ರ

ಕೆಲವು ಸ್ಥಳಗಳಲ್ಲಿ ವರದಿಗಾರರಗುಂಪು ಗೂಂಡಾಗಳ ಜತೆ ಸೇರಿ ಸಿಪಿಎಂ ಕಾರ್ಯಕರ್ತರ ಮನೆಗಳಿಗೆ ಬೆಂಕಿ ಹಚ್ಚಿ ಎಂದು ಪ್ರಚೋದಿಸುವ ಕೃತ್ಯದಲ್ಲಿ ತೊಡಗಿದ್ದಾರೆ. ನಂತರ ಈ ಸನ್ನಿವೇಶಗಳನ್ನು ಸಿಪಿಎಂ ಮುಖಂಡರ ವಿರುದ್ಧ ಜನತೆ ಯಾವರೀತಿ ತಿರುಗಿಬಿದ್ದಿದ್ದಾರೆ ನೋಡಿ ಎಂದು ಪತ್ರಿಕೆ ಮಾಧ್ಯಮಗಳಲ್ಲಿ ತಿರುಚಿ ಸುದ್ದಿಪ್ರಸಾರ ಮಾಡುವುದು ಇವರ ಪಿತೂರಿಯಾಗಿದೆ.

ತೃಣಮೂಲ -ನಕ್ಸಲರ ಹಿಡಿತದಲ್ಲಿ ನಂದಿ ಗ್ರಾಮ


ತೃಣ ಮೂಲ ಮತ್ತು ನಕ್ಸಲರು ಮತ್ತೊಮ್ಮೆ ನಡೆಸಿರುವ ದಾಳಿಗಳಿಂದ ನಂದಿಗ್ರಾಮ ಮತ್ತೊಮ್ಮೆ ರಕ್ತಗ್ರಾಮವಾಗಿದೆ. ಆರು ವರ್ಷದ ಬಾಲಕಿ ಸೇರಿದಂತೆ ಇಬ್ಬರು ಮೃತಪಟ್ಟಿದ್ದು ಹದಿನಾಲ್ಕು ಮಂದಿ ಗಂಭೀರವಾಗಿ ಗಾಯಗೊಂಡಿದ್ದಾರೆ. ಅಕ್ಟೋಬರ್ 7, 8ನೇ ತಾರೀಕಿನಂದು ಮುಂಜಾನೆ ಭೂಮಾಲಿಕರ ಪರವಾದ ಸಶಸ್ತ್ರ ಗೂಂಡಾಗಳು ದೌಡ್‌ಪುರ ಮತ್ತು ರಾಣಿಚಿಕ್ ಗ್ರಾಮಗಳ ಮೇಲೆ ಬಂದೂಕುಗಳು ಮತ್ತು ಗ್ರೆನೆಡ್‌ಗಳಿಂದ ತೀವ್ರರೀತಿಯ ದಾಳಿಗಳನ್ನು ನಡೆಸಿದ್ದಾರೆ. ಇದರಿಂದ ಭೀತಗೊಂಡ ಗ್ರಾಮಗಳ ಸುಮಾರು 200 ಮಂದಿ ಮಹಿಳೆಯರು, ಮಕ್ಕಳು ತಮ್ಮ ಪ್ರಾಣಗಳನ್ನು ಉಳಿಸಿಕೊಳ್ಳಲು ಮನೆಗಳನ್ನು ಬಿಟ್ಟು ಓಡಿಹೋಗಿದ್ದಾರೆ.

ಆಂಧ್ರ : 'ಇಂದಿರಮ್ಮ' ಯೋಜನೆಯಲ್ಲಿ ವ್ಯಾಪಕ ಭ್ರಷ್ಟಾಚಾರ ಮೂರನೇ ಹಂತದ ಭೂ ಹೋರಾಟಕ್ಕೆ ಸರ್ವಸಿದ್ಧತೆ

ಎಲ್ಲ ಅರ್ಹ ಬಡವರಿಗೆ ಸರ್ಕಾರವೇ ನಿವೇಶನ ಹಂಚುತ್ತಿದೆ.
- ವೈ. ರಾಜಶೇಖರರೆಡ್ಡಿ , ಆಂಧ್ರಪ್ರದೇಶ ಮುಖ್ಯಮಂತ್ರಿ

ರಾಜ್ಯದ ಯಾವ ಗ್ರಾಮಕ್ಕಾದರೂ, ವಾರ್ಡ್‌ಗಾದರೂ ಬನ್ನಿ, ಅಕ್ರಮ - ಭ್ರಷ್ಟಾಚಾರವನ್ನು ಸಾಬೀತು ಮಾಡುತ್ತೇವೆ.
- ಬಿ.ವಿ.ರಾಘವಲು, ಸಿಪಿಐ(ಎಂ) ಮುಖಂಡರು

ಎಲ್ಲ ಅರ್ಹ ಬಡವರಿಗೆ ಇಂದಿರಮ್ಮ ಯೋಜನೆಯಡಿಯಲ್ಲಿ ಮನೆ, ನಿವೇಶನ ನೀಡುವುದಾಗಿ ಹೇಳಿಕೊಂಡು ವೈ.ಎಸ್.ರಾಜಶೇಖರ ರೆಡ್ಡಿ ನೇತೃತ್ವದ ಕಾಂಗ್ರೆಸ್ ಸರ್ಕಾರ 'ಇಂದಿರಮ್ಮ' ಯೋಜನೆ ರೂಪಿಸಿದೆ. ಆದರೆ ಈ ಯೋಜನೆ ಕೇವಲ ಪ್ರಚಾರ ಸಾಮಗ್ರಿಯಾಗಿದೆಯೇ ಹೊರತು ಅರ್ಹ ಬಡವರಿಗೆ ತಲುಪುವಲ್ಲಿ ಸಂಪೂರ್ಣ ವಿಫಲವಾಗಿದೆ.



ರೆವಿನ್ಯೂ ಸಚಿವ ದರ್ಮಾನ ಪ್ರಸಾದರಾವ್ ಮನೆ ಇರುವ ಶ್ರೀಕಾಕುಳಂನ 15ನೇ ವಾರ್ಡ್‌ನಲ್ಲೇ ಕಾಂಗ್ರೆಸ್ ಮುಖಂಡರಾದ ಪತಿಪತ್ನಿಯರಿಬ್ಬರಿಗೂ ಮನೆ ಹಂಚಿಕೆ ಮಾಡಿರುವುದು.

ಬಡವರ ಸಮೀಕ್ಷೆ ಮಾಡಲು ಆಗಮಿಸುವ ಸರ್ಕಾರಿ ಅಧಿಕಾರಿಗಳು ತಮಗೆ ಪರಿಚಯವಿರುವವ ಮನೆಯಲ್ಲಿ ಕುಳಿತು ಅವರು ಹೇಳಿದ ಹೆಸರುಗಳನ್ನು ಬರೆದುಕೊಂಡು ಅಂಕಿಅಂಶಗಳನ್ನು ಒದಗಿಸುತ್ತಿದ್ದಾರೆ. ಈ ಸಮೀಕ್ಷೆಯಲ್ಲಿ ಅತ್ಯಂತ ಮುಖ್ಯವಾದ ಮನೆ, ನಿವೇಶನ ಇಲ್ಲದ ಬಡವರ ಅಂಕಿಅಂಶಗಳನ್ನು ಸಂಗ್ರಹಿಸುವುದು ಬಿಟ್ಟು ಅನಗತ್ಯ ಮಾಹಿತಿ ಕಲೆಹಾಕಿ ಅಲ್ಲಿನ ಸರ್ಕಾರ ಬಡ ಜನತೆಗೆ ಮತ್ತೊಂದು ದ್ರೋಹ ಎಸಗುತ್ತಿದೆ. ಸಮೀಕ್ಷೆ ನಡೆಸುವ ಅಧಿಕಾರಿಗಳು ಪೂರ್ವಭಾವಿಯಾಗಿ ಪ್ರಚಾರ ನಡೆಸದೆ, ಬಡಜನರು ನೀಡುವ ಮನವಿಗಳನ್ನು ಸ್ವೀಕರಿಸದೆ ಸಮೀಕ್ಷೆಯಲ್ಲಿ ಗಂಭೀರ ದೋಷಗಳನ್ನು ಎಸಗುತ್ತಿದ್ದಾರೆ.

ಈ ಅನ್ಯಾಯವನ್ನು ವಿರೋಧಿಸಿ ಸಿಪಿಎಂ ಪಕ್ಷ ರಾಜ್ಯಾದ್ಯಂತ ಪ್ರತಿಭಟನೆಗಳನ್ನು ನಡೆಸುತ್ತಿದೆ. ಜನರು ಗ್ರಾಮೀಣ ಪ್ರದೇಶಕ್ಕೆ ಆಗಮಿಸುವ ಮಂತ್ರಿಗಳನ್ನು ನಿಲ್ಲಿಸಿ ಪ್ರಶ್ನಿಸುತ್ತಿದ್ದಾರೆ.

ಇಂದಿರಮ್ಮ ಯೋಜನೆಯಲ್ಲಿ ಯಾವುದೇ ಅಕ್ರಮಗಳು, ಲೋಪದೋಷಗಳು ನಡೆದಿಲ್ಲ ಎಂದು ಮುಖ್ಯಮಂತ್ರಿ ಸೇರಿದಂತೆ ಅವರ ಮಂತ್ರಿಮಂಡಳದ ಸಚಿವರು ಬಡಾಯಿಕೊಚ್ಚಿಕೊಳ್ಳುತ್ತಿದ್ದಾರೆ. ಆದರೆ ಸಿಪಿಎಂ ಪಕ್ಷ ರಾಜ್ಯದ ಪ್ರತಿಯೊಂದು ಗ್ರಾಮ, ವಾರ್ಡ್‌ಗಳಲ್ಲಿ ನಡೆದಿರುವ ಅಕ್ರಮಗಳನ್ನು ಎತ್ತಿ ತೋರಿಸುತ್ತಿದೆ. ಎಲ್ಲ ಮಾಹಿತಿಯನ್ನು ಇಂಟರ್‌ನೆಟ್‌ನಲ್ಲಿ ನೀಡಿರುವುದಾಗಿ ಸರ್ಕಾರ ಹೇಳುತ್ತಿದೆ. ಆದರೆ ಈ ಮಾಹಿತಿ ಸಂಪೂರ್ಣ ಸುಳ್ಳಿನಿಂದ ಕೂಡಿದೆ. ಮುಖ್ಯಮಂತ್ರಿಗಳು ಮತ್ತು ಅವರ ಸಂಘಟದ ಸದಸ್ಯರು ಯಾವುದೇ ಗ್ರಾಮ

ಪುಟ 15 ಕ್ಕೆ



ಶರತ್‌ಚಂದ್ರ

ಪುಟಿನ್ ಇರಾನ್ ಭೇಟಿ - ಅಮೆರಿಕಕ್ಕೆ ಎಚ್ಚರಿಕೆ

ರಶ್ಯಾ ಅಧ್ಯಕ್ಷ ಪುಟಿನ್ ಇರಾನ್ ಭೇಟಿ ಹಲವು ರೀತಿಯಲ್ಲಿ ಮಹತ್ವದ ಭೇಟಿಯಾಗಲಿದೆ. ಪುಟಿನ್ ಕ್ಯಾಸ್ಪಿಯನ್ ದೇಶಗಳ ಶೃಂಗಸಭೆಯಲ್ಲಿ ಭಾಗವಹಿಸುವುದು ಅಲ್ಲದೆ ಇರಾನ್‌ಗೆ ಅಧಿಕೃತ ಭೇಟಿ ನೀಡುತ್ತಿದ್ದಾರೆ. ಅಮೆರಿಕ ಇರಾನ್ ಮೇಲೆ ಯುದ್ಧ ತಯಾರಿ ನಡೆಸುತ್ತಿರುವುದಲ್ಲದೆ, ಯುದ್ಧ ಹೂಡಲು ನೆಪ ಹುಡುಕುತ್ತಿರುವ ಹಿನ್ನೆಲೆಯಲ್ಲಿ ಈ ಭೇಟಿಗೆ ಭಾರೀ ಮಹತ್ವ ಇದೆ. ಕ್ಯಾಸ್ಪಿಯನ್ ಸಮುದ್ರದ ಸುತ್ತಿನ ದೇಶಗಳ ನಾಯಕರು ತೆಹರಾನ್ ನಲ್ಲಿ ಶೃಂಗಸಭೆಯಲ್ಲಿ ಭಾಗವಹಿಸುತ್ತಿದ್ದಾರೆ. ಈ ದೇಶಗಳೆಂದರೆ ಅಜರ್ ಬೈಜಾನ್, ಇರಾನ್, ಕಜಕಿಸ್ತಾನ, ತುರ್ಕಮಾನಿಸ್ತಾನ್, ರಶ್ಯಾ. ತಮ್ಮ ದೇಶಗಳ ನೆಲವನ್ನು ಬೇರೆ ಕ್ಯಾಸ್ಪಿಯನ್ ದೇಶಗಳು ಅಥವಾ ಇತರ ದೇಶಗಳ ಮೇಲೆ ಮಿಲಿಟರಿ ದಾಳಿ ಮಾಡಲು ಬಳಸಲು ಬಿಡುವುದಿಲ್ಲ ಎಂದು ಶೃಂಗಸಭೆಯಲ್ಲಿ ನಾಯಕರು ಘೋಷಿಸಿದ್ದು ಗಮನಾರ್ಹ. ಇರಾನ್ ಉತ್ತರದ ನೆರೆ ದೇಶ ಮತ್ತು ಅಮೆರಿಕದ ಮಿಲಿಟರಿ ನೆಲೆ ಇರುವ ಅಜರ್ ಬೈಜಾನ್ ಇದರಲ್ಲಿ ಸೇರಿತ್ತು ಎಂಬುದು ಗಮನಾರ್ಹ.

ಶೃಂಗಸಭೆಯಲ್ಲಿ ನಾಯಕರು ಅಣು ಪ್ರಸರಣ ನಿಷೇಧ ಒಪ್ಪಂದದ ಸದಸ್ಯ ದೇಶಗಳಿಗೆ ಅಣು ಶಕ್ತಿ ಸಂಶೋಧನೆ, ಉತ್ಪಾದನೆ ಹಕ್ಕು ಇದೆ. ಇದನ್ನು ಆ ಬಗ್ಗೆ ಇರುವ ಅಂತರ್ರಾಷ್ಟ್ರೀಯ ನಿಯಮಗಳ ಒಳಗೆ ನಡೆಸಲು ಇರಾನ್‌ಗೆ ಹಕ್ಕು ಇದೆ. ಇರಾನ್ ಯಾವುದೇ ನಿಯಮಗಳನ್ನು ಪಾಲಿಸಿರದಿದ್ದರೆ, ಮಾತುಕತೆಗಳ ಮೂಲಕ ಅದನ್ನು ಪರಿಹರಿಸಬಹುದು ಎಂದು ಶೃಂಗಸಭೆ ಹೇಳಿಕೆ ತಿಳಿಸಿದೆ. ಇರಾನ್ ಅಣು ಶಕ್ತಿ ಕಾರ್ಯಕ್ರಮ ಅಣು ಅಸ್ತ್ರಕ್ಕೆ ಮುಖವಾಡ ಎಂಬ ಅಮೆರಿಕನ್ ಆಪಾದನೆಯನ್ನು ತಳ್ಳಿ



ಹಾಕಲಾಯಿತು. ಇರಾನ್‌ನಲ್ಲಿ ರಶ್ಯಾದ ನೆರವಿನಿಂದ ನಿರ್ಮಿಸಲಾಗುತ್ತಿರುವ ಅಣು ಶಕ್ತಿ ಸ್ಥಾವರವನ್ನು ಪೂರ್ಣಗೊಳಿಸಲು ಎಲ್ಲಾ ಸಹಕಾರ ನೀಡಲಾಗುವುದು ಎಂದು ಪುಟಿನ್ ಭರವಸೆ ನೀಡಿದರು.

ಪುಟಿನ್ ಭೇಟಿ 1943 ರಲ್ಲಿ ಎರಡನೇ ಮಹಾಯುದ್ಧ ಸಮಯದಲ್ಲಿ ನಾಜೀ-ವಿರೋಧಿ ರಂಗದ ಸಭೆಗೆ ಸ್ಟಾಲಿನ್ ಭೇಟಿ ನಂತರ, ಯಾವುದೇ ರಶ್ಯಾದ ನಾಯಕರ ಪ್ರಥಮ ಭೇಟಿ. ಇರಾನ್ ಈ ಹಿಂದೆ ಗೊರ್ಬಚೇವ್, ಯೆಲ್ಸಿನ್, ಸ್ವತ: ಪುಟಿನ್ ರಿಗೂ ಭೇಟಿಗೆ ಆಹ್ವಾನ ನೀಡಿತ್ತು. ಈ ಬಾರಿ ಪುಟಿನ್ ಆಹ್ವಾನ ಸ್ವೀಕರಿಸಿದ್ದಕ್ಕೆ ಹಲವು ರಾಜಕೀಯ ವಿವರಣೆ ನೀಡಲಾಗುತ್ತಿದೆ. ಇರಾನ್ ಮೇಲೆ ಯುದ್ಧ ಸಾರಲು ತುದಿ ಕಾಲ ಮೇಲೆ ನಿಂತಿರುವ ಅಮೆರಿಕಕ್ಕೆ ಯಾವುದೇ ನೆಪಕ್ಕೆ ಅವಕಾಶ ನೀಡುವುದನ್ನು ತಪ್ಪಿಸಲು ಪ್ರಯತ್ನಿಸುತ್ತಿದೆ. 1991 ರ ಮೊದಲ ಕೊಲ್ಲಿ ಯುದ್ಧದಿಂದ ಆರಂಭಿಸಿ ಮಧ್ಯ ಏಶ್ಯಾದಲ್ಲಿ (ಇರಾಕ್, ಲೆಬನಾನ್, ಪ್ಯಾಲೆಸ್ಟೈನ್, ಈಗ ಇರಾನ್ ನಲ್ಲಿ) ಅಮೆರಿಕ ಮನಬಂದಂತೆ ನೇರವಾಗಿ ಅಥವಾ ಇಸ್ರೇಲ್ ಅನ್ನು ಬಳಸಿ ಮಿಲಿಟರಿ ಮಧ್ಯಪ್ರವೇಶ ಮಾಡುವುದಕ್ಕೆ ರಶ್ಯಾ ಪ್ರತಿರೋಧ ತೋರಿಲ್ಲ. ಇದರಿಂದ ಅಮೆರಿಕಕ್ಕೆ ಇನ್ನಷ್ಟು ಧೈರ್ಯ ಬಂದು ರಶ್ಯಾದ ಗಡಿಯ ಸುತ್ತ ದಿಗ್ಬಂಧನ ಹಾಕುವ ವರೆಗೆ ಹೋಗಿದೆ.

ರಶ್ಯಾದ ನಿಷ್ಕ್ರಿಯತೆಯಿಂದಾಗಿ ಮಾಜಿ ಸೋವಿಯೆತ್ ಮತ್ತು ಮಧ್ಯ ಏಶ್ಯಾದ ದೇಶಗಳಲ್ಲಿ ಅದರ ಪ್ರಭಾವ ಕಡಿಮೆಯಾಗಿದೆ. ಇಡೀ ಜಗತ್ತಿನಲ್ಲಿ ಅಮೆರಿಕದ ಏಕಪಕ್ಷೀಯ ಮಿಲಿಟರಿ ಮಧ್ಯಪ್ರವೇಶದ ವಿರುದ್ಧ ಪ್ರತಿರೋಧ ತೋರಿಸಲು ಬಯಸುವ ರಶ್ಯಾ, ಅಮೆರಿಕ-ಇರಾನ್ ಬಿಕ್ಕಟ್ಟನ್ನು ಇದಕ್ಕಾಗಿ ಆಯ್ದುಕೊಂಡಿದೆ. ರಶ್ಯಾದ ಪ್ರತಿರೋಧ ಇರಾನ್ ನಲ್ಲಿ ಅಮೆರಿಕನ್ ದಾಳಿ ಮತ್ತು ಯುದ್ಧ ತಪ್ಪಿಸಿದರೆ, ಅಂತರ್ರಾಷ್ಟ್ರೀಯ ರಂಗದಲ್ಲಿ ಬಹುಪಕ್ಷೀಯತೆ ಪುನಃ ಸ್ಥಾಪಿಸಿದಂತಾಗುತ್ತದೆ. ಈ ದೃಷ್ಟಿಯಿಂದ ಪುಟಿನ್ ಪ್ರಯತ್ನ ಮಹತ್ವದ್ದಾಗಿದೆ.

ಚೀನಾದ ಕಮ್ಯುನಿಸ್ಟ್ ಪಕ್ಷದ 17 ನೇ ಮಹಾಧಿವೇಶನ ಆರಂಭ

ಚೀನಾದ ಕಮ್ಯುನಿಸ್ಟ್ ಪಕ್ಷದ 17 ನೇ ಮಹಾಧಿವೇಶನ ಆರಂಭವಾಗಿ 7 ದಿನಗಳ ಕಾಲ ನಡೆಯಲಿದೆ. ಎರಡು ಸಾವಿರಕ್ಕೂ ಹೆಚ್ಚು ಪ್ರತಿನಿಧಿಗಳು ಮಹಾಧಿವೇಶನದಲ್ಲಿ ಭಾಗವಹಿಸುತ್ತಿದ್ದು, ಮುಂದಿನ ಅವಧಿಗೆ ಚೀನಾದ ಬೆಳವಣಿಗೆಯ ದಾರಿ, ರಣನೀತಿ, ರಾಜಕೀಯ-ಆರ್ಥಿಕ-ಸಾಮಾಜಿಕ ನೀತಿಗಳು ಮತ್ತು ಗುರಿಗಳನ್ನು ಮಹಾಧಿವೇಶನ ನಿರ್ಧರಿಸುತ್ತದೆ. ಪಕ್ಷದ ಪ್ರಧಾನ ಕಾರ್ಯದರ್ಶಿ ಹು ಜಿಂತಾವೊ ಮಹಾಧಿವೇಶನಕ್ಕೆ ವರದಿ ಮಂಡಿಸುತ್ತಾ ತಲಾ ಒಟ್ಟು ಉತ್ಪಾದನೆಯನ್ನು 2020 ರ ಹೊತ್ತಿಗೆ, 2000 ಮಟ್ಟದ ನಾಲ್ಕು ಪಟ್ಟುಗೊಳಿಸುವ ಗುರಿಯನ್ನು ಮುಂದಿಟ್ಟರು. ಇದು 17 ನೇ ಮಹಾಧಿವೇಶನದಲ್ಲಿ ಒಟ್ಟು ಉತ್ಪಾದನೆಯನ್ನು ನಾಲ್ಕು ಪಟ್ಟುಗೊಳಿಸುವ



ಗುರಿಗಿಂತ ಹೆಚ್ಚು ಕಷ್ಟದಾಯಕ. ಈ ಗುರಿಯನ್ನು ಸಂಪನ್ಮೂಲಗಳ ಬಳಕೆಯನ್ನು ಕಡಿಮೆ ಮಾಡಿ ಮತ್ತು ಪರಿಸರ ರಕ್ಷಣೆಯ ಜತೆ ಸಾಧಿಸಬೇಕಾಗಿದೆ. ಇದು ಇನ್ನಷ್ಟು ಹೆಚ್ಚು ಕಷ್ಟದಾಯಕ.


ಚೀನಾದ ತ್ವರಿತ ಬೆಳವಣಿಗೆ ಜತೆ ಜನವಿಭಾಗಗಳ, ನಗರ-ಗ್ರಾಮೀಣ, ಪ್ರಾಂತ್ಯಗಳ ನಡುವೆ ಬೆಳೆದಿರುವ ಆದಾಯದ ಅಸಮಾನತೆಗಳನ್ನು ಕಡಿಮೆ ಮಾಡಬೇಕು. ಜನತೆಯ ಜೀವನ ಮಟ್ಟ ಎತ್ತರಿಸುವತ್ತ ಶಿಕ್ಷಣ, ಆರೋಗ್ಯ, ಗೃಹ ಸೌಲಭ್ಯ, ಇತರ ಸಾಮಾಜಿಕ ಸೇವೆಗಳನ್ನು ವಿಸ್ತರಿಸಬೇಕು. ಎಲ್ಲಾ ಹಂತಗಳಲ್ಲಿ ಪ್ರಜಾಪ್ರಭುತ್ವ ವಿಸ್ತರಿಸಬೇಕು. ಸರಕಾರ ಮತ್ತು ಪಕ್ಷದಲ್ಲಿ ಭ್ರಷ್ಟಾಚಾರ ಮತ್ತು ಇತರ ರೂಪದ ಅಶಿಸ್ತುಗಳ (2006 ಒಂದೇ ವರ್ಷದಲ್ಲಿ ಶಾಂಘಾಯ್ ಪಕ್ಷದ ಕಾರ್ಯದರ್ಶಿಯ ವಜಾ ಸೇರಿದಂತೆ 9 ಸಾವಿರ ಅಧಿಕಾರಿಗಳ) ವಿರುದ್ಧ ಕಠಿಣ ಕ್ರಮಗಳನ್ನು ಮುಂದುವರೆಸಬೇಕು. ದೇಶದ ಸೈನ್ಯವನ್ನು ಆಧುನಿಕೀಕರಿಸುವ ಪ್ರಕ್ರಿಯೆಯನ್ನು ತೀವ್ರವಾಗಿ ಮುಂದುವರೆಸಬೇಕು. ತೈವಾನ್ ನಲ್ಲಿ ಪ್ರತ್ಯೇಕತಾವಾದಿ ಚಟುವಟಿಕೆ ಹೆಚ್ಚುತ್ತಿದ್ದರೂ, ಮಾತುಕತೆಗಳ ಮೂಲಕ ಚೀನಾದ ಐಕ್ಯತೆ ಸಾಧಿಸುವ ಪ್ರಯತ್ನ ಮುಂದುವರೆಸಬೇಕು. ಇವು ಹು ಜಿಂತಾವೊ ಮಹಾಧಿವೇಶನದ ಮುಂದಿಟ್ಟ ಗುರಿಗಳು.

ಇರಾಕ್‌ನಲ್ಲಿ ಬ್ಲಾಕ್ ವಾಟರ್ ಹಗರಣ

ಅಮೆರಿಕನ್ ಸರ್ಕಾರ ಯುದ್ಧ ಮತ್ತು ಅಂತರ್ರಾಷ್ಟ್ರೀಯ ಮಿಲಿಟರಿ ಕಾರ್ಯಾಚರಣೆಗಳ ಹಲವು ಭಾಗಗಳನ್ನು ಖಾಸಗೀಕರಿಸಿದೆ. ಈ ಕ್ರಮ ಅಧ್ಯಕ್ಷ ಬುಶ್ ರ ಮತ್ತು ಉಪಾಧ್ಯಕ್ಷ ಚೇನಿ ಮಿತ್ರರಿಗೆ ಸೂಪರ್ ಲಾಭ ಮಾಡುವುದಕ್ಕೆ ಮಾತ್ರವಲ್ಲ. ಅಮೆರಿಕದ ಮತ್ತು ಅಂತರ್ರಾಷ್ಟ್ರೀಯ ಕಾನೂನುಗಳಿಂದ ತಪ್ಪಿಸಿಕೊಳ್ಳುವುದೂ ಇದರ ಉದ್ದೇಶ. ಇರಾಕ್‌ನಲ್ಲಂತೂ ಖಾಸಗೀ ಕಂಪನಿಗಳನ್ನು ಭದ್ರತಾ ಕೆಲಸಗಳಿಗೆ ವ್ಯಾಪಕವಾಗಿ ಬಳಸಲಾಗಿದೆ. ಬ್ಲಾಕ್ ವಾಟರ್ ಎಂಬುದು ಇಂತಹ ಒಂದು ಕಂಪನಿ. ಸೆಪ್ಟೆಂಬರ್ 16 ರಂದು ಬಾಗ್ದಾದ್ ನಲ್ಲಿ ಯಾವುದೇ ಪ್ರಚೋದನೆ ಇಲ್ಲದೆ, ಹುಚ್ಚಾಪಟ್ಟೆ ಗುಂಡು ಹಾರಿಸಿ 17 ಜನ ಅಮಾಯಕ ನಾಗರಿಕರ ಕಗ್ಗೊಲೆ ಮಾಡಿದ್ದು ಭಾರೀ ಸುದ್ದಿ ಮಾಡಿದೆ. ಅಮೆರಿಕ ಇರಾಕ್ ಎರಡೂ ದೇಶಗಳಲ್ಲೂ ತೀವ್ರ ಸಾರ್ವಜನಿಕ ಆಕ್ರೋಶಕ್ಕೆ ಕಾರಣವಾಗಿದೆ. ಇರಾಕ್‌ನಲ್ಲಿ ದಿನಾ ನರಮೇಧದ 'ಉಸ್ತುವಾರಿ' ಮಾಡುತ್ತಿರುವ ಎರಡೂ ದೇಶದ ಸರಕಾರಗಳು ಎಚ್ಚೆತ್ತು ವಿಚಾರಣೆಗೆ ಆಜ್ಞೆ ಮಾಡಬೇಕಾಗಿದೆ. ಬ್ಲಾಕ್ ವಾಟರ್ ಒಂದು ಹಗರಣದ ರೂಪ ಪಡೆದಿದೆ.

ಇರಾಕ್ ಸರಕಾರ ಅಮೆರಿಕನ್ ಖಾಸಗಿ ಭದ್ರತಾ ಕಂಪನಿಗಳ ಸಿಬ್ಬಂದಿಗಳ ಅಪರಾಧಗಳಿಗೆ ಇರಾಕಿ ಕಾನೂನು ಪ್ರಕಾರ ಶಿಕ್ಷೆ ಆಗಬೇಕೆಂದು ನಿರ್ಧರಿಸಿದೆ. ಸದ್ಯಕ್ಕೆ ಈ ಖಾಸಗಿ ಭದ್ರತಾ ಕಂಪನಿಗಳ ಸಿಬ್ಬಂದಿಗಳಿಗೆ ಅಮೆರಿಕ-ಇರಾಕ್ ಎರಡೂ ದೇಶಗಳ ಕಾನೂನು ಅನ್ವಯಿಸುವುದಿಲ್ಲ. 2003 ರಲ್ಲಿ ಇರಾಕಿ ಗವರ್ನರ್ ಹೊರಡಿಸಲಾದ ಸುಗ್ರೀವಾಜ್ಞೆ ಮತ್ತು 2004 ರಲ್ಲಿ ಮಂಜೂರಾದ ಕಾನೂನು ಪ್ರಕಾರ ಇರಾಕಿ ಕಾನೂನು ಅಮೆರಿಕದ ಖಾಸಗಿ ಭದ್ರತಾ ಕಂಪನಿಗಳ ಸಿಬ್ಬಂದಿಗಳಿಗೆ ಅನ್ವಯಿಸುವುದಿಲ್ಲ. ಈ ಕಾನೂನನ್ನು ಬದಲಾಯಿಸುವ ಧಾರ್ಷ್ಟ್ಯ ಇರಾಕಿ ಸರ್ಕಾರ ತೋರಿಸೀತೆ ?

ಆದರೆ ಬ್ಲಾಕ್ ವಾಟರ್ ಅಥವಾ ಇತರ ಇಂತಹ ಖಾಸಗಿ ಭದ್ರತಾ ಕಂಪನಿಗಳ ಸಿಬ್ಬಂದಿಗಳು ಬೇಕಾಬಿಟ್ಟಿ ನರಮೇಧದಲ್ಲಿ ತೊಡಗುವುದು ಅಪರೂಪವೂ ಅಲ್ಲ. ಇತ್ತೀಚಿನದ್ದೂ ಅಲ್ಲ. 2005 ರಿಂದ ಈಚೆಗೆ 195 ಇಂತಹ ನರಮೇಧ ಬ್ಲಾಕ್ ವಾಟರ್ ಸಿಬ್ಬಂದಿಗಳಿಂದ ಆಗಿದೆ. ಇಂತಹ ಘಟನೆಗಳಲ್ಲಿ ಶೇ. 84 ರಲ್ಲಿ ಬ್ಲಾಕ್ ವಾಟರ್ ಸಿಬ್ಬಂದಿಗಳೇ ಮೊದಲು ಗುಂಡು ಹಾರಿಸಿದ್ದಾರೆ. ಇರಾಕ್‌ನಲ್ಲಿ ಇರುವ ಬ್ಲಾಕ್ ವಾಟರ್ 850 ಸಿಬ್ಬಂದಿಯಲ್ಲಿ 122 ಜನರನ್ನು ವಿವಿಧ ರೀತಿಯ ಅಶಿಸ್ತಿಗೆ ಕೆಲಸದಿಂದ ತೆಗೆದು ಹಾಕಲಾಗಿದೆ. ಈ ಅಶಿಸ್ತುಗಳಲ್ಲಿ - ಶಸ್ತ್ರಗಳ ದುರುಪಯೋಗ, ಮದ್ಯಪಾನ-ಮಾದಕ ದ್ರವ್ಯ ಸಂಬಂಧಿ ಅತಿರೇಕಗಳು ಮತ್ತು ಹಿಂಸಾತ್ಮಕ ಅಪರಾಧಗಳು - ಸೇರಿವೆ. ಸಾಲದ್ದಕ್ಕೆ ಹಲವು ಇಂತಹ ಘಟನೆಗಳನ್ನು ಮುಚ್ಚಿ ಹಾಕಲು ಸತ್ತವರ ಸಂಬಂಧಿಗಳಿಗೆ ದುಡ್ಡು ಕೊಟ್ಟಿದೆ. ಬ್ಲಾಕ್ ವಾಟರ್ ನ ಈ ಅತಿರೇಕಗಳು ಈಗಾಗಲೇ ವಿದೇಶ ಮತ್ತು ರಕ್ಷಣಾ ಇಲಾಖೆಗೆ ಗೊತ್ತಿದ್ದರೂ, ಯಾವುದೇ ಕ್ರಮ ಜರುಗಿಸಿಲ್ಲ. ಕಾಂಟ್ರಾಕ್ಟ್ ನವೀಕರಣ ಆಗುತ್ತಾ ಬಂದಿದೆ. ಬ್ಲಾಕ್ ವಾಟರ್ ಸಿಬ್ಬಂದಿಯ ವಾರ್ಷಿಕ ವೆಚ್ಚ ನಾಲ್ಕುವರೆ ಲಕ್ಷ ಡಾಲರುಗಳು. ಇದು ಅಮೆರಿಕದ ಸೈನಿಕನಿಗೆ ಆಗುವ ವಾರ್ಷಿಕ ವೆಚ್ಚದ ಆರು ಪಟ್ಟು. ಬ್ಲಾಕ್ ವಾಟರ್ 2001 ರಿಂದ ಈ ವರೆಗೆ ಅಮೆರಿಕನ್ ಸರಕಾರದಿಂದ ಸುಮಾರು 100 ಕೋಟಿ ಡಾಲರ್ ಕಾಂಟ್ರಾಕ್ಟ್ ನಲ್ಲಿ ಪಡೆದಿದೆ. ಇವೆಲ್ಲಾ ಸೆಪ್ಟೆಂಬರ್ ನರಮೇಧದ ವಿಚಾರಣೆ ಮಾಡಿ ಅಮೆರಿಕದ ಸೆನೆಟ್ ಸಮಿತಿ ತನ್ನ ವರದಿಯಲ್ಲಿ ಹೇಳಿರುವ ಅಂಶಗಳು. ವಿದೇಶ ಮತ್ತು ರಕ್ಷಣಾ ಇಲಾಖೆಯನ್ನು ಸಮಿತಿ ಕಟುವಾಗಿ ಟೀಕಿಸಿದೆ. ಇದರ ಅರ್ಥ ಕಾನೂನು ಬಾಹಿರ ಕಾರ್ಯಾಚರಣೆಗಳಿಗೆ ಅಮೆರಿಕದ ಸರಕಾರಕ್ಕೆ ಯಾವುದೇ ಕಾನೂನಿನ ಭಾಧ್ಯತೆ ಇಲ್ಲದಿರುವ ಗೂಂಡಾ ಪಡೆ ಬೇಕಾಗಿದೆ ಅಂತ.



ಗ್ರೀಸ್ ಚುನಾವಣೆಗಳಲ್ಲಿ ಕಮ್ಯುನಿಸ್ಟ್ ಪಕ್ಷಕ್ಕೆ ಮುನ್ನ...

ಕಳೆದ ತಿಂಗಳು ಗ್ರೀಸ್ ಪಾರ್ಲಿಮೆಂಟಿಗೆ ನಡೆದ ಚುನಾವಣೆಗಳಲ್ಲಿ ಗ್ರೀಕ್ ಕಮ್ಯುನಿಸ್ಟ್ ಪಕ್ಷ 1990 ರ ನಂತರ ಅತ್ಯಂತ ಹೆಚ್ಚಿನ ಮುನ್ನಡೆ ಸಾಧಿಸಿದೆ. ಪಕ್ಷ ಶೇ. 8.2 ಮತ ಗಳಿಸಿ ತನ್ನ ಸೀಟುಗಳ ಸಂಖ್ಯೆಯನ್ನು ಇಮ್ಮಡಿಗೊಳಿಸಿಕೊಂಡಿದೆ. ಸುಮಾರು ಶೇ. 2.2 ರಷ್ಟು ಮತ ಏರಿಕೆ ಸಹ ಸಾಧಿಸಿದೆ. ದೇಶದ ಪ್ರಮುಖ ಎರಡು ಪಕ್ಷಗಳ ಮತ ಗಳಿಕೆಯಲ್ಲಿ ಇಳಿತ ಕಂಡು ಬಂದಿದ್ದು, ಎರಡು-ಪಕ್ಷ ಪದ್ಧತಿ ತರುವ ಆಳುವ ಪಕ್ಷಗಳ ಕ... ಏಟು ಕೊಟ್ಟಿದೆ. ಇತರ ಎಲ್ಲಾ ಪಕ್ಷಗಳ ... ಗಳಿಕೆ ಏರಿದೆ. ದೊಡ್ಡ ನಗರ ಪ್ರದೇಶಗಳಲ್ಲಿ ಕಾ... ವರ್ಗ ಮತ್ತು ಯುವಕರ ಮಧ್ಯೆ ಪಕ್ಷ ಹೆಚ್ಚಿನ ಬೆಂ... ಗಳಿಸಿರುವುದು. ಇದು ಉತ್ತಮ ಬೆಳ... ಎಂದಿದೆ ಗ್ರೀಕ್ ಕಮ್ಯುನಿಸ್ಟ್ ಪಕ್ಷ ಚುನಾ... ಫಲಿತಾಂಶ ವಿಶ್ಲೇಷಿಸುತ್ತಾ.

ಕ್ರೀಡಾರಂಗ

ರಾಜ್ಯ ದಸರಾ ಕ್ರೀಡಾ ಕೂಟ

ಮೈಸೂರಿನಲ್ಲಿ ಸಾಂಪ್ರದಾಯಿಕ ದಸರಾ ಹಬ್ಬದ ಪ್ರಯುಕ್ತ ರಾಜ್ಯ ಮಟ್ಟದ ದಸರಾ ಕ್ರೀಡಾಕೂಟ ನಡೆಯಿತು.

ಇಲ್ಲಿನ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ವಿಶ್ವ ಮಹಿಳಾ ಬಿಲಿಯರ್ಡ್ಸ್ ಚಾಂಪಿಯನ್ ಚಿತ್ರ ...ಮೈರಾಜ್ ಕ್ರೀಡಾಕೂಟಕ್ಕೆ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಅಥ್ಲೆಟಿಕ್ ಸೇರಿದಂತೆ ಎಲ್ಲಾ ವಿಧದ ಕ್ರೀಡೆಗಳು ನಡೆಯುತ್ತವೆ. ಇದರಲ್ಲಿ ರಾಜ್ಯದ ಎಲ್ಲಾ ಕಡೆಗಳಿಂದಲೂ ಸುಮಾರು 2 ಸಾವಿರಕ್ಕೂ ಹೆಚ್ಚಿನ ಕ್ರೀಡಾಪಟುಗಳು ಭಾಗವಹಿಸಿದ್ದಾರೆ.

ಕುಸ್ತಿ ವಿಭಾಗದಲ್ಲಿ ಬೆಳಗಾವಿಯ ಪೈಲ್ವಾನ್‌ರು 10 ರಲ್ಲಿ 6 ಪ್ರಶಸ್ತಿಗಳನ್ನು ಗಳಿಸಿ ಏಕಸ್ವಾಮ್ಯ ಸಾಧಿಸಿದರು.

...ದಸರಾ ಕಂಠೀರವ ಪ್ರಶಸ್ತಿಯನ್ನು ಧಾರವಾಡದ ಕೆ.ಜಿ. ಆನಂದ್ (84 ಕೆ.ಜಿ.ವಿಭಾಗ) 'ದಸರಾ ಕೇಸರಿ'ಪ್ರಶಸ್ತಿಯನ್ನು ಬೆಳಗಾವಿಯ ಸಚಿನ್ ಪಡತಾರೆ(74 ಕೆ.ಜಿ.ವಿಭಾಗ) ಪ್ರಶಸ್ತಿಗಳನ್ನು ಪಡೆದರೆ, ಧಾರವಾಡದ ವೆಂಕಟೇಶ್ ಪಾಟೀಲ್ 'ದಸರಾ ಕಿಶೋರ' ಬೆಳಗಾವಿಯ ಸರಗಪ್ಪ ಹನಗೋಜಿ 'ದಸರಾ ಕುಮಾರ' ಪ್ರಶಸ್ತಿಗಳನ್ನು ಪಡೆದರು.



ಬೆಳಗಾವಿಯ ಕ್ರೀಡಾ ವಸತಿ ನಿಲಯದ ಕುಸ್ತಿಪಟುಗಳು ಹೆಚ್ಚಿನ ಪ್ರಶಸ್ತಿಗಳನ್ನು ಗೆದ್ದರು.

ಈ ಸಂದರ್ಭದಲ್ಲಿ ಮಹಿಳಾ ವಿಭಾಗದಲ್ಲಿ ಮೈಸೂರಿನ ತ್ರಿಕೋಣಿ ಎಂ.ಇ. 800 ಮೀ. ಓಟದಲ್ಲಿ ಚಿನ್ನ ಗೆದ್ದರೆ, ಪುರುಷರ ವಿಭಾಗದಲ್ಲಿ ಬೆಂಗಳೂರಿನ ಕೆ.ಶ್ರೀನಿವಾಸ್ ಚಿನ್ನ ಪಡೆದರು.

ಜಿಮ್ನಾಸ್ಟಿಕ್ಸ್ ಸ್ಪರ್ಧೆಯಲ್ಲಿ ಪುರುಷರ ವಿಭಾಗದಲ್ಲಿ ಬೆಳಗಾವಿಯ ವಿನಾಯಕ ಚೌಹಾಣ್ ಮತ್ತು ಮಹಿಳಾ ವಿಭಾಗದಲ್ಲಿ ಬೆಳಗಾವಿಯ ಸೌಮ್ಯವಾಗೋಚಿ ಬಂಗಾರ ಗೆದ್ದರು. ಜಾವಲಿನ್ ಸ್ಪರ್ಧೆಯಲ್ಲಿ ಶರತ್‌ರಾಜ್ ಸ್ವರ್ಣ ಪದಕ ಗೆದ್ದರು.



ಇತ್ತೀಚಿಗೆ ರಾಜ್ಯ ಟೇಬಲ್ ಟೆನಿಸ್ ಜೂನಿಯರ್ ಚಾಂಪಿಯನ್ ಟೂರ್ನಿ ಗುಲ್ಬರ್ಗಾದಲ್ಲಿ ನಡೆಯಿತು. ಇದರಲ್ಲಿ ಬಾಲಕಿ ಬಾಲಕರ ವಿಭಾಗದಲ್ಲಿ ಕ್ರಮವಾಗಿ ಬೆಂಗಳೂರಿನ ಎನ್.ನಿಸರ್ಗ ಮತ್ತು ಅನಿರ್ಬಾನ್ ತರಫ್ದಾರ್ ಸಿಂಗಲ್ಸ್ ಪ್ರಶಸ್ತಿಗಳನ್ನು ತನ್ನದಾಗಿಸಿಕೊಂಡರು.

ಕರಾಟೆ : ಸುಜುಕಿ ಕಪ್ ರಾಷ್ಟ್ರೀಯ ಓಪನ್ ಕರಾಟೆ ಚಾಂಪಿಯನ್ ಟೂರ್ನಿ ಬೆಂಗಳೂರಿನ ಕೋರಮಂಗಲ ಒಳಾಂಗಣ ಕ್ರೀಡಾಂಗಣದಲ್ಲಿ ನಡೆಯಿತು. ಮಹಿಳಾ ವಿಭಾಗದ ಬ್ಲಾಕ್‌ಬೆಲ್ಟ್ 'ಕುಮಿಟೆ' ವಿಭಾಗದಲ್ಲಿ ಸೆಲ್ಫ್ ಡಿಫೆನ್ಸ್ ಸ್ಕೂಲ್ ಆಫ್ ಇಂಡಿಯನ್ ಕರಾಟೆ ತಂಡದ ತಾರಾ ಲೋಲನಾಥ್ ಚಿನ್ನದ ಪದಕ ಪಡೆದು ಚಾಂಪಿಯನ್ ಆಗಿ ಹೊರಹೊಮ್ಮಿದರು. ವಾಡೋ ಅಂತರರಾಷ್ಟ್ರೀಯ ಕರಾಟೆ ಸಂಸ್ಥೆ ಈ ಟೂರ್ನಿಯನ್ನು ಆಯೋಜಿಸಿತ್ತು.

ಶ್ರೀರಂಗನಾಯಕ ಪಾವಗಡ

ಭಾರತಕ್ಕೆ 14ನೇ ಅಂತರಾಷ್ಟ್ರೀಯ ಶಾಲೆಗಳ ವಿಶ್ವಕಪ್ ರಗ್ಬಿ ಪ್ರಶಸ್ತಿ

ಒರಿಸ್ಸಾದ ಕಳಿಂಗ ಸಮಾಜವಿಜ್ಞಾನ ಸಂಸ್ಥೆ (ಕೆಐಎಸ್‌ಎಸ್) 14 ವರ್ಷದೊಳಗಿನ ಶಾಲಾ ಬಾಲಕರು ಈ ಸಾಧನೆ ಮಾಡಿದ ಪ್ರಥಮರೆಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಲಂಡನ್‌ನಲ್ಲಿ ನಡೆದ ಈ ಟೂರ್ನಿಯಲ್ಲಿ ನಮ್ಮ ದೇಶದ ರಗ್ಬಿ ಬಾಲಕರ ತಂಡ ಫೈನಲ್ ಪಂದ್ಯದಲ್ಲಿ 19-5ರ ಅಂತರದಲ್ಲಿ ದಕ್ಷಿಣ ಆಫ್ರಿಕಾವನ್ನು ಸೋಲಿಸಿ ಪ್ರಶಸ್ತಿಯನ್ನು ತನ್ನದಾಗಿಸಿಕೊಂಡಿದೆ. ಈ ಸಾಧನೆ ಮಾಡಿದವರು ಒರಿಸ್ಸಾದ ಬುಡಕಟ್ಟು ಬಾಲಕರೆಂಬುದು ದೇಶಜನಕ್ಕೆ ಮೂಗಿನ ಮೇಲೆ ಬೆರಳಿಟ್ಟುಕೊಳ್ಳುವಂತೆ ಮಾಡಿದೆ.

ಆಂಧ್ರ: ಇಂದಿರಮ್ಮ

ಪುಟ 13 ರಿಂದ

ವಾರ್ಡ್‌ಗೆ ಬಂದರೂ ಸರಿ ಅಲ್ಲಿ ನಡೆದಿರುವ ಅಕ್ರಮಗಳನ್ನು ಎತ್ತಿ ತೋರಿಸುವುದಾಗಿ ಪಕ್ಷದ ರಾಜ್ಯ ಕಾರ್ಯದರ್ಶಿ ಬಿ.ವಿ.ರಾಘವುಲು ಸವಾಲೆಸೆದಿದ್ದಾರೆ.

ಶ್ರೀಕಾಕುಳಂನ 15ನೇ ವಾರ್ಡ್‌ನಲ್ಲಿ 88 ಅರ್ಹ ಕುಟುಂಬಗಳಿವೆ ಎಂದು ಅಂಕಿಅಂಶಗಳು ಹೇಳುತ್ತಿವೆ. ಆದರೆ ಅಲ್ಲಿ 187 ಅರ್ಹ ಕುಟುಂಬಗಳಿವೆ. ರಾಜ್ಯದ ಸಚಿವರೊಬ್ಬರ ಮನೆ ಸಹ ಇದೇ ವಾರ್ಡ್‌ನಲ್ಲಿದೆ. ಮತ್ತೊಂದು ಹಾಸ್ಯಾಸ್ಪದ ಸಂಗತಿ ಎಂದರೆ ಇದೇ ವಾರ್ಡ್‌ನಲ್ಲಿ ಮೇಲ್ದರ್ಜೆಯ ಕುಟುಂಬವೊಂದರ ಪತಿಪತ್ನಿಯರಿಬ್ಬರಿಗೂ ಮನೆ ಮಂಜೂರು ಮಾಡಲಾಗಿದೆ. ಇಂತಹ ಪ್ರಕರಣಗಳು ರಾಜ್ಯಾದ್ಯಂತ ತುಂಬಿ ಹೋಗಿವೆ. ಇಂದಿರಮ್ಮ ಯೋಜನೆ ಅರ್ಹ ಬಡವರಿಗೆ ಸಿಗುವುದಕ್ಕಿಂತಲೂ ಹೆಚ್ಚಾಗಿ ಉಳ್ಳವರಿಗೇ ದಕ್ಕುತ್ತಿದೆ. ಹೇಗಿದೆ ವೈ.ಎಸ್ ಆಡಳಿತ ವೈಖರಿ.

'ಜೈಲ್ ಭರೋ'

ಮೂರನೆ ಹಂತದ ಭೂಮಿ ಹೋರಾಟಕ್ಕೆ ಸಿದ್ಧತೆ

ಈ ಮಧ್ಯೆ ಎಡಪಕ್ಷಗಳ ನೇತೃತ್ವದ ಭೂಮಿ ಆಂದೋಲನದ ಮೂಲಕ ಬಡವರು 2 ಲಕ್ಷ ಎಕರೆಯಷ್ಟೆ ಸರ್ಕಾರಿ ಭೂಮಿಯನ್ನು ವಶಕ್ಕೆ ತೆಗೆದುಕೊಂಡಿದ್ದು ಈಗ ಅಕ್ಟೋಬರ್ 23 ರಿಂದ 3ನೇ ಹಂತದ ಹೋರಾಟ ನಡೆಯಲಿದೆ.

ಹೋರಾಟ ದಮನಿಸುವ ಸರ್ಕಾರದ ಧೋರಣೆ ಹಾಗೇ ಮುಂದುವರೆದಿದೆ. ಇತ್ತೀಚೆಗೆ ಇಬ್ರಾಹಿಂ ಪಟ್ಟಣದಲ್ಲಿ 723 ಸಿಪಿಎಂ ಮುಖಂಡರು ಮತ್ತು ಕಾರ್ಯಕರ್ತರ ವಿರುದ್ಧ ಭೂಮಿ ಆಕ್ರಮಣ ಮೊಕದ್ದಮೆಗಳನ್ನು ದಾಖಲಿಸಲಾಗಿದೆ. ಇಲ್ಲಿ ರಾಜ್ಯ ಕಾರ್ಯದರ್ಶಿ ರಾಘವುಲು ವಿರುದ್ಧವೇ ಭೂಆಕ್ರಮಣ ಮೊಕದ್ದಮೆ ದಾಖಲಿಸಲಾಗಿದೆ. ಚಂಡುಮೈಲಾರಂ, ಪೊಲ್ಕಂಪಲ್ಲಿ, ನೆರ್ರಪಲ್ಲಿ, ವಿನೋಭಾನಗರ್, ಮಂಗಲ್‌ಪಲ್ಲಿ, ಪಟೇಲ್‌ಗೂಡ, ಸಿವಿಆರ್ ಕಾಲೇಜು ಪ್ರದೇಶಗಳಲ್ಲಿ ಸರ್ಕಾರಿ ಭೂಮಿಯನ್ನು ಆಕ್ರಮಿಸಿಕೊಳ್ಳಲು ಮುಂದಾದ ಕಾರ್ಯಕರ್ತರ ವಿರುದ್ಧ ಮೊಕದ್ದಮೆಗಳನ್ನು ಹೂಡಲಾಗಿದೆ.

ಯಾಚಾರಂ ಮಂಡಲ್‌ನಲ್ಲಿ 446 ಮಂದಿ ವಿರುದ್ಧ ಮೊಕದ್ದಮೆ ದಾಖಲಿಸಲಾಗಿದೆ. ಕಪ್ಪಡ್ ಗ್ರಾಮದಲ್ಲಿ ಬಡವರ ಪರ ನ್ಯಾಯಾಲಯ ತೀರ್ಪು ನೀಡಿದ್ದರೂ ತಮ್ಮ ಭೂಮಿಯನ್ನು ಪ್ರವೇಶಿಸಿದಾಗ ಅವರ ವಿರುದ್ಧವೂ ದೂರುಗಳನ್ನು ದಾಖಲಿಸಲಾಗಿದೆ. ಮಂಗಲ್‌ಪಲ್ಲಿ, ಪಟೇಲ್‌ಗೂಡ್‌ನಲ್ಲಿ 242ಮಂದಿ ವಿರುದ್ಧ ಮೊಕದ್ದಮೆ ದಾಖಲಿಸಲಾಗಿದೆ. ಎಲ್ಲ ಪ್ರದೇಶಗಳಲ್ಲೂ ಸಿಪಿಎಂ ಪಕ್ಷದ ನೇತೃತ್ವದಲ್ಲಿ ಭೂಮಿ ಆಕ್ರಮಣ ಹೋರಾಟಗಳನ್ನು ನಿರಂತರವಾಗಿ ಮುಂದುವರೆಸಲಾಗಿದೆ. ಈ ಹೋರಾಟ ಇಡೀ ರಾಜ್ಯವ್ಯಾಪಿ ಇನ್ನಷ್ಟು ವಿಸ್ತರಿಸಲಿದೆ.

ಒಂದೆಡೆ ರಿಯಲ್ ಎಸ್ಟೇಟ್ ಕುಳಗಳಿಗೆ ಕೋಟ್ಯಾಂತರ ರೂ. ಬೆಲೆಬಾಳುವ ಭಾರಿ ಪ್ರಮಾಣದ ಭೂಮಿಯನ್ನು ನೀಡುತ್ತಿರುವ ಸರ್ಕಾರ ಬಡವರಿಗೆ ನಿವೇಶನ ನೀಡುವ ಬಯಕೆ ಹೊಂದಿಲ್ಲ. ಇದನ್ನು ವಿರೋಧಿಸಿ ಅಕ್ಟೋಬರ್ 23ರಿಂದ ಮೂರನೆ ಹಂತದ ಹೋರಾಟಗಳಿಗೆ ಚಾಲನೆ ನೀಡಲಾಗುತ್ತಿದೆ. ಇದರಲ್ಲಿ ಲಕ್ಷಾಂತರ ಮಂದಿ ಬಡವರು ಪಾಲ್ಗೊಳ್ಳಲಿದ್ದಾರೆ. ಈ ಡಿವೈಎಫ್‌ಐನ ಸೇರಿದಂತೆ ವಿವಿಧ ಸಾಮೂಹಿಕ ಸಂಘಟನೆಗಳ ವಿವಿಧ ರಾಜ್ಯಗಳ ಮುಖಂಡರೂ, ಸಿಪಿಐ(ಎಂ) ಪಕ್ಷದ ಪಾಲಿಟ್ ಬ್ಯೂರೋ, ಕೇಂದ್ರ ಸಮಿತಿ ಸದಸ್ಯರೂ ನೇರವಾಗಿ ಪಾಲ್ಗೊಳ್ಳುತ್ತಿದ್ದಾರೆ.

ಹಾಲಿಗೆ ರಫ್ತಿನ ಹಾಲಾಹಲ



ಜಗತ್ತಿನಲ್ಲೇ ಅತ್ಯಂತ ಹೆಚ್ಚು ಹೈನು ರಾಸುಗಳಿರುವ ದೇಶ ಭಾರತ. ಈ ಸಾಲಿನ ಉತ್ಪಾದನೆಯನ್ನು ತೆಗೆದುಕೊಂಡರೆ ಜಗತ್ತಿನ ಅತಿ ದೊಡ್ಡ ಹಾಲು ಉತ್ಪಾದಿಸುವ ದೇಶ ಭಾರತ. ಉತ್ಪಾದನೆಯಲ್ಲಿ ಯುರೋಪಿನ ಒಕ್ಕೂಟ ಹೊರತುಪಡಿಸಿದರೆ ಭಾರತಕ್ಕೆ ಮೊದಲ ಸ್ಥಾನ. ಹಿಂದೆ ಈ ಸ್ಥಾನ ಪಡೆದಿದ್ದ ಅಮೆರಿಕಾ ಈಗ ಭಾರತದ ನಂತರದ ಸ್ಥಾನದಲ್ಲಿದೆ.

ಯುರೋಪು ಮತ್ತು ಅಮೇರಿಕಾಗಳು ಹೈನುಗಾರಿಕೆಗೆ ಅಪಾರ ಪ್ರಮಾಣದ ಸಹಾಯಧನವನ್ನು ನೀಡುತ್ತವೆ. ಬಹುದೊಡ್ಡ ಫಾರ್ಮುಗಳಲ್ಲಿ ಹೈನುಗಾರಿಕೆಯನ್ನು ಈ ದೇಶಗಳಲ್ಲಿ ಮಾಡಲಾಗುತ್ತದೆ. ಭಾರತದಲ್ಲಿ ಇದು ಸಣ್ಣ ಅತಿ ಸಣ್ಣ ರೈತರ ಮತ್ತು ಕೃಷಿ ಕೂಲಿಕಾರರ ಕ್ಷೇತ್ರ. ಸಹಾಯಧನಗಳೂ ಇಲ್ಲ. ಆದ್ದರಿಂದ ಈ ಯಶಸ್ಸಿನ ಶ್ರೇಯಸ್ಸು ನಮ್ಮ ದೇಶದ ಸಣ್ಣ ರೈತ, ಅತಿ ಸಣ್ಣ ರೈತ ಮತ್ತು ಕೃಷಿ ಕೂಲಿಕಾರರಿಗೆ ಸೇರಬೇಕು.

ಯುರೋಪು 154 ದಶಲಕ್ಷ ಟನ್ನುಗಳಷ್ಟು ಹಾಲು ಉತ್ಪಾದಿಸಿದರೆ ಭಾರತ 100 ದಶಲಕ್ಷ ಟನ್ನುಗಳಷ್ಟು ಹಾಲು ಉತ್ಪಾದಿಸುತ್ತದೆ. ಅಮೇರಿಕಾ 84 ದಶಲಕ್ಷ ಟನ್ನುಗಳಷ್ಟು ಹಾಲು ಉತ್ಪಾದಿಸುತ್ತದೆ.

ಭಾರತದ ರೈತರ ಸಾಧನೆ ಬಹುದೊಡ್ಡದು. ಸರ್ಕಾರದ ನೆರವು ಬಹಳ ಕಡಿಮೆ ಎಂಬುದನ್ನು ಗಮನದಲ್ಲಿಟ್ಟುಕೊಂಡರೆ ಭಾರತದ ರೈತರ ಸಾಧನೆ ಇನ್ನೂ ದೊಡ್ಡದಾಗಿ ಕಾಣುತ್ತದೆ. ಉತ್ಪಾದನೆ ಹೆಚ್ಚಿದ್ದರೂ ಗುಣಾತ್ಮಕ ಸಮಸ್ಯೆ ಭಾರತದ ಹೈನುಗಾರಿಕೆಯನ್ನು ಬಹಳವಾಗಿ ಕಾಡಿದೆ. ಸಂಸ್ಕರಣದ ಅನುಕೂಲವಿಲ್ಲದೆ ದೊಡ್ಡ ಪ್ರಮಾಣದ ಉತ್ಪಾದನೆ ಹಾಳಾಗುತ್ತಿದೆ. ಅಲ್ಲದೆ ಸ್ವಚ್ಛತೆಯ ಕೊರತೆಯೂ ಇದೆ. ಈ ಎಲ್ಲದರಲ್ಲಿ ಭಾರತದ ಸರ್ಕಾರ ಈ ಉದ್ಯಮಕ್ಕೆ ಅವಶ್ಯ ಪ್ರಾಮುಖ್ಯತೆ ನೀಡಿಲ್ಲದೇ ಇರುವುದು ಸ್ಪಷ್ಟವಾಗಿ ಕಾಣುತ್ತದೆ.ಇದು ಜನಸಾಮಾನ್ಯರ ಉದ್ಯಮವಾದ್ದರಿಂದ ಭಾರತದ ಆಳುವ ವರ್ಗ ಈ ಉದ್ಯಮವನ್ನು ನಿರ್ಲಕ್ಷಿಸಿರುವುದು ಎದ್ದು ಕಾಣುತ್ತದೆ.

ಇಲ್ಲಿಯವರೆಗೆ ಪ್ರಪಂಚದಾದ್ಯಂತ ಹೈನು ಉತ್ಪನ್ನದ ಬೆಲೆಗಳು ಕಡಿಮೆಯೇ ಇತ್ತು. ಈಗ ಜಗತ್ತಿನಾದ್ಯಂತ ಹಾಲಿನ ಪುಡಿಯ ಬೆಲೆಗಳು ಗಗನಕ್ಕೇರುತ್ತಿವೆ. ಆದ್ದರಿಂದಲೇ ಬಂಡವಾಳಗರ ದೃಷ್ಟಿ ಈ ಉದ್ಯಮದತ್ತ ಹರಿಯತೊಡಗಿದೆ. ಈ ಉತ್ಪನ್ನಗಳನ್ನು ರಫ್ತು ಮಾಡಲೇಬೇಕೆಂಬ ಕೂಗೂ ಕೇಳಿ ಬರುತ್ತಿದೆ. ರಣಹದ್ದುಗಳಿಗೆ ರಕ್ತದ ವಾಸನೆ ಬೇಗಬಡಿವಂತೆ ಬಂಡವಾಳರಿಗೆ ಲಾಭದ ವಾಸನೆ ಬೇಗ ಬರುತ್ತದೆ.

ಈಗ ಜಾಗತಿಕ ಮಾರುಕಟ್ಟೆಯಲ್ಲಿ ನಮ್ಮ ಹಾಲು ಉತ್ಪನ್ನಗಳನ್ನು ಮಾರಾಟ ಮಾಡಿ ಲಾಭಗಳಿಸುವ ಉದ್ದೇಶ ಅವರದು. ಆದರೆ ಹೈನು ಉತ್ಪನ್ನಗಳ ರಫ್ತು ಪ್ರಾರಂಭವಾದರೆ ಭಾರತದಲ್ಲಿ ಈ ಉತ್ಪನ್ನಗಳ ಬೆಲೆಗಳೂ ಏರತೊಡಗುತ್ತವೆ. ಮೊದಲೇ ಪೌಷ್ಠಿಕಾಂಶಗಳ ಕೊರತೆಯಿಂದ ಬಳಲುವ ದೇಶದ ಬಡಜನತೆ ಅದರಲ್ಲಿಯೂ ನಿರ್ದಿಷ್ಟವಾಗಿ ಮಕ್ಕಳ ಬೆಳವಣಿಗೆಗೆ ಅತ್ಯಗತ್ಯವಾದ ಆಹಾರದ ಅನುಕೂಲವನ್ನು ಕಳೆದುಕೊಳ್ಳಬೇಕಾಗುತ್ತದೆ. ಹಾಗೆ ಹಾಲಿನ ರಫ್ತು ಜನರ ಬದುಕಿನಲ್ಲಿ ಹಾಲಾಹಲವೆಬ್ಬಿಸುತ್ತದೆ.

ಲಾಭ ಪಿಪಾಸೆಯ ಬಂಡವಾಳಗರಿಗೆ ಇಂತಹ ಹಾಲಾಹಲದ ಬಗ್ಗೆ ಏಕೆ ಗಮನ? ಲಾಭದತ್ತಲೇ ಅವರ ಗಮನ.



ಜ್ಯೂಲಿಯಟ್‌ಗಳಿಂದಲೇ ರೋಮಿಯೋಗೆ ಜ್ಞಾನೋದಯ

ಓದು ಬರಹ ಕಲಿತ ದಿಲೀಪ್ (ದಿಲೀಪ್ ಪೈ) ಎಂಬ ಯುವಕ ಊರೂರು ಸುತ್ತುವುದು, ಮನೆಯಲ್ಲಿ ತಂದೆ ತಂಗಿ ಹತ್ತಿರ ಪ್ಯಾಕೇಟ್ ಮನಿ ಎಂದು ದುಡ್ಡು ಪಡೆದು ಖರ್ಚು ಮಾಡುವುದು ಮಾಡುತ್ತಿರುತ್ತಾನೆ. ದಿಲೀಪ್ ಕೆಲಸಕ್ಕಾಗಿ ಇಂಟರ್ವಿವ್‌ಗೆ ಹೋಗಿ ಕೆಲಸ ಮಾಡಲು ಇಷ್ಟವಿಲ್ಲದೆ ಹೊರ ಬರುತ್ತಾನೆ. ತರಲೆ ಸ್ನೇಹಿತರ ಸಹವಾಸದಿಂದ ಅವನಿಗೆ 'ರೋಡ್ ರೋಮಿಯೊ' ಎಂಬ ಅಡ್ಡ ಹೆಸರು.

ದಿಲೀಪ್‌ನ ಸ್ನೇಹಿತ ಇದೇ ರೀತಿ ತರಲೆಯಾಗಿದ್ದವನು ಬದಲಾಗಿ ಒಬ್ಬ ಆಟೋ ಡ್ರೈವರ್ ದುಡಿದು ಜೀವನ ನಡೆಸುತ್ತಿರುತ್ತಾನೆ. ಅವನು ಒಬ್ಬ ಹುಡುಗಿಯನ್ನು ಪ್ರೀತಿಸುತ್ತಿದ್ದು ದಿಲೀಪ್ ಮತ್ತು ಸ್ನೇಹಿತರು ಆ ಪ್ರೇಮಿಗಳನ್ನೂ ರಿಜಿಸ್ಟರ್ ಮದುವೆ ಮಾಡಿಸುತ್ತಾರೆ.

ಒಂದು ಹೋಟೆಲ್‌ನಲ್ಲಿ ದಿಲೀಪ್‌ಗೆ ಮೊಬೈಲ್ ಅದಲು ಬದಲಿಯಾಗಿದ್ದರಿಂದ ಮೂಲಕ ಅಂಜಲಿ (ಅಶಿತಾ) ಎಂಬ ಹುಡುಗಿಯ ಪರಿಚಯವಾಗುತ್ತದೆ. ಅವಳನ್ನು 'ಪ್ರೇಮಿಸಲು' ಶುರು ಮಾಡುತ್ತಾನೆ. ಸ್ನೇಹಿತನ ಮದುವೆಯ ದಿನದಿಂದ ಇಬ್ಬರಲ್ಲೂ ಪ್ರೀತಿ ಹುಟ್ಟುತ್ತದೆ.

ರಾಮಣ್ಣ (ಅವಿನಾಶ್) ತನ್ನ ಮಗ ದಿಲೀಪ್ ಬದಲಾಗಬೇಕೆಂದು ಎಷ್ಟು ಬೈದರು ಹೊಡೆದರು ದಿಲೀಪ್ ತನ್ನ ತರಲೆ ಬುದ್ಧಿ ಬಿಡುವುದಿಲ್ಲ.

ಅಂಜಲಿಗೆ ಅವರ ತಂದೆ ಒಂದು ದಿನ ಮದುವೆಯ ಪ್ರಸ್ತಾಪ ಮಾಡಿ, ಯಾರನ್ನಾದರೂ ಇಷ್ಟಪಟ್ಟಿದ್ದರೆ ಹೇಳು ಅವರಿಗೆ ಮದುವೆ ಮಾಡುವೆ



ಎಂದರೂ ಅಂಜಲಿ ಹೇಳುವುದಿಲ್ಲಾ. ಒಂದು ದಿನ ದಿಲೀಪ್ ಮತ್ತು ಅಂಜಲಿ ಪಾರ್ಕ್‌ನಲ್ಲಿ ಭೇಟಿಯಾದಾಗ ಅವನ 'ರೋಡ್ ರೋಮಿಯೋ' ತನದ ಬಗ್ಗೆ, ದುಡಿಯದೆ ತಿಂದು ತಿರುಗುವ ಬಗ್ಗೆ, ತಿಳಿಸುತ್ತಾ ಸಾರ್ವಜನಿಕವಾಗಿ ಕಪಾಳಕ್ಕೂ ಹೊಡೆದು ನಿನೊಬ್ಬ ಉದ್ಯೋಗಸ್ಥ ಮನೂಷ್ಯನಾಗಿ ಬಾ ನಾನು ಮದುವೆಯಾಗುತ್ತೇನೆ ಎಂದು ಹೇಳಿ ಹೊರಟು ಹೋಗುತ್ತಾಳೆ.

ದಿಲೀಪ್ ಆಗ ಜೀವನದ ಮೌಲ್ಯದ ಬಗ್ಗೆ, ತಂದೆ-ತಾಯಿ ಅನುಭವಿಸುವ ಕಷ್ಟಗಳ ಬಗ್ಗೆ ಅರ್ಥ ಮಾಡಿಕೊಂಡು ಕೆಲಸಕ್ಕಾಗಿ ಅಲೆದು ಒಂದು ಸೋಫ್ ಫ್ಯಾಕ್ಟರಿಯಲ್ಲಿ ಸೇಲ್ಸ್ ಮ್ಯಾನ್ ಕೆಲಸಕ್ಕೆ ಸೇರಿ ಬೀದಿ ಬೀದಿ ಅಲೆದು ಒಂದು ತಿಂಗಳ ಸಂಬಳ ಪಡೆಯುತ್ತಾನೆ. ಆ ಪರಿಶ್ರಮದಿಂದ ಉನ್ನತ ಹುದ್ದೆ ಪಡೆದುಕೊಳ್ಳುತ್ತಾನೆ.

ಈ ನಡುವೆ ದಿಲೀಪ್ ಬೆಳವಣಿಗೆಯು ಅವರ ಮನೆ ಮತ್ತು ಅಂಜಲಿಗೆ ಬಹಳ ಸಂತೋಷವಾಗುತ್ತದೆ. ಅಂಜಲಿಯು ಅಕ್ಕನ ನಿಧನದಿಂದಾಗಿ ಅವರ ಕುಟುಂಬವು ಸಣ್ಣ 'ಮಗುವಿನ ತಾಯಿತನ'ಕ್ಕಾಗಿ ಎರಡನೇ ಮದುವೆಗೆ ಮುಂದಾಗುತ್ತಾರೆ. ದಿಲೀಪ್ ಸಹ ಅನಿವಾರ್ಯವಾಗಿ ಸಹಕರಿಸುತ್ತಾನೆ. ಅಂಜಲಿಯ ಭಾವನಿಗೆ ಪ್ರೀತಿಯ ವಿಷಯ ತಿಳಿದು ಮದುವೆ ನಿರಾಕರಿಸುತ್ತಾನೆ. ಕಡೆಯಲ್ಲಿ ದಿಲೀಪ್ ಒಂದಾಗುತ್ತಾರೆ.

ಸಂಗೀತದ ವಿಪರೀತ ಅಬ್ಬರ ಮತ್ತು ನಿ ದೃಶ್ಯ ಬದಲಾವಣೆಯಿಂದಾಗಿ ಕೆಲವು ಹಾ ಏನೆಂಬುದೇ ಅರ್ಥವಾಗುವುದಿಲ್ಲ. ಹಾಡಿನಲ್ಲಿ ಮನೆಯ ಹೆಣ್ಣು ಮಕ್ಕಳು ಬಂದಿರುವುದರಿಂದ ರೋಡಿಗೊಬ್ಬ ರೋಮಿ ಹುಟ್ಟಬೇಕು ಎಂಬ ಸಂದೇಶ ಇದೆ.

ಈ ಚಿತ್ರದ ಕಥೆ ಹೇಳಿಬಿಟ್ಟರೆ ಸಾಕು, ವಿಮರ್ಶೆಯೇನೂ ಬೇಕಾಗೇ ಇಲ್ಲ. ಪ್ರೀ ಹುಡುಗಿ 'ಉದ್ಯೋಗಸ್ಥನಾಗು' ಎಂದು ಹೊಡೆದಾಗಲೇ ಹುಡುಗನಿಗೆ ಜ್ಞಾನೋ ದುಡಿಯಿರಿ, ಜವಾಬ್ದಾರಿಯಿಂದಿರಿ ಎಂಬು ಚಿತ್ರದ ಸಂದೇಶವೇ? ನೋಡುಗರಿಗೆ ಏನು ಅದರಲ್ಲಿ ಬೀದಿ ತಿರುಗುವ 'ಪಡ್ಡೆ' ಹುಡುಗರು ಈ ಸಂದೇಶವನ್ನು ಗಮನಿಸುತ್ತಾರೆಯೇ?? ಅವರ ಮನಸ್ಸಿಗೆ ನಾಟುವಂತಿದೆಯೇ?

ಅಥವಾ ಅವರು ಹಂಸಕ್ಷೀರ ನ್ಯಾಯದಂ 'ಐಕಾನ್' ರೋಡ್ ರೋಮಿಯೋನನ್ನು ಸ್ವೀಕರಿಸಿ, ಸಂದೇಶವನ್ನು ಚಿತ್ರ ಮಂದಿ ಬಿಡುತ್ತಾರೆಯೇ? ಇದು ನಮ್ಮ ಮುಂದಿರು

ಅಮೇರಿಕಾದ ಪಾತಕಗಳಲ್ಲಿ ಸತ್ತವರಿಗಾಗಿ ಮೌನ ಆಚರಿಸುವುದಾದರೆ ಎಷ್ಟು ನಿಮಿಷ, ಎಷ್ಟು ದಿನ ಮೌನ ಆಚರಿಸಬೇಕಾಗುತ್ತದೆ?
'ಬಾಂಬ್ ವಿರೋಧಿ ಪಾಕಿಸ್ಥಾನಿ ಕವಿತೆಗಳು' ಕವನ ಸಂಕಲನದ ಈ ಕವನವು ಈ ಮೇಲಿನ ಪ್ರಶ್ನೆಯನ್ನು ಕೇಳುತ್ತಿರುವಂತಿದೆ. ಕವಿ ಯುಸೂಫ್ ಮೀರ್‌ವಾಲೆ ಸಾಹಿರ್. ಅನುವಾದ ಡಾ: ಸರಜೂ ಕಾಟ್ಕರ್ ಕವನ ಸಂಕಲನ ಪ್ರಕಟಿಸಿದವರು, ಲೋಹಿಯಾ ಪ್ರಕಾಶನ, ಬಳ್ಳಾರಿ.

ಸತ್ಯ ಮನವರಿಕೆಯಾಗಿದ್ದರೆ...

ಇಲ್ಲಿ ಸ್ಫೋಟಿಸಿದ ಬಾಂಬ್‌ಗಳು
ನೇರವಾಗಿ ಅಮೇರಿಕೆಯಿಂದಲೇ ಹಾರಿ
ಬಂದಿದ್ದವು

ಒಂದು ತಾಸಿನ ಈ ಮೌನದಲಿ
ಕೇವಲ ಒಂದು ನಿಮಿಷ ಮಾತ್ರ
ಸೆಪ್ಟೆಂಬರ್ 11 ರ ದಾಳಿಗೆ ನಾವು ಇಟ್ಟೆವು

ಉಳಿದ 59 ನಿಮಿಷಗಳು
ಇಡೀ ಜಗತ್ತಿನಲ್ಲಿ ಅಮೇರಿಕೆ
ನಡೆಸಿದ ದಾಳಿಗಾಗಿ





ನಿಮಗಿನ್ನೂ ವ್ಯಥೆಯಾಗದಿದ್ದರೆ
ವಿಯೆಟ್ನಾಂನಲ್ಲಿ
ಅಮೇರಿಕೆ ನಡೆಸಿದ

ಕತ್ತಲರಾತ್ರಿಗಾಗಿ
ಕನಿಷ್ಠ ಒಂದು ತಾಸಾದರೂ
ಮೌನದಲ್ಲಿ ಮಿಡಕಲೇ ಬೇಕಾಗುತ್ತದೆ
ಇಲ್ಲಿ ಅಮೇರಿಕೆಯ
ಗುಂಡು ಬಂದೂಕುಗಳು



ಪ್ರತಿಯೊಬ್ಬರ
ಎದೆಯನ್ನು
ಹೊಕ್ಕಿದ್ದವು

1989ರಲ್ಲಿ
ಪನಾಮಾದ
20,000
ನಾಗರೀಕರನ್ನು
ಅಮೇರಿಕನ್ ಸೈನಿಕರು
ಕೊಂದ ಜನರಿಗಾಗಿಯೂ ಒಂದೆರಡು
ಕ್ಷಣಗಳು
ಇರಾಕ್, ಕ್ಯೂಬಾ ಮೇಲೆ ಹೇರಿದ
ನಿರ್ಬಂಧನೆಯಲ್ಲಿ ಸತ್ತ ಸಾವಿರಾರು
ಚಿಕ್ಕಪುಟ್ಟ ಮಕ್ಕಳಿಗಾಗಿ

ಚಿಲಿ, ಅರ್ಜೆಂಟಿನಾ, ಉರುಗ್ವೇ,
ಬೊಲಿವಿಯಾ ಗ್ವಾಟೆಮಾಲಾ,
ಎಲ್‌ಸಾಲ್ವಾಡೋರ್ ಇತ್ಯಾದಿ ಇತ್ಯಾದಿ
ದೇಶಗಳಲ್ಲಿ ಅಮೇರಿಕಾ ನಡೆಸಿದ
ಗೃಹ ಕಲಹದಲಿ ಸತ್ತ
ಲಕ್ಷ ಲಕ್ಷ ನಿರಪರಾಧಿ ನಾಗರಿಕರಿಗಾಗಿ



1991 ರಲ್ಲಿ ಇರಾಕ್ ಮೇಲೆ ನಡೆದ
ಅಮೇರಿಕೆ ದಾಳಿಯಲ್ಲಿ 18,
ನಾಗರೀಕರು

ಸತ್ತಿದ್ದನ್ನು ಸಿಎನ್‌ಎನ್ ತೋರಿಸಿದ್ದನ್ನ
ಜನರಾರೂ ಇನ್ನೂ ಮರೆತಿರಲಿಕ್ಕಿಲ್ಲ



ಅಮೇರಿಕಾಗೆ ಈಗಷ್ಟೇ
ಗೊತ್ತಾಗಿದೆ; ತಾನು ನಡೆಸಿದ
ದಾಳಿಯನ್ನೇ ಹೋಲುವ
ದಾಳಿಗಳು ತನ್ನ ಮೇಲೂ
ನಡೆಯಬಹುದೆಂದು
ಜಗತ್ತಿನ ನಾನಾ ಕಡೆ ತಾನು ಬೆಳೆದ
ಹಣ್ಣುಗಳ
ರುಚಿ ತಾನೇ ಈಗ
ತಿನ್ನಬೇಕಾಗಿರುವ ಸತ್ಯವನ್ನು

ಕವಿ
ಯುಸೂಫ್ ಮೀರ್‌ವಾಲೆ ಸಾಹಿ
ಅನು : ಡಾ: ಸರಜೂ ಕಾ

JANASHAKTHI KANNADA VARA PATRIKE : Printed by **G.N.NAGARAJ**, No 12. 18th Cross, S.R.Nagar, BANGALORE-560027 Published by: **G.N.NAGARAJ**, No 12. 18th Cross, S.R.Nagar, BANGALORE-560027, Karnataka on behalf of / owned by **COMMUNIST PARTY OF INDIA (MARXIST)** and **Printed at : Kriya Prakashana**, 12. 18th Cross, S.R.Nagar, BANGALORE - 560 027 Karnataka (State) and Published at BANGALORE No 12.18th Cross, S.R.Nagar, BANGALORE-560027 Editor **S.Y.GURURSHANTH**, No12. 18th Cross, S.R.Nagar, BANGALORE - 560027
Editor : **S.Y.GURUSHANTH**